
ಸಂಪುಟ 24 ಸಂಚಿಕೆ 50
ಡಿಸೆಂಬರ್ 15, 2002 ಬೆಲೆ ರೂ. 3.00

ಐಕ್ಯರಂಗ


ದುಡಿಯುವ ಜನರ ಪ್ರಾಣ ಮಿತ್ರ



ಬಾಬ್ರಿ ಮಸೀದಿ ಧ್ವಂಸದ ಹತ್ತು ವರ್ಷಗಳು

ವಿಶೇಷ ಲೇಖನಗಳು

ಅಯೋಧ್ಯಾದಿಂದ-ಗುಜರಾತ್‌ವರೆಗೆ



ನಾಗಪ್ಪನವರ ಹತ್ಯೆ : ರಾಚಿದ ಪ್ರಶ್ನೆಗಳು ?



ಖಾಸಗಿ ಬಸ್ ಮಾಲೀಕರ ಸುಲಿಗೆ ಭುಗಿಲೆದ್ದ ಹೋರಾಟ




ಶ್ರಮಜೀವಿಗಳ ನಾಯಕ

ಅಸ್ರಣ್ಣ ಇನ್ನಿಲ್ಲ

ರೈಲು ನಿಲ್ದಾಣ - ಚಟುವಟಿಕೆಯ ಕೇಂದ್ರ ತಾಣ

ವಿಮೋಚನಾ ಸಮರದಲ್ಲಿ....



ಮೇಜರ್ ಜಯಪಾಲ್ ಸಿಂಗ್

ಆತ್ಮಕಥನ 7



ಹಿಂದಿನ ಸಂಚಿಕೆಯಲ್ಲಿ ಅತೃಪ್ತಿಗೆ ಸಂಘಟಿತ ಸ್ವರೂಪ ಹಾಗೂ ನಿರ್ದೇಶನ,ರಾಷ್ಟ್ರೀಯ ಪರಿಸ್ಥಿತಿಯ ಸ್ಫೋಟಕ ಸ್ಥಿತಿ, 1930 ರಲ್ಲಿ ಚಂದರ್ ಸಿಂಗ್ ಗಢವಾಲೆ ಮತ್ತಿತರರು ಎಬ್ಬಿಸಿದ ಬಂಡಾಯದ ಗೊಣಗಾಟ, ನಾಲ್ವರ ಸಮಿತಿಯೊಂದರ ರಚನೆ, ಭಾರತೀಯ ಮತ್ತು ಬ್ರಿಟಿಷ್ ಅಧಿಕಾರಿಗಳು ಪ್ರತ್ಯೇಕವಾಗಿ ಕುಳಿತು ತಿಂದು ಕುಡಿಯುವ ಹಾಗೂ ಪರಸ್ಪರರನ್ನು ದೂಷಿಸುವ ಬಗೆ ಹಾಗೂ ಜಯಪಾಲ್ ಸಿಂಗರು ಪೂರ್ಣ ಲೆಫ್ಟಿನೆಂಟ್ ಆದ ಬಗ್ಗೆ ಓದಿರುವಿರಿ. ಮುಂದೆ...

ಕನ್ನಡಕ್ಕೆ: **ವಿಶ್ವ ಕುಂದಾಪುರ**

ನಾವೀಗ ನನ್ನ ಕತೆಯನ್ನು ಮೊಟಕುಗೊಳಿಸಬೇಕಾಗಿದೆ. ಸೇನಾ ಜೀವನದ ಎಲ್ಲಾ ಘಟನಾವಳಿಗಳು, ಭಾರತೀಯ ಸಶಸ್ತ್ರ ಪಡೆಗಳ ಮೇಲೆ ಬೀರಿದ ಪ್ರಭಾವ, ಕ್ರಾಂತಿಕಾರಿ ಪಥದಲ್ಲಿ ಸಾಗುವಂತೆ ಮಾಡಿದ್ದು ಇವೆಲ್ಲವನ್ನೂ ಇಲ್ಲಿ ವಿವರಿಸಲು ಆಗದು. ಅದಕ್ಕಾಗಿ ಓದುಗರು ನನ್ನ ಪುಸ್ತಕ ಪ್ರಕಟವಾಗುವವರೆಗೆ ಕಾಯಬೇಕಾಗುತ್ತದೆ. (ಕಾ.ಜೈಪಾಲ್‌ಸಿಂಗರ ಪುಸ್ತಕ ಪ್ರಕಟವಾಗುವ ಮುಂಚಿನ ಟಿಪ್ಪಣಿಯಿದು -ಸಂ) ನಮ್ಮ ಕ್ರಾಂತಿಕಾರಿ ಶಿಕ್ಷಣ ಮತ್ತು ಸಶಸ್ತ್ರ ಪಡೆಗಳ ಒಳಗಡೆ ಸಂಘಟನೆ ರೂಪುಗೊಳ್ಳಲು ಕಾರಣವಾದ ವಿದ್ಯಮಾನಗಳಿಗೆ ನೇರ ಸಂಬಂಧ ಕಲ್ಪಿಸುವ ಬಿಡಿ ಬಿಡಿ ಘಟನೆಗಳನ್ನಷ್ಟೇ ನಾನಿಲ್ಲಿ ವಿವರಿಸುತ್ತೇನೆ.

ನಾವೀಗ ನಮ್ಮ ಸೈನಿಕರ ಜತೆಗಿದ್ದೇವೆ. ತನ್ನ ಇತರ ಮೂವರು ಸಹೋದ್ಯೋಗಿಗಳನ್ನು ದೆಹಲಿ, ದೇವಲಾಲಿ ಮತ್ತು ಕರಾಚಿಯಲ್ಲಿ ನಿಯೋಜಿಸಲಾಗಿತ್ತು. ನಮ್ಮ ಸಂಘಟನಾತ್ಮಕ ಯೋಜನೆಗಳನ್ನು ಜಾರಿ ಮಾಡಲು ನಾವು ಸಿದ್ಧವಾಗಿದ್ದೆವು. ಆದರೆ ಸಂಚಾಲಕನಾದ ನಾನು ಅಂಬಾಲಾದಲ್ಲಿ ತಕ್ಷಣವೇ ಒಂದು ಸಂಪರ್ಕ ಕೇಂದ್ರವನ್ನು ಸ್ಥಾಪಿಸಬೇಕಾಗಿತ್ತು.

ನನ್ನ ತಲೆಯಲ್ಲಿರುವ ಯೋಜನೆಯನ್ನು ಜಾರಿಗೊಳಿಸುವ ಉದ್ದೇಶದಿಂದ ಅಂಬಾಲಾ ಕಟ್ಟೊನ್ಮೆಂಟ್ ರೈಲ್ವೆ ನಿಲ್ದಾಣದ ಬಳಿಯಿರುವ ಮೆಟ್ರೊಪೋಲ್ ಹೋಟೇಲ್‌ನಲ್ಲಿ ನಾನು ಇಳಿದುಕೊಂಡೆ. ಎಲ್ಲರಿಗೂ ಆಶ್ಚರ್ಯ. ಯಾಕೆಂದರೆ ಸಾಮಾನ್ಯವಾಗಿ ಅಧಿಕಾರಿಗಳು ಪ್ಯಾರಿಸ್ ಹೋಟೇಲ್‌ನಲ್ಲಿ ತಂಗುತ್ತಿದ್ದರು.

ನಾನು ಅದನ್ನು ಬಿಟ್ಟು ಬೇರೆಯದನ್ನು ಆಯ್ಕೆ ಮಾಡಿಕೊಂಡಿದ್ದು ಬ್ರಿಟಿಷ್ ಅಧಿಕಾರಿಗಳಿಂದ ದೂರವಿರಬೇಕು ಹಾಗೂ ರೈಲ್ವೆ ನಿಲ್ದಾಣದ ಹತ್ತಿರ ವಾಸಿಸಬೇಕು ಎನ್ನುವುದು ನಮ್ಮ ಈ ಆಯ್ಕೆಯ ಉದ್ದೇಶವಾಗಿತ್ತು. ಎಲ್ಲಕ್ಕಿಂತ ಹೆಚ್ಚಾಗಿ ಮೆಟ್ರೊಪೋಲ್ ಒಂದು ಸಣ್ಣ ಜಾಗವಾಗಿದ್ದು ಸ್ಥಳ ಪ್ರಶಾಂತವಾಗಿತ್ತು. ಪೋಲೀಸರ ಶಾಮೀಲಿನೊಂದಿಗೆ ಕರೆತರಲಾಗುತ್ತಿದ್ದ ಆಂಗ್ಲೋ - ಇಂಡಿಯನ್ ಹುಡುಗಿಯರು ಅಲ್ಲಿ ಅಸಹನೀಯ ಮೌನದೊಂದಿಗೆ ಇರುತ್ತಿದ್ದರು. ಈ ದುರದೃಷ್ಟ ಹುಡುಗಿಯರನ್ನು ಕರೆತರುತ್ತಿದ್ದ ದಲ್ಲಾಳಿಗಳು ಮತ್ತು ಟಿಪ್ಸ್ ಪಡೆಯದ ಬೇರರ್‌ಗಳ ಪರದಾಟ ಮಾತ್ರವೇ ಆ ಮೌನವನ್ನು ಮುರಿಯುತ್ತಿತ್ತು.

ಅಂಚೆ ಪತ್ರಗಳನ್ನು ಭಾರೀ ಸೆನ್ಸಾರ್‌ಗೆ ಒಳಪಡಿಸಲಾಗುತ್ತಿತ್ತು. ಹೀಗಾಗಿ ಪತ್ರವ್ಯವಹಾರ, ನಡೆಸುವ ಪ್ರಶ್ನೆಯೇ ಇರಲಿಲ್ಲ. ಪ್ರತಿಯೊಂದು ಪತ್ರ ಅಥವಾ ದಾಖಲೆಯನ್ನು ವ್ಯಕ್ತಿಗಳ ಮೂಲಕವೇ ಕಳಿಸಬೇಕೆಂದು ಸಮಿತಿ ನಿರ್ಧರಿಸಿತ್ತು.

ಅಂಬಾಲಾ ರೈಲ್ವೆ ಸಂಪರ್ಕಗಳ ಒಂದು ಕೇಂದ್ರವಾಗಿತ್ತು. ಮುಂಬಯಿ, ಕಲ್ಕತ್ತಾ ಮತ್ತು ಪೇಷಾವರಂಗಳಿಗೆ ಪ್ರಮುಖ ರೈಲುಗಳು ಇಲ್ಲಿಂದಲೇ ಹಾದುಹೋಗುತ್ತಿದ್ದವು. ಪ್ರಯಾಣಿಸುವ ಅಧಿಕಾರಿಗಳು ಅಥವಾ ಸೈನಿಕರು ನಿಲ್ದಾಣದಲ್ಲೇ ಅಂಚೆ ವಿನಿಮಯ ಮಾಡಿಕೊಳ್ಳಲು ಸಾಧ್ಯವಾಗುವುದಾದರೆ ಅದರಿಂದ ಆಗುವ ಅನುಕೂಲ ಅಪಾರವಾಗಿತ್ತು. ನಾನು ಅಂಥ ಅನುಕೂಲದ ಹುಡುಕಾಟದಲ್ಲಿದ್ದೆ. ಆ ನಿಟ್ಟಿನತ್ತ ಮೊದಲ ಹೆಜ್ಜೆಯಾಗಿ ಹೊಟೇಲ್ ಮೆಟ್ರೋಪೋಲ್ ಆರಿಸಿಕೊಂಡೆ. ಅದು ರೈಲು ನಿಲ್ದಾಣದಿಂದ ಕೂಗಳತೆ ದೂರದಲ್ಲಿತ್ತು.

ನಾನು ರೈಲ್ವೆ ನಿಲ್ದಾಣದಲ್ಲಿ ಅಡ್ಡಾಡಿ ಪರಿಶೀಲಿಸಿದೆ. ಕಿಲ್ನರ್ ಬಾರ್ ಮ್ಯಾನೇಜರ್ ಮತ್ತು ಇಬ್ಬರು ಮಹಿಳಾ ಟಿಕೆಟ್ ಕಲೆಕ್ಟರ್‌ಗಳು ನನ್ನ ಗಮನ ಸೆಳೆದರು. ಅವರ ಜತೆ ಸ್ನೇಹ ಬೆಳೆಸಿದರೆ ಸಂಕೇತ ಭಾಷೆಯಲ್ಲಿರುತ್ತಿದ್ದ ಟಿಪ್ಪಣಿಗಳನ್ನು ವಿನಿಮಯಕ್ಕೆ ಸಹಾಯವಾಗಬಹುದೆಂದು ಯೋಚಿಸಿದೆ.

ಬುಟ್ಟಿಗೆ ಬಿದ್ದ ತರುಣಿಯರು...

ನಾನು ಇಲ್ಲಿಗೆ ಬಂದು ಒಂದು ತಿಂಗಳಾಗಿತ್ತು. ರೈಲ್ವೆ ನಿಲ್ದಾಣದಲ್ಲಿ ಪಂಜಾಬ್ ರೆಜಿಮೆಂಟ್ ಕೇಂದ್ರದ ಆರು ಯುವ ಅಧಿಕಾರಿಗಳನ್ನು ಸಂಪರ್ಕಿಸಿದೆ. ನಮ್ಮ ಜತೆ ಸೇರಲು ಅವರು ಒಪ್ಪಿಕೊಂಡರು. ಅವರಿಗೆ ಗೋಪ್ಯತೆ ಹಾಗೂ ನಿಷ್ಠೆಯ ಪ್ರಮಾಣ ವಚನ ಬೋಧಿಸಲಾಯಿತು.

ಅವರ ಪೈಕಿ ಆರೋಗ್ಯಪೂರ್ಣ ಹಾಗೂ ಸುಂದರರಾಗಿದ್ದ ಇಬ್ಬರು ಅಧಿಕಾರಿಗಳಿಗೆ ವಿವರಿಸಿ ಹೇಳಿ ಆ ಇಬ್ಬರು ಟಿಕೇಟ್ ಕಲೆಕ್ಟರ್ ತರುಣಿಯರನ್ನು ಒಲಿಸಿಕೊಳ್ಳಲು ತಿಳಿಸಿದೆ. ಸ್ವಲ್ಪ ಮನವರಿಕೆ ಮಾಡಿಕೊಟ್ಟ ಮೇಲೆ, ತಾಯ್ನಾಡಿನ ಹಿತದೃಷ್ಟಿಯಿಂಧ ಹಾಗೆ ಮಾಡಲು ಅವರು ಒಪ್ಪಿಕೊಂಡರು. ಕಿಲ್ನರ್ ಬಾರ್ ಮ್ಯಾನೇಜರ್ ವಿಚಾರವನ್ನು ನಾನು ನೋಡಿಕೊಳ್ಳಲು ನಿರ್ಧರಿಸಿದೆ.

ಆ ಇಬ್ಬರು ಹುಡುಗಿಯರ ಹೃದಯಗೆಲ್ಲಲು ಈ ಇಬ್ಬರು ತರುಣ ದೇಶಪ್ರೇಮಿ ಅಧಿಕಾರಿಗಳಿಗೆ ಹೆಚ್ಚು ಸಮಯ ಬೇಕಾಗಲಿಲ್ಲ.

"ಲೆಫ್ಟಿನೆಂಟ್ ವರ್ಮಾ..... ಈಕೆ ನನ್ನ ಗೆಳತಿ" ಒಬ್ಬಾತ ತನ್ನ 'ಪ್ರಿಯತಮೆ'ಯನ್ನು ನನಗೆ ಪರಿಚಯ ಮಾಡಿಕೊಟ್ಟ, ಕಿಲ್ನರ್‌ಬಾರ್‌ನಲ್ಲಿ ಅದಾದ ಎರಡು ವಾರಗಳಲ್ಲಿ ಇನ್ನೊಬ್ಬನೂ ತನ್ನ 'ಪ್ರೇಯಸಿ'ಯನ್ನು ಪರಿಚಯಿಸಿದ. ತನ್ನ 'ಪ್ರೇಯಸಿ'ಯ ಕೈಹಿಡಿದುಕೊಂಡು ನನ್ನತ್ತ ಓಡೋಡಿಬಂದ ಆತ "ಹೇ ವರ್ಮಾ, ಬಾ ಇಲ್ಲಿ, ನನ್ನ ಗೆಳತಿಯನ್ನು ಭೇಟಿ ಮಾಡು' ಎಂದನು.

"ನಾನು ನಿಮ್ಮನ್ನು ಆಗಾಗ ಬಾರ್‌ನಲ್ಲಿ ನೋಡುತ್ತಿರುತ್ತೇನೆ ಮಿಸ್ಟರ್.... ಅಂದ ಹಾಗೆ ನಿಮ್ಮ ಹೆಸರೇನು?" ಆಕೆ ತುಂಟ ಪ್ರಶ್ನೆ ಎಸೆದಳು.

"ಓಹೋ ಹೌದೌದು... ನಾನು ಬಾರ್ ಮ್ಯಾನೇಜರ್ ಅನ್ನು ಆಕರ್ಷಿಸಲು ಪ್ರಯತ್ನಿಸುತ್ತಿರುವೆ" ಎಂದು ಹೇಳಿ ನಕ್ಕೆ.

ಪ್ರುಡೆನ್ಶಿಯಲ್ ಇನ್ಸುರೆನ್ಸ್ ಕಂಪನಿಯ ಸಂಘಟಿಕ ಗ್ಯಾನಿ ತುಂಬಾ ನೆರವಿಗೆ ಬಂದ. ಆ ದಿನಗಳಲ್ಲಿ ಆತ ವಿಮೆಗಾಗಿ ಅಧಿಕಾರಿಗಳನ್ನು ಪೀಡಿಸುತ್ತಿದ್ದ. ಆ ಗಡ್ಡಧಾರಿ, ಉತ್ಸಾಹಿ ತರುಣ ಹತ್ತುಸಾವಿರ ರೂಪಾಯಿ ವಿಮೆಗಾಗಿ ನನ್ನನ್ನು ಒಪ್ಪಿಸಿದ. ನಾನು ಬಲಿಬಿದ್ದೆ. ಬಾರ್ ಮ್ಯಾನೇಜರ್‌ನ ಪರಿಚಯ ಮಾಡಿಕೊಳ್ಳಲು ಗ್ಯಾನಿ ನನಗೆ ನೆರವಾದ.

ಯುದ್ಧ ಕಾಲದಲ್ಲಿ, ಒಂದು ಪೆಗ್ ವಿಸ್ಕಿ ಹೀರುವಾಗ ಉಂಟಾದ ಸ್ನೇಹ ಬಹುಕಾಲ ಉಳಿಯಿತು. ಒಬ್ಬ ಸ್ನೇಹಪೂರ್ಣ ವ್ಯಕ್ತಿಯನ್ನು ಗ್ಯಾನಿ ಪರಿಚಯಿಸಿದ. ಬಾರ್ ಮ್ಯಾನೇಜರ್ ಮತ್ತು ನಾನು ರಾತ್ರಿ ಬೆಳಗಾಗುವುದರೊಳಗೆ ಮಿತ್ರರಾಗಿಬಿಟ್ಟೆವು. ರೈಲ್ವೆ ನಿಲ್ದಾಣದ ಬಾರ್ ನನ್ನ ರಾತ್ರಿ ಹೊತ್ತಿನ ಚಟುವಟಿಕೆಗಳ ಕೇಂದ್ರವಾಯಿತು. ವ್ಯವಸ್ಥೆಯ ಎಲ್ಲಾ ಸಿಬ್ಬಂದಿ ನನಗೆ ಉತ್ತಮ ರೀತಿಯಲ್ಲಿ ಹಾಗೂ ನಿಷ್ಠೆಯಿಂದ ಸೇವೆ ಸಲ್ಲಿಸಿದರು.

ಬಾರು-ಕಾರುಬಾರು!

ಸಂಜೆ ಐದು ಗಂಟೆಗೆ ಬಾರಿಗೆ ಹೊಕ್ಕ ನಾನು ಹೊರಬರುತ್ತಿದ್ದುದು ಮುಂಜಾನೆ ಮೂರು ಗಂಟೆಗೆ! ಈ ಅವಧಿಯಲ್ಲಿ ಎಲ್ಲಾ ಪ್ರಮುಖ ರೈಲುಗಳು ಅಂಬಾಲಾ ಮೂಲಕ ಹಾದುಹೋಗುತ್ತಿದ್ದವು. ಹಾಗೂ ನಾನು ಕೆಲಸದಲ್ಲಿ ವ್ಯಸ್ತನಾಗಿರುತ್ತಿದ್ದೆ. ನಮ್ಮ ಸಂಘಟನೆಯ ಜಾಲ ವಿಸ್ತಾರಗೊಳ್ಳುತ್ತಿತ್ತು. ಹತ್ತು ಸಾವಿರಕ್ಕೂ ಹೆಚ್ಚು ಸೈನಿಕರ ಮೇಲೆ ಅಧಿಕಾರ ಅಥವಾ ಪ್ರಭಾವವಿರುವ ಮುನ್ನೂರು ಅಧಿಕಾರಿಗಳು ಎರಡು ತಿಂಗಳೊಳಗೆ ನಮ್ಮ ಜತೆ ಸೇರಿದರು. ಪಡೆಗಳ ಒಳಗಿನ ಹಾಗೂ ಹೊರಗಿನ ಸನ್ನಿವೇಶ ಕ್ರಾಂತಿಕಾರಕವಾಗಿತ್ತು. ಹೊಸ ಸಂಘಟನಾ ನಿಯಮಗಳನ್ನು ನಿರ್ದಿಷ್ಟವಾಗಿ ರೂಪಿಸಬೇಕಾಗಿತ್ತು. ಹಾಗೂ ಅವುಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕಾಗಿತ್ತು. ಪ್ರಚಾರ ಸಾಹಿತ್ಯವನ್ನು ಪಡೆದು ವಿವರಿಸಬೇಕಾಗಿತ್ತು.

1942ರ ಜೂನ್‌ತಿಂಗಳ ಒಂದು ಕಡುಬಿಸಿಲಿನ ದಿನ ನಾನು ಸಂಘಟನಾ ಸಮಿತಿಯ (ಓ.ಸಿ) ಸಭೆಯಲ್ಲಿ ಪಾಲ್ಗೊಳ್ಳಲು ದೆಹಲಿಗೆ ಪ್ರಯಾಣಿಸಿದೆ. ಫ್ರಂಟಿಯರ್ ಮೇಲ್‌ನ ಪ್ರಥಮ ದರ್ಜೆ ಬೋಗಿಯಲ್ಲಿ ಕೆಲವು ಅಮೇರಿಕನ್ ಸೈನಿಕರು (ಯಾಂಕ್) ಇದ್ದರು. ಕುಡಿಯುತ್ತಿದ್ದ ಅವರ ಜತೆ ನಾನೂ ಸೇರಿದಂತೆ ಅವರ ಅಪರಿಮಿತ ಆತಿಥ್ಯಕ್ಕೆ ನಾನು ಬಲಿಬಿದ್ದೆ. ಒಬ್ಬನಿಂದ ಪ್ರಶ್ನೆಯೊಂದು ತೇಲಿಬಂತು.

"ಲೆಫ್ಟಿನೆಂಟ್, ಈ ಬೆರಳೆಣಿಕೆಯಷ್ಟು ಬಿಳಿಯರನ್ನು ನಿಮ್ಮ ದೇಶದಿಂದ ಒದ್ದೋಡಿಸಲು ಆಗುವುದಿಲ್ಲವೆ? ನೀವೀಗ ಶಸ್ತ್ರಸಜ್ಜಿತರು. ನಿಮ್ಮ ಸೇನೆ ದೊಡ್ಡದಾಗಿದೆ" ಎಂದಾತ ಹೇಳಿದ.

ಪಿಸ್ತೂಲ್ ಕಾಣಿಕೆ

ನಾನು ಸುಮ್ಮನೆ ಇದ್ದೆ. ಸ್ವಲ್ಪ ಜಾಸ್ತಿಯೇ ಗುಂಡು ಹಾಕಿದ್ದ ಇನ್ನೊಬ್ಬ ಯಾಂಕ್ ಅಧಿಕಾರಿಯ ಸರದಿ ಈಗ. ಆತ ನನಗೊಂದು ಪಿಸ್ತೂಲ್ ಕೊಟ್ಟ. "ಒಂದು ದಿನ ಇದನ್ನು ಬ್ರಿಟೀಷರ ವಿರುದ್ಧ ಬಳಸು" ಎಂದು ಆದೇಶ ನೀಡಿದ. ನಾನು ಆ ಕಾಣಿಕೆಯನ್ನು ಕೃತಜ್ಞತೆಯಿಂದ ಸ್ವೀಕರಿಸಿದೆ.

ಅದರೆ ಇಂದೇನಾಗುತ್ತಿದೆ? ಪ್ರಜಾ ಪ್ರಭುತ್ವದ ಇದೇ ಸೈನಿಕರು ಏಷ್ಯಾದ ಜನತೆಯನ್ನು, ಅವರ ದೇಶಗಳನ್ನು ಮತ್ತು ಸ್ವಾತಂತ್ರ್ಯ ವನ್ನು ಹರಣ ಮಾಡುತ್ತಿದ್ದಾರೆ. ಇತಿಹಾಸ ಬಹಳ ವೇಗವಾಗಿ ಬದಲಾಗುತ್ತಿದೆ.

ದೆಹಲಿಯ ಕ್ವೀನ್ ವಿಕ್ಟೋರಿಯಾ ರಸ್ತೆಯಲ್ಲಿರುವ ಮುಸ್ಲಿಂ ರೇಸ್ ಕುದುರೆ ಮಾಲಿಕರೊಬ್ಬರ ಮನೆಯಲ್ಲಿ ನಾವು ಸಭೆ ಸೇರಿದೆವು. ಗಡಿನಾಡಿನ ಆ ವ್ಯಕ್ತಿಯ ಡ್ರಾಯಿಂಗ್ ರೂಮ್ ಪಾಶ್ಚಾತ್ಯ ಶೈಲಿಯಲ್ಲಿ ಸಜ್ಜುಗೊಂಡಿತ್ತು. ನಾವು ಪರ್ಶಿಯನ್ ಕಾರ್ಪೆಟ್ ಮೇಲೆ ಚಕ್ಕಳ ಮಕ್ಕಳ ಹಾಕಿ ಕುಳಿತೆವು. ದೀರ್ಘಕಾಲೀನ ಪರಿಣಾಮ ಬೀರುವಂಥ ಮಹತ್ವದ ತೀರ್ಮಾನಗಳನ್ನು ತೆಗೆದುಕೊಂಡ ಈ ಸಭೆ ಐತಿಹಾಸಿಕವಾದುದಾಗಿತ್ತು.

(ಮುಂದುವರಿಯುವುದು)

ಈ ಸಂಚಿಕೆ....

ಡಿಸೆಂಬರ್ 6 ಕೇವಲ ಘಟನೆಯಲ್ಲ ಶತಮಾನದ ಆರಂಭದಲ್ಲಿನ ಗಂಡಾಂತರ

'ಬಾಬ್ರಿ ಮಸೀದಿ ಧ್ವಂಸದ ಪ್ರಕರಣ ಏಕಾಯಿತು? ಹೇಗಾಯಿತು? ಎಂದು ಕೇಳಿದ ಹಲವರಿದ್ದಾರೆ. ಏಕೆಂದರೆ ಅಂತಹ ಕರಾಳ ಕೃತ್ಯ ಘಟಿಸಿ ಹತ್ತು ವರುಷಗಳೇ ಆದವು. ಭಾರತದ ಜನತೆ ವಿಶ್ವದೆದುರು ತಲೆ ತಗ್ಗಿಸುವಂತೆ ಮಾಡಿದ, ನಮ್ಮ ಜನತೆಯ ಬಹುಸಂಸ್ಕೃತಿ, ಸೌಹಾರ್ದತೆಯ ಪರಂಪರೆಗೆ ಸಿಡಿಮದ್ದನ್ನಿಟ್ಟು ದೇಶವನ್ನೇ ಅಮೆರಿಕಾದಂತಹ ಸಾಮ್ರಾಜ್ಯಶಾಹಿಗಳಿಗೆ ಒಪ್ಪಿಸುತ್ತಿರುವ ಖೋಟಾ 'ದೇಶಪ್ರೇಮಿ' ಸಂಘ ಪರಿವಾರದ ಖಾವಿ ಪಡೆ, ಅವಮಾನದ, ಅಮಾನವೀಯ ಘಟನೆಗಳನ್ನೇ ವಿಜೃಂಭಿಸಿ ವಿಜಯೋತ್ಸವ ಆಚರಿಸಲು ಹವಣಿಸಿವೆ. ಇಂತಹ ಸಂದರ್ಭದಲ್ಲಿ ಡಿಸೆಂಬರ್ 6 ರ (ಡಾ. ಅಂಬೇಡ್ಕರ್ ನಿರ್ವಾಣದ ದಿನದಂದೇ) ಕರಾಳ ಕೃತ್ಯದ ಒಳ-ಹೊರಗು ಬಯಲಿಗಿಡಬೇಕು. ಸದ್ಯದ ಗಂಭೀರ ಸವಾಲು ಗುರುತಿಸಬೇಕು ಎಂದು ಒಂದು ವಿಶೇಷ ಲೇಖನಗಳ ಸಂಚಿಕೆ ಹೊರತರುತ್ತಿದ್ದೇವೆ. ಅದಕ್ಕಂದೇ ಈಸಂಚಿಕೆ 16 ಪುಟಗಳಿಂದ ತುಂಬಿ ನಿಮ್ಮ ಮಡಿಲಲ್ಲಿದೆ. ಇಂತಹ ಹಲವು ಲೇಖನಗಳನ್ನು ಮುಂದಿನ ಸಂಚಿಕೆಯಲ್ಲಿ ಕೊಡುವ ಆಶೆ ಇದೆ. ಏಕೆಂದರೆ ಅದು ಕೇವಲ ಘಟನೆಯಲ್ಲ. ಶತಮಾನದ ಆದಿಯಲ್ಲಿನ ಗಂಡಾಂತರ.

ದುಡಿವ ಜನರ ಪ್ರಾಣಮಿತ್ರ ಐಕ್ಯರಂಗ ಹಿಂದೆಯೂ ಈ ವಿಷಯವಾಗಿ ಕನ್ನಡದಲ್ಲಿ ಯಾವ ಪತ್ರಿಕೆಗಳೂ ಹೊರತರದಂಥಹ ಮಹತ್ವದ ಬರಹಗಳ ಸಂಚಿಕೆ ತಂದಿರುವುದು ನೆನಪಿಸಬಯಸುತ್ತೇವೆ. ಈಗಲೂ..

- ಸಂ.

ಮಾಜಿ ಸಚಿವ ನಾಗಪ್ಪನವರ ಹತ್ಯೆಯಾಗಿದೆ. ಈಗ ಸರ್ಕಾರಗಳು ವೀರಪ್ಪನ್ ಬೇಟೆಗೆ ಮತ್ತೇ ಕಾರ್ಯಾಚರಣೆಗೆ ಇಳಿದಿವೆ. ಈ ಒಟ್ಟು ಅಪಹರಣದ ಪ್ರಕರಣದಲ್ಲಿ ಎದ್ದುಬಂದ ಪ್ರಶ್ನೆ - ಅನುಮಾನಗಳು ಹಲವಾರು. ಅವುಗಳಿಗೆ ಕೃಷ್ಣ ಸರ್ಕಾರ ಅಲ್ಲದೇ ತಮಿಳುನಾಡು, ಕೇಂದ್ರ ಸರ್ಕಾರಗಳೂ ಉತ್ತರ ಹೇಳಬೇಕು. ಇಂತಹ ಗಂಭೀರ ಸನ್ನಿವೇಶದಲ್ಲಿ ಜನರನ್ನು ಉದ್ರೇಕಿಸಿ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಅಮಾನವೀಯ ಆಟಗಳು ನಿಲ್ಲಬೇಕು. ನರಹಂತಕ, ಕಾಡುಗಳ್ಳನ ಅಟ್ಟಹಾಸಕ್ಕೆ ಅಂತ್ಯ ಹಾಡಲೇಬೇಕು.


ನಾಗಪ್ಪ ಹತ್ಯೆ - ರಾಚಿದ ಪ್ರಶ್ನೆಗಳು


ನೂರ ಆರು ದಿನಗಳ ನಂತರ ಮಾಜಿ ಸಚಿವ ನಾಗಪ್ಪನವರ ದೇಹ ಹೆಣವಾಗಿ ವಾಪಸಾಗಿದೆ. ನರಹಂತಕ, ಕಾಡುಗಳ್ಳ ವೀರಪ್ಪನ್‌ನಿಂದ ಅಪಹರಣಕ್ಕೊಳಗಾಗಿದ್ದ ನಾಗಪ್ಪನವರನ್ನು ಬಿಡಿಸಿಕೊಂಡು ಬರಲು ಏನೆಲ್ಲಾ ಕಸರತ್ತುಗಳನ್ನು ನಡೆಸಲಾಯಿತಾದರೂ ಅಂತಿಮವಾಗಿ ಸಿಕ್ಕಿದ್ದು ಹೆಣವಾಗಿ. ಅದೂ ಗುಂಡೇಟಿನಿಂದ. ನಾಲ್ಕು ದಿನಗಳ ಕೊಳೆಯುತ್ತಿದ್ದ ಶವವಾಗಿ. ಚೆಂಗಡಿ ಕಾಡಿನಲ್ಲಿ. ಸಿಡಿಲು ಬಡಿದಂತಹ, ತಲ್ಲಣಕಾರಿ ಸುದ್ದಿಯಾಗಿ ಎರಗಿತು.

ಇದು ಅತ್ಯಂತ ಧಾರುಣ ಹತ್ಯೆ. ತಾನು ನೀಡಿದ್ದ ಗಡುವು ಮೀರಿತೆಂದೂ, ಹಾಕಿದ ಶರತ್ತುಗಳ ಬೇಡಿಕೆಗಳು ಈಡೇರಲಿಲ್ಲವೆಂದೂ ಕೆರಳಿ ವೀರಪ್ಪನ್ ಇಂತಹ ಬರ್ಬರ ಕೊಲೆ ನಡೆಸಿದ್ದಾನೆ(ಕೊಂದದ್ದು ತಾನಲ್ಲ, ತಮಿಳುನಾಡು ಎಸ್‌ಟಿಎಫ್ ಪಡೆ ಎಂಬ ಹೇಳಿಕೆ ವೀರಪ್ಪನ್ ನೀಡಿದ್ದಾನೆ!). ವೀರಪ್ಪನ್‌ನ ಗುರುವೆಂದೇ ಹೇಳಲಾಗುವ ಎಲ್‌ಟಿಟಿಇ ಉಗ್ರಗಾಮಿ ಸಂಘಟನೆಯ ನಂಟಿನ ಕೊಳತ್ತೂರು ಮಣಿಯನ್ನು ಜೈಲಿನಿಂದ ಬಿಡುಗಡೆ ಮಾಡುವ ಪ್ರಯತ್ನಗಳು ನಡೆದಿದ್ದವು! ಇನ್ನೂ ಇತರೆ 'ವ್ಯವಸ್ಥೆ' ಏರ್ಪಾಡಾಗುತ್ತಿತ್ತು ಎಂಬ ಸುದ್ದಿಗಳು ಇದ್ದವು. ಹೀಗಿರುವಾಗ, ನಾಗಪ್ಪನವರ ಕೊಲೆಯಾಯಿತು. ಕೊಂದವರಾರು? ಈ ಬಗೆಗಿನ ತಮಿಳುನಾಡು-ಕರ್ನಾಟಕ ಮತ್ತು ಕೇಂದ್ರ ಸರ್ಕಾರದ ಹೇಳಿಕೆಗಳು ಗೊಂದಲಗಳನ್ನೇ ಹೆಚ್ಚಿಸುತ್ತವೆ. ತನಿಖೆಯಾಗಿ ನಡೆದ ವಿಷಯಗಳು ಬೆಳಕಿಗೆ ಬರಬೇಕು.

ಮತ್ತೊಮ್ಮೆ ಜನದ್ರೋಹ

ಈ ಕೊಲೆ ವೀರಪ್ಪನ್‌ನ್ನು ಮಟ್ಟಹಾಕದ ಆಳುವವರ ದುಷ್ಟತನ, ಕಾಡುಗಳ್ಳನೊಂದಿಗಿನ ನಂಟು ಬಯಲಾಗುತ್ತದೆ. ಇದರಬಂದು ಎಳೆ ಹಿಡಿದು ಹಾಗೇ ಇಣುಕಿದರೆ ಬ್ರಹ್ಮಾಂಡ ಭ್ರಷ್ಟತನದ ಈ ವ್ಯವಸ್ಥೆ ಸ್ವರೂಪವೇ ಬಿಚ್ಚಿಕೊಳ್ಳುತ್ತದೆ. ಇಂದು ವೀರಪ್ಪನ್‌ನನ್ನು ಮಟ್ಟಹಾಕುವುದಾಗಿ ವೀರಾವೇಶದಿಂದ ಅರಚುವ ವರ್ಗಗಳೇ ಆತ, ಆತನಂತಹವರನ್ನು ಪ್ರೋತ್ಸಾಹಿಸುತ್ತಾ, ಬೆಳೆಸುತ್ತಾ, ಬಲಿಸುತ್ತಾ ಬಳಸುತ್ತಿರುವ ವಿಪರ್ಯಾಸದ ಜನದ್ರೋಹ ನಮ್ಮೆದುರಿದೆ.





ಆರನೆಯ ಕ್ಯಾಸೆಟ್ ಕಾಡಿನಿಂದ 'ನಾಡಿ'ಗೆ ಸಿಕ್ಕಾಗಲೇ ಆತಂಕ ಎಲ್ಲರಲ್ಲೂ ಶುರುವಾಗಿತ್ತು. ಕೊನೆಗೆ ಹುಡುಕಿಕೊಂಡು ಹೋದಾಗ ಹೆಣ ದೊರೆಯಿತು. ಸಹಜವಾಗಿಯೇ ಎಲ್ಲರಿಗೂ ಚೇತರಿಸಿಕೊಳ್ಳಲಾಗದ ಸಿಡಿಲಿನ ಸುದ್ದಿಯಾಗಿ. ಬುಗ್ಗನೇ ಸಿಡಿದ ಆಕ್ರೋಶವಾಗಿ ಹರಿಯಿತು. ಚಾಮರಾಜ ನಗರ, ಕಾಮಗೆರೆಗಳಲ್ಲಿ ಹತ್ತಾರು ಸಾವಿರ ಜನ ಜಮಾಯಿಸಿ ಉದ್ವೇಗದ ಸ್ಥಿತಿ ನಿರ್ಮಾಣವಾಗಿದೆ. ಹಿಂಸಾಚಾರ ನಡೆದಿದೆ. ಗುಲ್ಬರ್ಗಾ, ಬಳ್ಳಾರಿ, ಶಿವಮೊಗ್ಗ, ಮೈಸೂರು ಮುಂತಾದೆಡೆ ಬಂದ್ ನಡೆದಿದೆ. ನಾಗಪ್ಪನವರ ಊರಾದ ಕಾಮಗೆರೆಯಲ್ಲಂತೂ ಪ್ರತಿಭಟನೆ ಮಹಾಪೂರವೇ. 'ಸರ್ಕಾರಿ ಮರ್ಯಾದೆ' ಯಂತೆಯೇ ಶವಸಂಸ್ಕಾರ ಮಾಡುವುದಾಗಿ ತೀರ್ಮಾನಿಸಿದ ಕೃಷ್ಣರ ಸರ್ಕಾರ ಅದನ್ನು ಜಾರಿ ಮಾಡಲಾಗದೇ ಹಿಂದೆ ಓಡಿ ಬಂದಿದೆ. ಸಚಿವ ರನ್ನಾಗಲೀ, ಜನತಾದಳ ನಾಯಕರನ್ನೂ ಸೇರಿಸಿ ಜನ ಹಿಂದಕ್ಕಟ್ಟಿದ್ದಾರೆ. ಏನೂ ಮಾಡಲಿಲ್ಲವೆಂದು ಕೃಷ್ಣ ಸರ್ಕಾರದ ಮೇಲೆ, ನಾಗಪ್ಪನವರನ್ನು ಬಿಡಿಸಿಕೊಡಲಿಲ್ಲವೆಂದು ಸ್ವಪಕ್ಷದವರ ಮೇಲೆ ಸಿಟ್ಟು ವ್ಯಕ್ತವಾಗಿದೆ. ಇದು ನೋವಿನ, ಆತಂಕದ ಸಂದರ್ಭ. ನಾಗಪ್ಪನವರ ಕುಟುಂಬ, ಬೆಂಬಲಿಗರು ಧೈರ್ಯದಿಂದ ಈ ಸಂಕಷ್ಟ ವನ್ನು ಎದುರಿಸ ಬೇಕಾಗಿದೆ.

ನಾಗಪ್ಪನವರ ಅಪಹರಣ, ಹತ್ಯೆ ಪ್ರಕರಣವನ್ನು ಒಂದು ಜಾತಿಯವರ ಪ್ರಶ್ನೆ ಎಂಬಂತೆ ಬಿಂಬಿಸಲು ಪ್ರಯತ್ನಗಳು ನಡೆದವು. ಅವರ ಬಿಡುಗಡೆಗೆ ಸರ್ಕಾರದ ಮೇಲೆ ಒತ್ತಡ ಹೇರಲು ಮಠಾಧಿಪತಿಗಳ ಸಮಾವೇಶವೂ ನಡೆದು ಪ್ರಜಾತಂತ್ರವನ್ನು ಅಣಕಿಸಲಾಯಿತು. ರಾಜ್ಯ ಸರ್ಕಾರ-ಸಚಿವರು ಅದನ್ನು ಹಾಗೆಯೇ ಪರಿಗಣಿಸಿತು. ಒಬ್ಬ ಸಚಿವರಂತೂ ಬಿಡಿಸಿಕೊಂಡು ಬರಲು ಲಿಂಗಾಯತರು ಹಣ ಕೊಡಲಿ ಎಂಬ ಹೇಳಿ ಬೇಜವಾಬ್ದಾರಿತನದ ನಿರ್ಲಕ್ಷ್ಯಕ್ಕೆ ಸಾಕ್ಷಿ. ಪೋಲೀಸ್ ಅಧಿಕಾರಿಗಳನ್ನು ನೇಮಿಸುವಾಗಲೂ ಜಾತಿಯ ಮಾನದಂಡ ಬಳಸಿದರು.



ಶವವಾಗಿ ಹಿಂತಿರುಗಿದ ನಾಗಪ್ಪನವರು

ಇಲ್ಲಿ ಜಾತಿ, ಭಾಷೆಯ ಪ್ರಶ್ನೆ ಉದ್ಭವಿಸುವುದಿಲ್ಲ. ಹಾಗೆ ತಳುಕು ಹಾಕಿ ದ್ವೇಷ ಹೆಚ್ಚಿಸುವುದನ್ನು ನಿಷ್ಠುರವಾಗಿ ಪ್ರತಿಭಟಿಸಬೇಕು. ಜನ ವೈಷಮ್ಯ ತಾಳದೇ ಶಾಂತಿ ಕಾಪಾಡಬೇಕಿದೆ. ಈ ಗಂಭೀರ ಸಂದರ್ಭವನ್ನೇ ತಮ್ಮ ದುಷ್ಟ ರಾಜಕೀಯದ ಆಟಕ್ಕೆ ಬಳಸಲು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಲೆಕ್ಕ ಹಾಕುತ್ತಿದ್ದಾರೆ. ಇದು ನಾಚಿಕೆಗೇಡಿನ, ಅಮಾನವೀಯ ಸಂಗತಿ. ಜನ ಎಚ್ಚರದಿಂದ ಅರಿಯಬೇಕಿದೆ.

ಈ ನಿರ್ಲಕ್ಷ್ಯ ಪ್ರಕರಣವನ್ನು ಘಟನಾವಳಿಗಳನ್ನು ಒಂದೇ ಉಸುರಿಗೆ ವಿವರಿಸುವುದು ಸಾಧ್ಯವಾಗದು. ಆಳ ತನಿಖೆಯಾಗಿ ಇನ್ನೂ ಅನೇಕ ಸಂಗತಿಗಳು ಹೊರಬರಬೇಕು.

ಆದರೆ ದುಷ್ಟ, ನರಹಂತಕನನ್ನು ಮಟ್ಟ ಹಾಕುವಲ್ಲಿ ಕರ್ನಾಟಕ-ತಮಿಳುನಾಡು ಮತ್ತು ಕೇಂದ್ರ ಸರ್ಕಾರಗಳು ಸಂಪೂರ್ಣ ವಿಫಲವಾಗಿವೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಹಿಂದೆಲ್ಲಾ ಇಂತಹ ಅಪಹರಣ, ಕಗ್ಗೊಲೆಗಳು ನಡೆದಾಗ ಜನರ ಕಣ್ಣಿಗೆ ಮಣ್ಣೆರಚಲೋ ಎಂಬಂತೆ ಕಾರ್ಯಾಚರಣೆಯ ವೀರಾವೇಶದಿಂದ ಹೇಳಿಕೆ ನೀಡಿ, ಬಳಿಕ ತಣ್ಣಗಾಗುವುದು ನಡೆದುಕೊಂಡೇ ಬಂದ ಕ್ರಮ. ಇಂತಹ ಕ್ರಿಮಿನಲ್‌ನೊಂದಿಗೆ ಮಂತ್ರಿಗಳು, ಅಧಿಕಾರಸ್ತರು, ರಾಜಕಾರಣಿಗಳ ಸಂಬಂಧ ಇರುವುದು ಮತ್ತೆ ಮತ್ತೆ ಕೇಳಿಬಂದ ಸಂಗತಿಯಾಗಿದೆ. ಡಾ. ರಾಜ್, ನಾಗಪ್ಪನವರ ಅಪಹರಣದ ಸಂದರ್ಭದಲ್ಲಿ ಬಂದುಹೋದ 'ಪಾತ್ರಧಾರಿಗಳು' ಇದನ್ನೇ ಸಾಬೀತು ಮಾಡುತ್ತವೆ. ವೀರಪ್ಪನ್ ನಿಕಟವರ್ತಿ ಎನ್ನಲಾಗುವ ರಾಜುಗೌಡರನ್ನು ಸಂಪುಟಕ್ಕೆ ಸೇರಿಸಿಕೊಂಡದ್ದೂ ಒಳಗೊಂಡು ಕೃಷ್ಣರವರ ಸರ್ಕಾರದ ನೈತಿಕತೆ ಪ್ರಶ್ನೆಗೆ ಒಳಗಾಗಿದೆ.

ಕೃಷ್ಣರ ಸರ್ಕಾರ ಡಾ. ರಾಜ್ ಅಪಹರಣದ ಪ್ರಹಸನದ ನಂತರ ಎಚ್ಚೆತ್ತುಕೊಂಡು ನರಹಂತಕನ ಬೇಟೆಗೆ ತೀವ್ರವಾಗಿ ಕಾರ್ಯಾಚರಣೆ ನಡೆಸಬೇಕಿತ್ತು. ಹಾಗೆಯೇ ತಮಿಳುನಾಡು ಸಹ. ಆದರೆ ರಾಜ್ ಬಿಡುಗಡೆ ಬಳಿಕ ಕೃಷ್ಣಸರ್ಕಾರ ಈ ದಿಶೆಯಲ್ಲಿ ಉದಾಸೀನತೆಯನ್ನೇ ತೋರಿಸಿದೆ. ನಾಗಪ್ಪನವರ ಅಪಹರಣ ಆಗಬಹುದೆಂಬ ಸ್ಪಷ್ಟ ವರದಿ(ಅರಕೇಶ್ ವರದಿ) ಇದ್ದಾಗಲೂ ಅದರತ್ತ ಗಂಭೀರ ನಿಗಾ ವಹಿಸಿಲ್ಲ. ನಾಗಪ್ಪನವರ ಅಪಹರಣವಾದ ಬಳಿಕವೂ ಸಂಧಾನವೋ - ಕಾರ್ಯಾಚರಣೆಯೋ ಎಂದು ಗೊಂದಲದಲ್ಲಿ ಮುಳುಗಿತ್ತು ಸರ್ಕಾರ. ಈಗೇನೋ ನಾಗಪ್ಪನವರ ಕುಟುಂಬ, ಕೆಲ ವಿರೋಧ ಪಕ್ಷಗಳು ಕಾರ್ಯಾಚರಣೆಗೆ ವಿರೋಧವಿದ್ದವು ಎಂದು ಹೇಳುತ್ತಿದ್ದಾರೆ. ಆದರೆ ಸಿಪಿಐ(ಎಂ) ಸ್ಪಷ್ಟವಾಗಿ -ಕಾನೂನಾತ್ಮಕವಾಗಿ ಕ್ರಮವಹಿಸಿ ನಾಗಪ್ಪನವರನ್ನು ಬಿಡಿಸಿಕೊಳ್ಳಬೇಕು - ವೀರಪ್ಪನನ್ನು ಮಟ್ಟಹಾಕಬೇಕು ಎಂದು ಸತತವಾಗಿ ಮುಖ್ಯಮಂತ್ರಿಗಳಿಗೆ ಹೇಳುತ್ತಾ ಬಂದಿದೆ. ಹೇಗಾದರೂ ಮಾಡಿ ಬಿಡಿಸಿಕೊಂಡು ಬಂದರೆ ಸಾಕು ಎಂಬುದು ಸರಿಯಲ್ಲ. ಹೇಗಾದರೂ ಎಂಬುದು ಏನಾದರೂ ಆಗಬಲ್ಲದು. ಕಾಡುಗಳ್ಳನಿಗೆ ನಾಗರಿಕ ಸರ್ಕಾರ ಮಣಿಯುತ್ತಲೇ ಹೋಗುವುದು ಸಹ ಅಪಾಯಕರ. ಆದ್ದರಿಂದ ಕೃಷ್ಣರವರ ಸರ್ಕಾರದ ಹೊಣೆಗೇಡಿತನವಿದೆ. ಬಹಳ ಸಂದರ್ಭಗಳಲ್ಲಿ ಕಾರ್ಯಾಚರಣೆಗೆ ಎದುರಾಗುತ್ತಿರುವ ಇನ್ನೊಂದು ಸಮಸ್ಯೆಯೆಂದರೆ ತಮಿಳುನಾಡು - ಕರ್ನಾಟಕದ ಪಡೆಗಳ ನಡುವಿನ ಸಮನ್ವಯದ ಕೊರತೆ. ಭಿನ್ನ ನಿಲುವುಗಳು. ಈ ನರಹಂತಕನ ಪೋಷಣೆಗೆ ಸಹಾಯಕವಾಗಿದೆ.

ಇಂತಹ ಸಂದರ್ಭದಲ್ಲಿ ಕೇಂದ್ರ ಸರ್ಕಾರವು ಮಧ್ಯ ಪ್ರವೇಶಿಸಿ ಉಭಯತ್ರರಲ್ಲಿ ಸಮನ್ವಯ ತರಲು ಯತ್ನಿಸುವುದು ಮಾತ್ರವಲ್ಲ ಅಗತ್ಯವಾದ ಎಲ್ಲಾ ನೆರವು ನೀಡುವುದು ಮಹತ್ವದ್ದಾಗಿದೆ. ಕಾರ್ಯಾಚರಣೆಗೆ ಬೇಕಾಗಿರುವ ಆಧುನಿಕ ಶಸ್ತ್ರಗಳು, ಸಲಕರಣೆಗಳು, ಕಾರ್ಯಾಚರಣೆ ಪಡೆ, ಬೆಂಬಲವನ್ನು ಕೇಂದ್ರ ಸರ್ಕಾರ ಒದಗಿಸಬೇಕು. ಆದರೆ ಇದರ ಬದಲು ಕೇಂದ್ರ ಸರ್ಕಾರವೂ ಏನೂ ಮಾಡದೇ ಈಗಿನಂತಹ ಸಂದರ್ಭದಲ್ಲಿ ಮಾತ್ರವೇ ಟೀಕೆ ಮಾಡಿ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ಯತ್ನಿಸುತ್ತಿದೆ.

ವೀರಪ್ಪನ್‌ನ ಕ್ಯಾಸೆಟ್‌ನಲ್ಲಿರುವಂತೆ ತಮಿಳುನಾಡು ಎಸ್‌ಟಿಎಫ್ ಪಡೆಯೊಂದಿಗಿನ ಚಕಮಕಿಯಲ್ಲಿ ನಾಗಪ್ಪ ಗಾಯಗೊಂಡಿದ್ದಾರೆಂದು ಹೇಳಿದ್ದಾನೆ. ಪರಿಣಾಮ ಸಾವನ್ನಪ್ಪಿದ್ದಾರೆ ಎಂಬುದು. ಆದರೆ ಈ ಸಂಗತಿಯ ಸತ್ಯಾಸತ್ಯತೆಯನ್ನು ತನಿಖೆಗೆ ಒಳಪಡುವ ಮೊದಲೇ ಕೇಂದ್ರ ಗೃಹಸಚಿವ ಅಡ್ವಾಣಿಯವರು ನಿರಾಕರಿಸಿ, ಹೇಳಿಕೆ ನೀಡಿದರು. ಅವರಿಗಿದ್ದದ್ದು 'ಓಲೈಸುವ' ಕುರ್ಚಿ ರಾಜಕಾರಣವಷ್ಟೇ.

ಇಲ್ಲಿ ಕರ್ನಾಟಕದಲ್ಲಿಯೂ ಬಿಜೆಪಿಯ ನಾಯಕರು ಸಂದರ್ಭದ ಹೊಣೆಯರಿತು, ಜವಾಬ್ದಾರಿಯುತವಾಗಿ ವರ್ತಿಸುವ ಬದಲು ಸನ್ನಿವೇಶದ ದುರ್ಲಾಭ ಗಿಟ್ಟಿಸಿಕೊಳ್ಳಲು ತರಾತುರಿಯಲ್ಲಿ ಇಳಿದಿದ್ದಾರೆ. ನಾಗಪ್ಪ ಲಿಂಗಾಯತರೆಂದು, ಆ ಕಾರಣದಿಂದಲೇ ಲಿಂಗಾಯತ 'ಮತ'ದಾರರು ಕೃಷ್ಣನನ್ನು ವಿರೋಧಿಸಿ, ತಮ್ಮ ಹಿಂದೆ ನಿಲ್ಲಬೇಕೆಂದು ಯಡಿಯೂರಪ್ಪ, ಸೇಡಂ ಇತ್ಯಾದಿಗಳು ಕೂಗತೊಡಗಿದ್ದಾರೆ. ಕಿತ್ತುಹೋಗುತ್ತಿರುವ ಅವರ ರಾಜಕೀಯ ಶಕ್ತಿಗೆ ನೆಲೆ ಕಾಣಲು ನಾಗಪ್ಪನವರ ಸಾವಿನ ಆಶ್ರಯ ಬಯಸಿದ್ದಾರೆ. ಹಿಂದೆ ನಾಗಪ್ಪನವರ ಅಪಹರಣ ಪ್ರಕರಣದಲ್ಲಿ ಈ ನಾಯಕಮಣಿಗಳ ನಿಲುವೇನಾಗಿತ್ತು? ಎಂಬುದನ್ನು ಅವರೇ ವಿವರಿಸಬೇಕು.

ಹಾಗೆಯೇ ಕೇಂದ್ರದ ಬಿಜೆಪಿ ನಾಯಕ ಮಲ್ಹೋತ್ರ ಸಹ ಕೃಷ್ಣರ ರಾಜಿನಾಮೆಗೆ ಆಗ್ರಹಿಸಿದ್ದಾರೆ. ಇದನ್ನೇ ಅನುಸರಿಯಿಯೇ ಎಂಬಂತೆ ರಾಜ್ಯಪಾಲರು ರಾಜ್ಯ ಸರ್ಕಾರದಿಂದ ವರದಿ ಕೊಡಲು ಕೇಳಿದ್ದಾರೆ. ಅಂದರೆ ರಾಜ್ಯಪಾಲರ ಈ ಕೋರಿಕೆಗೆ ಕೇಂದ್ರ ನಿರ್ದೇಶನವಿಲ್ಲದೇ ನಡೆಯಲಾರದು. ವಿಶೇಷ ಅಧಿವೇಶನ ಕರೆಯುವುದಾಗಿ ಕೃಷ್ಣರ ಸಂಪುಟ ತೀರ್ಮಾನಿಸಿದ್ದರೆ, ಅದನ್ನು ವಿರೋಧಿಸಿ ಲಕ್ಷ ಜನರ ಮುತ್ತಿಗೆ ಹಾಕುವುದಾಗಿ ಹೇಳಿದ್ದಾರೆ.

ಭಾರತದ ಒಬ್ಬ ಪ್ರಜೆಯಾಗಿ, ರಾಜಕೀಯ ನಾಯಕರಾಗಿದ್ದ ನಾಗಪ್ಪನವರ ಹತ್ಯೆಯ ಪ್ರಸಂಗ ಎಲ್ಲರ ಕಣ್ಣು ತೆರೆಸಬೇಕು. ಕಠಿಣ ಸಂದರ್ಭದಲ್ಲಿ ಸಮಸ್ಯೆಯನ್ನು ಮತ್ತಷ್ಟು ಕಗ್ಗಂಟು ಮಾಡದೇ, ವೈಷಮ್ಯ ತಾಳದೇ-ಅಥವಾ ಹೆಚ್ಚಿಸದೇ ಇರುವ ನಿಲುವು-ಕ್ರಮ ಅಗತ್ಯ.

ಈ ಕೂಡಲೇ ವೀರಪ್ಪನ್ ವಿರುದ್ಧ ಕಾರ್ಯಾಚರಣೆಯನ್ನು ತೀವ್ರಗೊಳಿಸಬೇಕು. ಕೃಷ್ಣ ಸರ್ಕಾರ ಹೊಣೆಗೇಡಿತನದ ಬಗ್ಗೆ ನಿಗೂಢವಾಗಿ ಉಳಿದಿರುವ ಹತ್ಯೆ, ನಡೆದ ವ್ಯವಹಾರಗಳ ಬಗ್ಗೆ ಜನರಿಗೆ ಉತ್ತರ ಹೇಳಬೇಕು.

- ಎಸ್.ವೈ.ಗುರುಶಾಂತ್

ನಾಗಪ್ಪನವರ ಹತ್ಯೆ - ಸಿಪಿಐ(ಎಂ) ಆತಂಕ ಶೀಘ್ರ ಎಸ್‌ಟಿಎಫ್ ಕಾರ್ಯಾಚರಣೆಗೆ ಆಗ್ರಹ

ಮಾಜಿ ಸಚಿವ ನಾಗಪ್ಪನವರ ಶವ ಪತ್ತೆಯಾಗಿದ್ದು, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ - ಸಿಪಿಐ(ಎಂ) ರಾಜ್ಯ ಸಮಿತಿ ತೀವ್ರ ಆತಂಕ ವ್ಯಕ್ತಪಡಿಸಿದೆ. ನಾಗಪ್ಪನವರ ಪತ್ನಿ ಮತ್ತು ಕುಟುಂಬದವರು ಧೈರ್ಯದಿಂದ ಈ ಸಂಕಷ್ಟವನ್ನು ಎದುರಿಸಬೇಕಾಗಿದೆ.

ಇದೊಂದು ಸಂಕಟದ ಪರಿಸ್ಥಿತಿಯಾಗಿದ್ದು ಇಡೀ ರಾಜ್ಯದ ಜನತೆ ಒಗ್ಗಟ್ಟಿನಿಂದ ಸಮಚಿತ್ತದಿಂದ ಎದುರಿಸಬೇಕಾಗಿದೆ. ಇಲ್ಲಿ ಭಾಷೆ ಮತ್ತು ಜಾತಿಯ ಪ್ರಶ್ನೆ ಉದ್ಭವಿಸುವುದಿಲ್ಲ. ಈ ನಿಟ್ಟಿನಲ್ಲಿ ವೈಷಮ್ಯ ತಾಳದೆ ಶಾಂತಿ ಸುವ್ಯವಸ್ಥೆ ಕಾಪಾಡಿಕೊಳ್ಳಬೇಕಾಗಿದೆ.

ಎಸ್‌ಟಿಎಫ್ ಕಾರ್ಯಾಚರಣೆ ಅಗತ್ಯ : ಇಂದಿನ ಸಂದರ್ಭದಲ್ಲಿ ಕರ್ನಾಟಕ ಮತ್ತು ತಮಿಳುನಾಡು ರಾಜ್ಯ ಸರ್ಕಾರಗಳು ಸೇರಿಕೊಂಡು ಶೀಘ್ರ ಎಸ್‌ಟಿಎಫ್ ಕಾರ್ಯಾಚರಣೆ ನಡೆಸಿ ವೀರಪ್ಪನನ್ನು ಬಂಧಿಸಬೇಕು. ಈ ಕುರಿತು ಯಾವುದೇ ರಾಜಿ ಇರಕೂಡದು. ಎಸ್‌ಟಿಎಫ್ ಕಾರ್ಯಾಚರಣೆಯ ಹಿಂತೆಗೆತದಿಂದ ಈಗಾಗಲೇ ರಾಜ್ಯವು ಸಾಕಷ್ಟು ನಷ್ಟ ಅನುಭವಿಸಿದೆ ಎಂಬುದನ್ನು ಮರೆಯಕೂಡದು.

ಕರ್ನಾಟಕದ ಜನತೆ ಶಾಂತಿ, ಸುವ್ಯವಸ್ಥೆಯನ್ನು ಕಾಪಾಡಿಕೊಳ್ಳಬೇಕೆಂದು ಸಿಪಿಐ(ಎಂ) ಮನವಿ ಮಾಡಿದೆ. ರಾಜಕೀಯ ನಾಯಕರೊಬ್ಬರ ಕ್ರೂರ ಹತ್ಯೆಯ. ಈ ಕಠಿಣ ಪ್ರಸಂಗದಲ್ಲಿ ಈ ಸಮಸ್ಯೆಯನ್ನು ಮತ್ತಷ್ಟು ಕಗ್ಗಂಟು ಮಾಡದೆ, ವೈಷಮ್ಯ ತಾಳದೆ ಶಾಂತಿ ಸೌಹಾರ್ದತೆಯನ್ನು ಕಾಪಾಡಬೇಕಿದೆ ಎಂದು ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ಎನ್.ನಾಗರಾಜ್ ಮನವಿ ಮಾಡಿದ್ದಾರೆ.

ಯಾವುದೇ ಸಾಮಾಜಿಕ ಕಾಳಜಿ, ಜವಾಬ್ದಾರಿಯಿಲ್ಲದೆ ಧನದಾಹಿಗಳಾದ ಖಾಸಗೀ ಬಸ್ ಮಾಲೀಕರು ತಿಂಗಳಲ್ಲಿ ಎರಡೆರಡು ಬಾರಿ ನಾಗರೀಕರ ಪ್ರಯಾಣ ದರಗಳನ್ನು ಏಕಪಕ್ಷೀಯವಾಗಿ ಬೇಕಾಬಿಟ್ಟಿ ಹೆಚ್ಚಿಸಿದ್ದಾರೆ. ಡೀಸೆಲ್ ಬೆಲೆ ಹೆಚ್ಚಳವೆಂಬುದು ಯಥಾ ರೀತಿ ಗೊಡ್ಡು ಸಮರ್ಥನೆ! ಆದರೆ ಬೆಲೆ ಇಳಿದಾಗ ಇಳಿಸಲೊಲ್ಲದ ಹಠ. ನಾಗರೀಕರ ಹಿತಗಳಿಗೆ ಮಧ್ಯಪ್ರವೇಶಿಸಬೇಕಾದ ಸರ್ಕಾರದ ಅಧಿಕಾರಿಗಳೂ ಸಚಿವರೂಬಸ್ ಮಾಲೀಕರೊಂದಿಗೆ ಹಿಮ್ಮೇಳನ ಹಾಕುತ್ತಿದ್ದಾರೆ. ಇದರ ವಿರುದ್ಧ ಸಮರಶೀಲ ಹೋರಾಟ ಮುನ್ನಡೆದಿದೆ. ಸರ್ಕಾರಿ ಒಡೆತನ ಸಾಕು, ಸಾರಿಗೆ ಸಂಸ್ಥೆ ಪೂರ್ಣ ಖಾಸಗೀಕರಿಸಿ ಎಂದು ಹೇಳುವವರಿಗೆ ಬರೆ ಹಾಕಿದ ಅನುಭವ ಇಲ್ಲದೆ. ಇಡೀ ರಾಜ್ಯದ ಸಾರಿಗೆ ಖಾಸಗೀಕರಿಸಿದರೆ ಏನಾದೀತು ಎಂಬುದಕ್ಕೆ ಒಂದು ಉದಾಹರಣೆ.

ದಕ್ಷಿಣ ಕನ್ನಡ - ಉಡುಪಿ ಜಿಲ್ಲೆ

ಖಾಸಗಿ ಬಸ್ ದರ ಏರಿಕೆ ಹೋರಾಟದ ಕಿಡಿ - ಜ್ವಾಲೆಯಾದಾಗ

"ಭಾರತ ಪ್ರಜಾಸತ್ತಾತ್ಮಕ ಯುವಜನ ಒಕ್ಕೂಟದ ಶಾಖೆಗಳು ತಮ್ಮ ವ್ಯಾಪ್ತಿಯಲ್ಲಿ ನಡೆಸುತ್ತಿರುವ ಚಳವಳಿ ಜನಪರ ಹೋರಾಟಗಳ ಕೊರತೆಯ ಈ ದಿನಗಳಲ್ಲಿ ಭರವಸೆ ಮೂಡಿಸಿದ ಬೆಳವಣಿಗೆಯಾಗಿದೆ"
- ಪ್ರಜಾವಾಣಿ ದಿನಪತ್ರಿಕೆ (ನವೆಂಬರ್ 18) ಯು ದಕ್ಷಿಣ ಕನ್ನಡದ ಜಿಲ್ಲೆಯಲ್ಲಿ ಬಸ್ ಪ್ರಯಾಣ ದರ ಏರಿಕೆಯ ವಿರುದ್ಧದ ಚಳುವಳಿಯ ಬಗ್ಗೆ ಬರೆದ ವರದಿಯಿಂದ ಆಯ್ದ ಸಾಲುಗಳಿವು.

ನಾಗೇಶಕುಮಾರ್ - ಕೃಷ್ಣಪ್ಪ ಕೊಂಚಾಡಿ

ನವೆಂಬರ್ 1 ರಿಂದ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಖಾಸಗಿ ಬಸ್ ಪ್ರಯಾಣದರ ಶೇಕಡಾ 10ರಷ್ಟು ಹೆಚ್ಚಳವಾಯಿತು. ಡಿಸಿಲ್ ಬೆಲೆ ಏರಿಕೆ, ಬಸ್‌ಗಳ ಬಿಡಿಬಾಗಗಳ ದರ ಏರಿಕೆಯ ಕಾರಣ ಬಸ್ ದರ ಏರಿಕೆ ಅನಿವಾರ್ಯವೆನ್ನುವುದು ಬಸ್ ಮಾಲಿಕರ ಸಬೂಬು. ಆದರೆ ವಾಸ್ತವತೆ ಹಾಗಿಲ್ಲ. ಬಹುತೇಕ ಬಿಡಿಭಾಗಗಳ ದರವು ಅಂತಾರಾಷ್ಟ್ರೀಯ ಮಾರುಕಟ್ಟೆಗಳಲ್ಲಿ ಇತ್ತೀಚಿನ ದಿನಗಳಲ್ಲಿ ಇಳಿಕೆಯಾಗುತ್ತಿದೆ. ಹಾಗೆಯೇ ಡಿಸೀಲ್ ದರ 90 ಪೈಸೆ ಏರಿದೆಯೆಂಬ ಕಾರಣವೂ ದರಏರಿಕೆಗೆ ಸಮರ್ಥನೀಯವೆನಿಸದು. ಏಕೆಂದರೆ ಇತ್ತೀಚಿನ ದಿನಗಳಲ್ಲಿ ಹದಿನೈದು ದಿನಗಳಿಗೊಮ್ಮೆ ಪೆಟ್ರೋಲಿಯಂ ದರ ಪರಿಷ್ಕರಣೆ ನಡೆಯುತ್ತಿದೆ. ನವೆಂಬರ್ 15 ಮತ್ತು 30 ರಂದು ಎರಡು ಬಾರಿ ಪರಿಷ್ಕರಣೆಯಾಗಿ ಇದೀಗ ರೂ.1.20 ರಷ್ಟು ಇಳಿಕೆಯಾಗಿದೆ. ನ್ಯಾಯವಾಗಿ ನೋಡಿದರೆ ನವೆಂಬರ್‌ಗೆ ಹಿಂದೆಯಿದ್ದ ಪ್ರಯಾಣದರವನ್ನು ಇಳಿಸಬೇಕಾಗುತ್ತದೆ. ಆದರೆ ಕೇವಲ ಧನದಾಹಿಗಳಾದ ಹಾಗೂ ಯಾವುದೇ ಸಾಮಾಜಿಕ ಕಾಳಜಿ, ಜವಾಬ್ದಾರಿಯಿಲ್ಲದ ದಕ್ಷಿಣ ಕನ್ನಡ ಜಿಲ್ಲೆಯ ಬಸ್ ಮಾಲಿಕರಿಂದ ಇಂತಹ ಔದಾರ್ಯವನ್ನು ನಿರೀಕ್ಷಿಸುವುದು ಮೂರ್ಖತನ. ಜಿಲ್ಲೆಯ ಜನಸಾಮಾನ್ಯರ ಕಿಸೆಗೆ ಕನ್ನ ಹಾಕುವ ಏಕಮಾತ್ರ 'ಅಜೆಂಡಾ' ಹೊಂದಿರುವ ಈ ಧನದಾಹಿಗಳು ಯಾವತ್ತೂ ಪೆಟ್ರೋಲ್ ದರ ಏರಿಕೆಯ ಸಂದರ್ಭವನ್ನು ಕಾಯುತ್ತಲೇ ಜಿಲ್ಲೆಯ ಜನರನ್ನು ಹಗಲು ದರೋಡೆ ಮಾಡಲು ಹೊಂಚುಹಾಕುವವರು ಇವರು.

ಜಿಲ್ಲಾಧಿಕಾರಿ ಕರ್ತವ್ಯವೇನು?

ಈತನ್ಮಧ್ಯೆ ಎ.ಕೆ.ಮೊನ್ನಪ್ಪ ಎಂಬ ಹೆಸರಿನ ಓರ್ವ ಸಂವೇದನರಹಿತ, 'ಕ್ರಿಮಿನಲ್' ಎಂಬ ಬಿರುದನ್ನು ಹೈಕೋರ್ಟ್ ನಿಂದ (ಕೆ.ಎ.ಎಸ್ ಪರೀಕ್ಷೆ ಹಗರಣ) ಪಡಕೊಂಡ ವ್ಯಕ್ತಿಯೋರ್ವ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿ ಪಟ್ಟ ಅಲಂಕರಿಸಿದುದು ಬಸ್ ಮಾಲಿಕರಿಗೆ ಮಹಾ ವರದಾನವಾಯಿತು. ಬ್ಯೂಟಿ ಪಾರ್ಲರ್, ಶಾಪಿಂಗ್ ಕಾಂಪ್ಲೆಕ್ಸ್, ಕಕ್ಕಸು ಉದ್ಘಾಟನೆಗಳು ಜಿಲ್ಲಾಧಿಕಾರಿಯ ಪರಮಕರ್ತವ್ಯವೆಂಬುದು ಅದರಲ್ಲೇ ಧನ್ಯತೆ ಹೊಂದುವ ಈತನಿಗೆ ಜನಸಾಮಾನ್ಯರ ನೋವು, ದುಮ್ಮಾನಗಳ ಅರ್ಥವೇ ಆಗದು.

ಬಸ್ ದರ ಏರಿಕೆ ವಿರೋಧಿ ಚಳುವಳಿ ಜಿಲ್ಲೆಗೆ ಹೊಸದಲ್ಲ. 1997ರಲ್ಲಿ ಅಂದಿನ ಜಿಲ್ಲಾಡಳಿತ ಬಸ್ ದರ ಏರಿಸಿದಾಗ ಡಿ.ವೈ.ಎಫ್.ಐ ನೇತೃತ್ವದಲ್ಲಿ ನಡೆದ ಯಶಸ್ವಿ ಹೋರಾಟ ಇಂದಿಗೂ ಜನಜನಿತ. ಅಂದು ಮೂರು ದಿನ ಜಿಲ್ಲೆಯಾದ್ಯಂತ ಬಸ್‌ಗಳು ಚಲಿಸಲಿಲ್ಲ. ಅದು ಬಸ್ ಮಾಲಿಕರಿಗೆ ಮರೆಯಲಾಗದ ಪಾಠವಾಗಿತ್ತು. 2000ರಲ್ಲಿ ಮತ್ತೊಮ್ಮೆ ಬಸ್ ದರ ಏರಿಕೆ ಪ್ರಸ್ತಾಪವಾದಾಗ ಅಂದಿನ ಜಿಲ್ಲಾಧಿಕಾರಿ ರಮಣಾರೆಡ್ಡಿಯವರು ಜನಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸಿ ಜಿಲ್ಲೆಯ ಜನತೆಯ ಪಕ್ಷಪಾತವಹಿಸಿ ಧನದಾಹಿ ಬಸ್ ಮಾಲಿಕರ ದುರಾಸೆಗಳಿಗೆ ಅಡ್ಡಿಯಾಗಿದ್ದರು. ಹಾಗೆ ನೋಡಿದರೆ ಈ ಹಿಂದಿನ ಬಹುತೇಕ ಎಲ್ಲಾ ಜಿಲ್ಲಾಧಿಕಾರಿಗಳು ಪ್ರಜಾಪ್ರಭುತ್ವ ರೀತಿಯಲ್ಲಿ ಜನಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸಿಯೇ ತೀರ್ಮಾನಕ್ಕೆ ಬರುತ್ತಿದ್ದರು. ಆದರೆ ಈಗಿನ ಜಿಲಾದಿಕಾರಿ ಎ.ಕೆ.ಮೊನಪ್ಪ, ಬಸ್ ಮಾಲಿಕರಿಗೆ ಸುಲಭದ ತುತ್ತಾದ 'ಕರಾವಳಿ ಅಲೆ' ಸಂಜೆ ಪತ್ರಿಕೆಯ ಸಂಪಾದಕರ ಮಾತಿನಲ್ಲಿ ಹೇಳುವುದಾದರೆ (ತಾ.19-11-02) "ಜಿಲ್ಲಾಧಿಕಾರಿ ಮತ್ತು ಖಾಸಗೀ ಬಸ್ ಮಾಲಿಕರ ನಡುವೆ ಅದ್ಯಾವುದೋ 'ಅಪವಿತ್ರ ಹೊಂದಾಣಿಕೆ' ನಡೆದಿದೆ ಎಂದೆಣಿಸುವುದು ತಪ್ಪೇನೂ ಆಗುವುದಿಲ್ಲ. ಈಗಿನ ಜಿಲ್ಲಾಧಿಕಾರಿ ತೆಗೆದುಕೊಂಡ ಅನೇಕ ಜನವಿರೋಧಿಕ್ರಮಗಳು ಮತ್ತು ನಡತೆಗಳ ಸರಣಿಯಲ್ಲಿ ಏಕಪಕ್ಷೀಯವಾಗಿ ಅವರು ನಿರ್ಧರಿಸಿದ ಬಸ್ ಪ್ರಯಾಣದರ ಏರಿಕೆಯೂ ಸೇರಿದೆ ಎಂದು ಚರಿತ್ರೆ ದಾಖಲಿಸುವುದರಲ್ಲಿ ಸಂಶಯವಿಲ್ಲ." **ಲಕ್ಷಗಟ್ಟಲೆ ಜನಸಾಮಾನ್ಯರ ಹಿತಾಸಕ್ತಿ ರಕ್ಷಿಸಬೇಕಾಗಿದ್ದ ಜಿಲ್ಲಾಧಿಕಾರಿ ಮೊನ್ನಪ್ಪ 300 ಮಂದಿ ಬಸ್ ಮಾಲಿಕರ ಗಂಟು ಕಾಯಲು ಹೊರಟಿರುವುದು ನಾಚಿಕೆಗೇಡಿನ ಸಂಗತಿ.**

ಹೋರಾಟದ ಕಿಡಿ

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ದಿನನಿತ್ಯವೂ ಬಸ್ಸನ್ನು ಅವಲಂಬಿಸುವ ಮಂದಿ ಸುಮಾರು 10 ಲಕ್ಷ ದಷ್ಟಿದ್ದಾರೆ. ಇಂದು ಗ್ರಾಮಾಂತರ ಪ್ರದೇಶಗಳಿಂದ ಮಂಗಳೂರು ನಗರಕ್ಕೆ ಎಸ್‌ಟಿಡಿ ಬೂತ್‌ಗಳಲ್ಲಿ ಕೆಲಸ ಮಾಡುವ, ಬಟ್ಟೆ ಅಂಗಡಿಗಳಲ್ಲಿ ಸೇಲ್ಸ್‌ಮ್ಯಾನ್, ಸೇಲ್ಸ್‌ಗರ್ಲ್‌ಗಳಾಗಿ ದುಡಿಯುವ ಸಹಸ್ರಗಟ್ಟಲೆ ಜನರು ಬಸ್ಸಿನಲ್ಲೇ ಪಯಣಿಸುತ್ತಾರೆ. ಬಹುತೇಕ ಅಸಂಘಟಿತರಾಗಿರುವ ಇವರ ತಿಂಗಳ ವರಮಾನ ರೂ. 800ರಿಂದ ರೂ.1500. ಇವರಿಗೆ ಟಿಟ್ಟ ಭತ್ಯೆಯಂತೂ ಇಲ್ಲವೇ ಇಲ್ಲ. ದಿನಕ್ಕೆ ರೂ.4 ಹೆಚ್ಚಾಗಿ ಖರ್ಚು ಮಾಡಿದರೆ ತಿಂಗಳ ಸಂಬಳದಲ್ಲಿ ಉಳಿಯುವುದೇನು? ಹೊಟ್ಟೆ ಹೊರೆಯುವುದೆಂತು? ಜಿಲ್ಲೆಯಲ್ಲಿ ಇಂತಹ ಲಕ್ಷಾಂತರ ಮಂದಿಗೆ ಮೌನವಾಗಿ ರೋದಿಸುವುದೊಂದೆ ದಾರಿ.

ನವೆಂಬರ್ 1 ರಂದು ದಿಢೀರನೇ ಬಸ್ ದರ ಏರಿಕೆಯಾದಾಗ ಲಕ್ಷಾಂತರ ಮಂದಿ ಕಂಗೆಟ್ಟುಹೋದರು. ಬಸ್ ಮಾಲಿಕರ 'ಹಗಲು ದರೋಡೆ' ಬಗ್ಗೆ ರೋಷವುಕ್ಕುತ್ತಿದ್ದರೂ ಮೌನವಾಗಿ ಹಿಡಿಶಾಪ ಹಾಕಲಷ್ಟೇ ಸಮರ್ಥರಾದರು. ತಮ್ಮ ನೋವನ್ನು ಯಾರಾದರೂ ಪ್ರತಿಬಿಂಬಿಸಿಯಾರು ಎಂಬ ಭರವಸೆಯಿಂದ ಎದುರು ನೋಡುತ್ತಿದ್ದರು. ಇಂತಹ ಮೌನವನ್ನು ಒಡೆದು ಹೋರಾಟದ ಕಿಡಿಯೊಂದು ಹುಟ್ಟಿಕೊಂಡದ್ದೆ ಆರಂಭದಲ್ಲಿ ಪ್ರಜಾವಾಣಿಯ ವರದಿಯಲ್ಲಿ ಹೇಳಿದಂತೆ - ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್‌ನ ನೇತೃತ್ವದಲ್ಲಿ. ನವೆಂಬರ್ 4 ರಂದು ಸ್ಥಳೀಯ ಘಟಕಗಳಲ್ಲಿ ಪಂಜಿನ ಮೆರವಣಿಗೆಗಳ ಮೂಲಕ ಹುಟ್ಟಿಕೊಂಡ ಹೋರಾಟದ ಅಲೆಗಳು ಇಂದು ಜಿಲ್ಲೆ ತುಂಬಾ ಪಸರಿಸಿವೆ. ಡಿ.ವೈ.ಎಫ್.ಐ ಯು



ಚಳುವಳಿಗಾರರ ಮೇಲೆ ಪೋಲೀಸ್ ದಬ್ಬಾಳಿಕೆ. ಆದರೂ ಮಣಿಯದ ಯುವಚೇತನಗಳು

ಹೋರಾಟದ ದಾರಿತಪ್ಪಿಸಲು ಪೋಲೀಸ್ ಪಿತೂರಿ ಲಾಠಿಚಾರ್ಜ್-ಬಂಧನ-ಸುಳ್ಳು ಮೊಕದ್ದಮೆ ಹೂಡಿಕೆ

ಬಸ್ ಮಾಲೀಕರ ಕುಕೃತ್ಯವನ್ನು ಬೆಂಬಲಿಸುವ ಜಿಲ್ಲಾಡಳಿತ ಒಂದೆಡೆಯಾದರೆ, ಈ ಅನ್ಯಾಯವನ್ನು ವಿರೋಧಿಸಿ ಶಾಂತಿಯುತ ಪ್ರತಿಭಟನೆಯನ್ನು ಮಾಡುತ್ತಿರುವವರನ್ನು ದಮನಿಸುವ ಪೋಲೀಸ್ ಆಡಳಿತ ಇನ್ನೊಂದೆಡೆ. ಡಿಸೆಂಬರ್ 3 ರಂದು ಮಂಗಳೂರಿನ ಕೇಂದ್ರದಲ್ಲಿ ನ್ಯಾಯಯುತ ಹೋರಾಟ ನಡೆಸುತ್ತಿದ್ದ ಸಿಪಿಐ(ಎಂ), ಸಿಪಿಐ ಮತ್ತು ಜಾ.ಜನತಾದಳದ ಸಹಸ್ರಾರು ಕಾರ್ಯಕರ್ತರ ಮೇಲೆ ಪೋಲೀಸರು ನಡೆಸಿದಂತಹ ಅಮಾನುಷ ದೌರ್ಜನ್ಯ ಘಟನೆ ಜಿಲ್ಲೆಯಲ್ಲಿ ಹಿಂದೆಂದೂ ನಡೆದಿಲ್ಲ. ಶಾಂತಿಯುತ 'ವಾಗಿ ರಸ್ತೆ ತಡೆ ನಡೆಸುತ್ತಿದ್ದ ಕಾರ್ಯಕರ್ತರತ್ತ ಖಾಸಗಿ ಬಸ್ಸನ್ನು ನುಗ್ಗಿಸಿ ಚಳವಳಿಯನ್ನು ಹಿಂಸಾತ್ಮಕಗೊಳಿಸಲು ಪೋಲೀಸ್ ಆಡಳಿತ ನಡೆಸಿದ ಪೂರ್ವಯೋಜಿತ ಸಂಚು ಅದು. ನೂರಾರು ಮಹಿಳಾ ಪ್ರತಿಭಟನೆಕಾರರಿದ್ದರೂ ಬೆರಳಣಿಕೆಯ ಮಹಿಳಾ ಪೋಲೀಸರು ಹಾಜರಿದ್ದು ಪುರುಷ ಪೋಲೀಸರೇ ಮಹಿಳಾ ಕಾರ್ಯಕರ್ತರ ಮೇಲೆ ನಡೆಸಿದ ದೈಹಿಕ ಹಲ್ಲೆ ಜಿಲ್ಲಾ ಪೋಲೀಸ್ ಆಡಳಿತ ರಾಕ್ಷಸೀ ಮನೋಭಾವಕ್ಕೆ ಸಾಕ್ಷಿ. ಸ್ವಯಂ ಪ್ರಚೋದಿತರಾಗಿ ಏಕಾಏಕಿ ಲಾಠಿಚಾರ್ಜು ನಡೆಸಿ ಪ್ರತಿಘಟನಾ ಕಾರರನ್ನು ಮಾತ್ರವಲ್ಲ. ಆಸುಪಾಸಿನಲ್ಲಿ ಹೋಗುತ್ತಿದ್ದ ಮುಗ್ಧ ಮಹಿಳೆಯರ ಹಾಗೂ ವೃದ್ಧರ ಮೇಲೂ ಲಾಠಿ ಚಾರ್ಜು ನಡೆಸಿ ನೂರಾರು ಮಂದಿಯನ್ನು ಗಾಯಗೊಳಿಸಿದ ಪೋಲೀಸರ ಹೇಡಿತನದ ಹೇಯಕೃತ್ಯ ಉಗ್ರ ಖಂಡನೀಯ. ಇಷ್ಟು ಮಾತ್ರವಲ್ಲ ಡಿ.ವೈ.ಎಫ್.ಐ ಕಛೇರಿ' ವಿಕಾಸ' ಕಛೇರಿಗೂ ಹೊಕ್ಕಿ ಡಿ.ವೈ.ಎಫ್.ಐ ರಾಜ್ಯ ಸಮಿತಿ ಸದಸ್ಯೆ ಮಿನಾಕ್ಷಿಯವರ ಮೇಲೆ ಹಲ್ಲೆ ನಡೆಸಲು ಯತ್ನಿಸಿರುವುದು ಪ್ರಜಾಪ್ರಭುತ್ವ ಚಳುವಳಿಗೆ ಪೋಲೀಸರು ಎಸೆದ ಸವಾಲು. ದಿನದಿಂದ ದಿನಕ್ಕೆ ಉಗ್ರರೂಪ ಪಡೆಯುತ್ತಿರುವ ಚಳುವಳಿಯ ದಾರಿಯನ್ನು ತಪ್ಪಿಸಲು ಪೋಲೀಸರು ನಿರಂತರ ಪಿತೂರಿ ನಡೆಸುತ್ತಿದ್ದಾರೆ. ಸುನೀಲ್ ಕುಮಾರ್ ಬಜಾಲ್ ಒಳಗೊಂಡು ಅನೇಕ ನಾಯಕರ ಮೇಲೆ ಸುಳ್ಳು ಮೊಕದ್ದಮೆ ಹೂಡಲಾಗಿದೆ.

ಡಿ.ವೈ.ಎಫ್.ಐ ನ ಕಛೇರಿಗೆ ನುಗ್ಗಿದ ಪೋಲೀಸರು ಅಲ್ಲಿದ್ದ ಕಾರ್ಯಕರ್ತರ ಮೇಲೂ ದಬ್ಬಾಳಿಕೆ ನಡೆಸಿದ್ದಾರೆ. ಈ ಕೃತ್ಯದಲ್ಲಿ ಭಾಗಿಯಾದ ಪೋಲೀಸರ ಮೇಲೆ ಕ್ರಮ ಜರುಗಿಸುವಂತೆ ಡಿ.ವೈ.ಎಫ್.ಐ ಜಿಲ್ಲಾ ಸಮಿತಿ ಆಗ್ರಹಿಸಿದೆ. ಈ ದೌರ್ಜನ್ಯವನ್ನು ಖಂಡಿಸಿ, ಹೋರಾಟದ ಯಶಸ್ಸಿಗಾಗಿ ಕಾಲೇಜ್ ವಿದ್ಯಾರ್ಥಿಗಳು 5-12-2002ರಂದು ಶಿಕ್ಷಣ ಸಂಸ್ಥೆ ಬಂದ್ ಯಶಸ್ವಿಯಾಗಿ ನಡೆಸಿದ್ದಾರೆ.

ಸೃಷ್ಟಿಸಿದ ಹೋರಾಟದ ಕಿಡಿಯು ಕಳೆದ ಒಂದು ತಿಂಗಳಲ್ಲಿ ಹೋರಾಟದ ಜ್ವಾಲೆಯಾಗಿ ವರ್ಧಿಸಿರುವುದು, ಜಿಲ್ಲೆಯ ಎಡಪಕ್ಷಗಳಾದ ಸಿಪಿಐ(ಎಂ) ಮತ್ತು ಸಿಪಿಐ ಹಾಗೂ ಜಾತ್ಯಾತೀತ ಜನತಾದಳಗಳು ಜಂಟಿಯಾಗಿ ಬಸ್ ದರ ವಿರೋಧಿ ಹೋರಾಟದ ಅಂಗಣಕ್ಕೆ ಇಳಿದಿರುವುದೇ ಸಾಕ್ಷಿ. ಜಿಲ್ಲೆಯ ಜನತೆಯ ನೋವು ದುಮ್ಮಾನಗಳನ್ನು ಕಳೆದ ಒಂದು ತಿಂಗಳಲ್ಲಿ ಹೋರಾಟವಾಗಿ ಪರಿವರ್ತಿಸಿದ ಡಿ.ವೈ.ಎಫ್.ಐ ಇಂದು ಜನಸಾಮಾನ್ಯರ ಮೆಚ್ಚುಗೆ ಪ್ರೀತಿ ಸಂಪಾದಿಸಿದೆ. ಕರಾವಳಿ ಅಲೆ ಪತ್ರಿಕೆ (2-12-2002) " ಜಿಲ್ಲೆಯಲ್ಲಿ ಡಿ.ವೈ.ಎಫ್.ಐ ಬಸ್ ದರ ಏರಿಕೆಯ ವಿರುದ್ಧ ಮೊಟ್ಟಮೊದಲ ಧ್ವನಿ ಎತ್ತಿದಷ್ಟೇ ಅಲ್ಲ. ದರ ಏರಿಕೆಯನ್ನು ಹಿಂತೆಗೆದುಕೊಳ್ಳುವವರೆಗೂ ಹೋರಾಟ ಮಾಡುವುದಾಗಿ ಪಟ್ಟು ಹಿಡಿದಿದೆ" ಎಂದು ಶ್ಲಾಘಿಸಿದೆ. ಕಳೆದ ಒಂದು ತಿಂಗಳಲ್ಲಿ ಡಿ.ವೈ.ಎಫ್.ಐ ನಡೆಸಿರುವ ವೈವಿಧ್ಯಮಯ ಹೋರಾಟಗಳಲ್ಲಿ ಸಹಸ್ರ ಸಂಖ್ಯೆಯಲ್ಲಿ ಜನಸಾಮಾನ್ಯರು ಸ್ವಯಂಪ್ರೇರಿತರಾಗಿ ಭಾಗವಹಿಸಿದ್ದಾರೆ.

ನಿಲ್ಲದ ಚಳುವಳಿ

ಪೋಲೀಸರ ದಮನಕಾಂಡ

ಕಳೆದ ನವೆಂಬರ್ 4 ರಿಂದ ಪ್ರಾರಂಭವಾದ ಪಂಜಿನ ಮೆರವಣಿಗೆ, ಬಳ್ಳಾಲ್‌ಭಾಗ್, ಶಕ್ತಿನಗರ ಕೈಲಶೇಖರ್ ಕೊಂಚಾಡಿ, ಎಯ್ಯಾಡಿ, ಮೂಡಬಿದ್ರಿ, ಬಜಾಲ್‌ಗಳಲ್ಲಿ ನಡೆಯಿತು. ಅನಂತರ ರಸ್ತೆತಡೆ ಚಳುವಳಿಗಳು ಕೂಡ ವಿಕೇಂದ್ರಿಕೃತ ರೂಪದಲ್ಲಿ ನಡೆಯಿತು. ಆರ್.ಟಿ.ಓ ಕಛೇರಿಯಲ್ಲಿ ಜೀಪು ಧ್ವಂಸ ಮತ್ತು ಬೋರ್ಡಿಗೆ ಬೆಂಕಿ ಹಾಕಲಾಗಿದೆ ಎಂದು ಜಿಲ್ಲೆಯ 9 ಮಂದಿ ಪ್ರಮುಖ ನಾಯಕರ ಮೇಲೆ ಕೇಸು ಹಾಕಲಾಯಿತು.

ಈ ಐತಿಹಾಸಿಕ ಹೋರಾಟದ ನಾಯಕತ್ವ ವಹಿಸಿರುವ ಡಿ.ವೈ.ಎಫ್.ಐ ಯ ಜಿಲ್ಲಾ ಕಾರ್ಯದರ್ಶಿ ಸುನಿಲ್‌ಕುಮಾರ್ ಬಜಾಲ್‌ರವರು ಇದೀಗ ಎರಡು ಬಾರಿ ಡಿಸೇಲ್ ಬೆಲೆ ಇಳಿಕೆಯಾದ ಕಾರಣ ಒಂದು ಪೈಸೆಯಷ್ಟೂ ಬಸ್ ದರ ಏರಿಕೆ ಮಾಡುವ ಅಗತ್ಯವಿಲ್ಲವೆನ್ನುತ್ತಾರೆ. ನೆರೆಯ ಕೇರಳ, ತಮಿಳ್ನಾಡು, ಮಹಾರಾಷ್ಟ್ರಗಳಲ್ಲಿ ಸಾರಿಗೆ ದರ ಏರಿಕೆಯಾಗದಿರುವುದನ್ನು ಪ್ರಸ್ತಾಪಿಸುವ ಅವರು ಬಸ್ ದರ ಏರಿಕೆಯಾಗದಿದ್ದರೆ ನಷ್ಟವನ್ನನು ಭವಿಸುತ್ತೇವೆ ಎಂದು ಪ್ರಲಾಪಿಸುವ ಬಸ್ ಮಾಲಿಕರ ಪೊಳ್ಳುತನವನ್ನು ಬಯಲಿಗೆಳೆಯುತ್ತಾರೆ. ಜಿಲ್ಲಾ ಅಧ್ಯಕ್ಷ ಕೃಷ್ಣಪ್ಪ ಕೊಂಚಾಡಿಯವರು ಜಿಲ್ಲೆಯ ಬಸ್ ಮಾಲಿಕರ ನಿರಂತರ ಹಗಲು ದರೋಡೆಯನ್ನು ತಪ್ಪಿಸಲು ಖಾಸಗಿ ಬಸ್‌ರೂಟ್‌ಗಳ ರಾಷ್ಟ್ರೀಕರಣವೇ ಪರಿಹಾರವೆನ್ನುತ್ತಾರೆ. ಲಕ್ಷಾಂತರ ಜನರ ನೋವಿಗೆ ದನಿ ಕೊಡುವ ಹೋರಾಟ ತಮ್ಮದು ಎಂದು ಅಭಿಮಾನದಿಂದ ಹೇಳುವ ಅವರು ಎಷ್ಟೇ ಕಷ್ಟ ನಷ್ಟ ಬಂದರೂ ಹೋರಾಟದ ಪಥದಿಂದ ವಿಚಲಿತರಾಗೆವು ಎಂದು ಡಿ.ವೈ.ಎಫ್.ಐ ಕಾರ್ಯಕರ್ತರಲ್ಲಿ ಹುಮ್ಮಸ್ಸು ತುಂಬುತ್ತಾರೆ.

ಜಿಲ್ಲೆಯಲ್ಲಿ ಹೋರಾಟದ ಕಾವು ದಿನೇ ದಿನೇ ವೃದ್ಧಿಸುತ್ತಿದೆ. ಸ್ಪಂದನರಹಿತ, ನರಸತ್ತ ಜಿಲ್ಲಾಧಿಕಾರಿ ಮೊಣ್ಣಪ್ಪ ತಾನು ಜನಸೇವಕ ಎಂಬುದನ್ನು ಮರೆತು ಬಸ್ ಮಾಲಿಕರ ಸಂಘದ ವಕ್ತಾರನೆಂಬಂತೆ ದಿನೇ ದಿನೇ ಹೇಳಿಕೆ ನೀಡುತ್ತಿದ್ದಾನೆ. ಡಿ.ವೈ.ಎಫ್.ಐ ಮತ್ತು ಎಡಪಕ್ಷಗಳು ತಮ್ಮ ಹೋರಾಟವನ್ನು ತೀಕ್ಷ್ಣಗೊಳಿಸಲು ಕಾರ್ಯಕ್ರಮಗಳನ್ನು ಹಾಕಿಕೊಂಡಿವೆ. ಜಿಲ್ಲೆಯ ಜನತೆ ಆಶಾಭಾವನೆಯಿಂದ ಆ ಹೋರಾಟದ ದಿನಗಳನ್ನು ಎದುರು ನೋಡುತ್ತಿದೆ.

ಸಿಪಿಐ(ಎಂ), ಜೆಡಿ(ಎಸ್), ಸಿಪಿಐ ಚಳುವಳಿ

ಕಳೆದ ನವೆಂಬರ್ 1 ರಿಂದ ಮಂಗಳೂರಿನ ಖಾಸಗೀ ಬಸ್ ಮಾಲಿಕರು ಶೇ.10ರಷ್ಟು ಬಸ್ ದರವನ್ನು ಏಕಾಏಕಿ ಏರಿಸಿದುದರಿಂದ ಏರಿಸಿದ ಬಸ್‌ದರವನ್ನು ಇಳಿಸಬೇಕೆಂದು ಕಳೆದ ಒಂದು ತಿಂಗಳಿಂದ ವಿದ್ಯಾರ್ಥಿ ಯುವಜನ ಮತ್ತಿತರ ಸಂಘಟನೆಗಳು ವಿವಿಧ ರೀತಿಯ ಪ್ರತಿಭಟನಾ ಚಳುವಳಿಗಳನ್ನು ನಡೆಸಿ ಜಿಲ್ಲಾಧಿಕಾರಿಯವರನ್ನು ಒತ್ತಾಯಿಸಿದ್ದರು. ಆದರೆ ಜಿಲ್ಲಾಧಿಕಾರಿಯವರಾಗಲಿ, ಬಸ್ ಮಾಲಕರಾಗಲೀ ಸಾರ್ವಜನಿಕರ, ವಿವಿಧ ರಾಜಕೀಯ ಪಕ್ಷಗಳ ಮತ್ತು ಸಂಘ ಸಂಸ್ಥೆಗಳ ಒತ್ತಾಯವನ್ನು ಪರಿಗಣಿಸದೇ ಮೌನವಾಗಿದ್ದುದರಿಂದ ಮತ್ತು ಜನಸಾಮಾನ್ಯರ ಮೇಲೆ ಹಾಕಿರುವ ಪ್ರಯಾಣದ ವೆಚ್ಚವನ್ನು ಕಡಿತ ಮಾಡಲು ಯಾವುದೇ ಕ್ರಮ ತೆಗೆದುಕೊಳ್ಳಲು ಮುಂದಾಗದ್ದರಿಂದ ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯು ಈ ಬಗ್ಗೆ ತೀವ್ರ ಕಾರ್ಯಕ್ರಮ ನಡೆಸುವ ಬಗ್ಗೆ ತೀರ್ಮಾನಿಸಿದ್ದು, ಜಾತ್ಯಾತೀತ ಜನತಾದಳ ಮತ್ತು ಸಿಪಿಐ ಪಕ್ಷಗಳೊಂದಿಗೆ ಸಮಾಲೋಚನೆ ನಡೆಸಿ ತಾ.3.12.02 ರಂದು ಸಾಮೂಹಿಕ ಬಸ್ ತಡೆ ಚಳುವಳಿ ನಡೆಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು.

ಡಿ. 3 ರಂದು ಬೆಳಿಗ್ಗೆ ಮಂಗಳೂರು ಮೈದಾನ ಕಚೇರಿಯ ಬಳಿ ಸೇರಿದ ಒಂದು ಸಾವಿರಕ್ಕೂ ಮಿಕ್ಕಿದ ಪ್ರತಿಭಟನಾಕಾರರ ಮೆರವಣಿಗೆಯು ಹೊರಟು ಮಂಗಳೂರು ಕೇಂದ್ರ ಸಿಗ್ನಲ್ ವೃತ್ತದಲ್ಲಿ ಜಮಾಯಿಸಿ ಭಾರೀ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನಾಕಾರರನ್ನುದ್ದೇಶಿಸಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕೆ.ಆರ್.ಶ್ರಿಯಾನ್ ಮಾತನಾಡಿ ಬಸ್ ಮಾಲಿಕರು ಏಕಾಏಕಿ ಬಸ್‌ದರ ಏರಿಕೆ ಮಾಡಿ ಜನಸಾಮಾನ್ಯರ ಕಿಸೆ ಕತ್ತರಿಸುವ ಕೃತ್ಯವನ್ನು ನಿಲ್ಲಿಸಬೇಕೆಂದೂ, ಬಸ್‌ದರ ಇಳಿಸುವಂತೆ ಬಸ್ ಮಾಲಿಕರನ್ನೂ, ಜನಪ್ರತಿನಿಧಿಗಳನ್ನೂ ಕರೆದು ಸಭೆ ನಡೆಸಿ ಪರಿಹಾರ ನೀಡಬೇಕಾದ ಜಿಲ್ಲಾಧಿಕಾರಿಗಳು ಮೌನತಾಳಿರುವುದು ಹಾಗೂ ಸಾರ್ವಜನಿಕರನ್ನು ನಂಬಿಕೆಗೆ ತೆಗೆದುಕೊಳ್ಳದಿರುವುದು ವಿಷಾದಕರವು ಖಂಡನೀಯವೂ ಆಗಿದೆ ಎಂದು ಹೇಳಿದರು. ಆದ್ದರಿಂದ ಜಿಲ್ಲಾಧಿಕಾರಿಗಳು ಈ ಬಗ್ಗೆ ತುರ್ತುಕ್ರಮ ವಹಿಸಬೇಕೆಂದೂ ಅದೇ ರೀತಿ ಎಲ್ಲಾ ಉಸ್ತುವಾರಿ ಸಚಿವರು ತೀವ್ರ ಗಮನ ಹರಿಸಬೇಕೆಂದೂ, ಜನತೆಯ ಒತ್ತಾಯಕ್ಕೆ ಗೌರವ ನೀಡಬೇಕೆಂದೂ ಅವರು ಹೇಳಿದರು. ಬಸ್‌ದರ ಇಳಿಸದಿದ್ದರೆ ಈ ರೀತಿಯ ಹೋರಾಟಗಳು ಇನ್ನೂ ಮುಂದುವರಿಯುವುದೆಂದು ಅವರು ಎಚ್ಚರಿಸಿದರು.

ಬಳಿಕ ಜಾತ್ಯಾತೀತ ಜನತಾದಳದ ಮಂಗಳೂರು ನಗರ ಜಿಲ್ಲಾಧ್ಯಕ್ಷ ಐವನ್ ಡಿಸೋಜರು, ಸಿಪಿಐ ಜಿಲ್ಲಾ ಕಾರ್ಯದರ್ಶಿ ಬಿ.ಕೆ, ಕೃಷ್ಣಪ್ಪನವರು ಮತ್ತು ದಲಿತ ಸಂಘರ್ಷ ಸಮಿತಿಯ ಮುಖಂಡರು ಈ ಸಂದರ್ಭದಲ್ಲಿ ಮಾತನಾಡಿದರು.

ಕೆ.ಆರ್. ಶ್ರಿಯಾನ್ ಮತ್ತಿತರ ಮುಖಂಡರ ಬಂಧನ

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಕೆ.ಆರ್.ಶ್ರೀಯಾನ್, ಜಾತ್ಯಾತೀತ ಜನತಾದಳದ ಮುಖಂಡ ಐವನ್ ಡಿಸೋಜ, ಸಿಪಿಐ ಮುಖಂಡ ಬಿ.ಕೆ.ಕೃಷ್ಣಪ್ಪ ಮತ್ತು ಸಿಪಿಐ(ಎಂ) ಜಿಲ್ಲಾ ಮುಖಂಡರಾದ ಜೆ.ಬಾಲಕೃಷ್ಣ ಶೆಟ್ಟಿ, ಸುಕುಮಾರ, ಯಾದವ ಶೆಟ್ಟಿ ಮತ್ತು ಕೆ.ಬಾಬು ದೇವಾಡಿಗ ಜಾತ್ಯಾತೀತ ಜನತಾದಳದ ಮುಖಂಡರಾದ ಜೆ.ಎಸ್.ನರಾನ್ನಾ, ಅಹಮ್ಮದ್, ಜಾಜ್ ಅಲ್ಮೇಡಾ, ಗೂಡ್ವಿನ್ ಸಿಕ್ವೇರಾ ಮೊದಲಾದವರನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ ಬಳಿಕ ಅವರನ್ನು ಬಿಡುಗಡೆ ಮಾಡಲಾಯಿತು. ಈ ಚಳುವಳಿಯಲ್ಲಿ ಭಾಗವಹಿಸಿ ಬಂಧನಕ್ಕೊಳಗಾದವರಲ್ಲಿ ಸಿಪಿಐ(ಎಂ) ಜಿಲ್ಲಾ ಸಮಿತಿ ಸದಸ್ಯರುಗಳಾದ ಅಬ್ರಹಾಂ ಕರ್ಣಿಡ, ವಸಂತ ಆಚಾರಿ, ಬಿ.ಎಂ.ಭಟ್, ಶಿವಕುಮಾರ್, ರಮಣಿ, ಬಿ.ವಾಸುಗಟ್ಟಿ ,ಮಂಜಪ್ಪ ಅಲ್ಲದೆ ನೂರಾರು ಕಾರ್ಯಕರ್ತರೂ ಸೇರಿದ್ದಾರೆ. ಪೋಲೀಸರ ಕೃತ್ಯವನ್ನು ಎಲ್ಲರೂ ಒಕ್ಕೊರಲಿನಿಂದ ಖಂಡಿಸಿದ್ದಾರೆ. ಸುಳ್ಳು ಮೊಕದ್ದಮೆ ಹಿಂತೆಗೆಯಲು ಸಿಪಿಐ(ಎಂ) ಒತ್ತಾಯಿಸಿದೆ.



ಮಂಗಳೂರಿನಲ್ಲಿ ನಿತ್ಯವೂ ಪ್ರತಿಭಟನೆ

ಉಡುಪಿಯಲ್ಲಿ ವಿದ್ಯಾರ್ಥಿಗಳಿಂದ ತರಗತಿ ಬಹಿಷ್ಕಾರ, ರಸ್ತೆ, ತಡೆ

ಉಡುಪಿ ಹಾಗೂ ದ.ಕ. ಜಿಲ್ಲೆಯಲ್ಲಿ ಖಾಸಗಿ ಬಸ್ ಮಾಲಿಕರು ಪ್ರಯಾಣ ದರ ಏರಿಸಿದ್ದನ್ನು ವಿರೋಧಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಹಾಗೂ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್ (ಡಿ.ವೈ.ಎಫ್.ಐ) ನೇತೃತ್ವದಲ್ಲಿ ಉಡುಪಿ ಕೇಂದ್ರದಲ್ಲಿ ಸುಮಾರು 500ಕ್ಕೂ ಮಿಕ್ಕಿ ವಿದ್ಯಾರ್ಥಿಗಳು ತರಗತಿ ಬಹಿಷ್ಕರಿಸಿ ರಸ್ತೆ ತಡೆಯಲ್ಲಿ ಪಾಲ್ಗೊಂಡು ನಂತರ ಬಂಧನಕ್ಕೊಳಗಾದರು. ಪ್ರಸ್ತುತ ದರ ಏರಿಕೆಯು ಉಭಯ ಜಿಲ್ಲೆಯಲ್ಲಿ ಬಸ್‌ನಲ್ಲಿ ಪ್ರಯಾಣಿಸುವ ಲಕ್ಷಾಂತರ ವಿದ್ಯಾರ್ಥಿಗಳಿಗೆ ಹೊರೆಯಾಗಿವೆ. ಜಿಲ್ಲಾ ಆಡಳಿತವು ಬಸ್ ಮಾಲಿಕರ ಪರ ನೀತಿಯನ್ನು ಅನುಸರಿಸಿದೆ. ಡೀಸೆಲ್ ದರ ಇಳಿಕೆಯಾಗಿರುವುದನ್ನು ಪರಿಗಣನೆಗೆ ತೆಗೆದುಕೊಂಡು ಪ್ರಯಾಣದರವನ್ನು ಪುನರ್ ಪರಿಶೀಲನೆ ನಡೆಸಬೇಕೆಂದು ಎಸ್.ಎಫ್.ಐ ಆಗ್ರಹಿಸಿದೆ. ಎಸ್.ಎಫ್.ಐ. ಉಡುಪಿ ಜಿಲ್ಲಾ ಸಮಿತಿ, ಡಿ.ವೈ.ಎಫ್.ಐ ಜಿಲ್ಲಾ ಸಮಿತಿ, ಸರ್ವ ಕಾಲೇಜು ಪದವಿ ಪೂರ್ವ ವಿದ್ಯಾರ್ಥಿ ಸಂಘ ಹಾಗೂ ವಿ.ವಿ. ಸರ್ವ ಕಾಲೇಜು ಸಮನ್ವಯ ಸಮಿತಿ ಕರೆಯ ಮೇರೆಗೆ ನ. 21 ರಂದು ಜಿಲ್ಲೆಯ ವಿವಿಧೆಡೆಗಳಲ್ಲಿ ತರಗತಿ ಬಹಿಷ್ಕಾರ ಯಶಸ್ವಿಯಾಗಿ ಜರುಗಿದೆ. ಏರಿಸಿದ ಬಸ್ ಪ್ರಯಾಣದರವನ್ನು ಹಿಂದಕ್ಕೆ ತೆಗೆದುಕೊಳ್ಳಬೇಕಾಗಿ ಸಾಮಾನ ಮನಸ್ಕ ಸಂಘಟನೆಗಳು ಒತ್ತಾಯಿಸಿದ್ದು ಇಲ್ಲವಾದಲ್ಲಿ ಮುಂದಿನ ದಿನದಲ್ಲಿ ಹೋರಾಟವನ್ನು ತೀವ್ರಗೊಳಿಸುವುದಾಗಿ ಎಚ್ಚರಿಸಿವೆ. ಉಡುಪಿ ಕೇಂದ್ರದಲ್ಲಿ ನಡೆದ ರಸ್ತೆ ತಡೆ ಕಾರ್ಯಕ್ರಮದ ನೇತೃತ್ವವನ್ನು ಎಸ್.ಎಫ್.ಐ ಜಿಲ್ಲಾ ಕಾರ್ಯದರ್ಶಿ ಕವಿರಾಜ.ಎಸ್, ಡಿ.ವೈ.ಎಫ್.ಐ ಜಿಲ್ಲಾ ಕಾರ್ಯದರ್ಶಿ ಚಂದ್ರಶೇಖರ್ ವಿ. ಹಾಗೂ ಸಮಿತಿ ಸದಸ್ಯರಾದ ಝಿಯಾವುದ್ದಿನ್, ವಿದ್ಯಾರಾಜ್ ಹಾಗೂ ವಿದ್ಯಾರ್ಥಿ ಮುಖಂಡರಾದ ಸರಕಾರಿ ಪದವಿ ಪೂರ್ವ ಕಾಲೇಜಿನ ದೀಕ್ಷಾ ಶೆಟ್ಟಿ, ಸೌಮ್ಯ, ಆನಂದಸುವರ್ಣ ರಾಘವೇದ್ರ, ಶ್ರವಣ್, ಸುಧೀರ್, ಮಹೇಶ, ಕ್ರಿಶ್ಚಿಯನ್ ಪದವಿಪೂರ್ವ ಕಾಲೇಜಿನ ಮುಖಂಡರಾದ ಕೆ. ಭರತ್ ಪೈ, ಕೃಷ್ಣ, ರಾಘವೇದ್ರ, ರತೀಶ್, ಅಭಿಜಿತ್, ಪೂರ್ಣಪ್ರಜ್ಞಾ ಕಾಲೇಜಿನ ಮುಖಂಡರಾದ ಸಂಜಯ್, ದೀಪಕ್ ಹಾಗೂ ಇನ್ನಿತರ ಕಾಲೇಜಿನ ಮುಖಂಡರು ಭಾಗವಹಿಸಿದ್ದರು.

ಬ್ರಹ್ಮಾವರ

ಬ್ರಹ್ಮಾವರದಲ್ಲಿ ಎಸ್.ಎಂ.ಎಸ್. ಹಾಗೂ ಕ್ರಾಸ್ ಲ್ಯಾಂಡ್ ವಿದ್ಯಾರ್ಥಿಗಳು ತರಗತಿ ಬಹಿಷ್ಕಾರ ಮಾಡಿ ರಸ್ತೆ ತಡೆ ಪ್ರತಿಭಟನೆ ನಡೆಸಿದರು. ಕಾರ್ಯಕ್ರಮದ ಮುಖಂಡತ್ವವನ್ನು ಪ್ರದೀಪ್, ಪ್ರಶಾಂತ್, ಅಖಿಲ್ ಹೆಗ್ಡೆ ವಹಿಸಿದರು. ಅದೇ ರೀತಿ ಶಿರ್ವ, ಕಾಪು, ಮಣಿಪಾಲ, ಯು.ಪಿ.ಎಂ.ಸಿ., ಗರ್ಲ್ಸ್ ಕಾಲೇಜಿನ ವಿದ್ಯಾರ್ಥಿಗಳು ತರಗತಿ ಬಹಿಷ್ಕಾರ ಮಾಡಿದ್ದಾರೆ.



ರಸ್ತೆ ತಡೆ ಚಳುವಳಿ

ಕುಂದಾಪುರ

ಕುಂದಾಪುರದಲ್ಲಿ ಎಲ್ಲಾ ಶಾಲಾ ಕಾಲೇಜಿನ ವಿದ್ಯಾರ್ಥಿಗಳು ತರಗತಿ ಬಹಿಷ್ಕಾರ ಮಾಡಿ ನಂತರ ಮೆರವಣಿಗೆ ಮೂಲಕ (ಸುಮಾರು 1000 ಕ್ಕೂ ಮಿಕ್ಕಿ) ಸೇರಿ ತಹಸೀಲ್ ದಾರರಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯ ನೇತೃತ್ವವನ್ನು ಎಸ್.ಎಫ್.ಐ ತಾಲೂಕು ಅಧ್ಯಕ್ಷ ಬಿ.ಎಂ. ನಾಸೀರ್, ಕಾರ್ಯದರ್ಶಿ ರವಿ ಶಂಕರ್ ಎನ್. ಮತ್ತು ಡಿ.ವೈ.ಎಫ್.ಐ ತಾಲೂಕು ಕಾರ್ಯದರ್ಶಿ ಅಶ್ವಥ್ ಕುಮಾರ್ ವಹಿಸಿದ್ದರು.

ಕಾರ್ಕಳ

ಕಾರ್ಕಳ ತಾಲೂಕಿನ ಹಲವೆಡೆ ಪದವಿ ಪೂರ್ವ ಹಾಗೂ ಡಿಗ್ರಿ ವಿದ್ಯಾರ್ಥಿಗಳು ತರಗತಿ ಬಹಿಷ್ಕಾರ ಮಾಡಿದರು. ಇಲ್ಲಿಯ ನೇತೃತ್ವವನ್ನು ಎಸ್.ಎಫ್.ಐ ಜಿಲ್ಲಾ ಸಮಿತಿ ಸದಸ್ಯ ಶಶಿಧರ್ ಶೆಟ್ಟಿಯವರು ವಹಿಸಿದರು.

ವರದಿ : ಕವಿರಾಜ್

ಶೇರು ಮಾರಾಟದ ರಾಜಕೀಯ (ವಿವಾದ)

ಸಾರ್ವಜನಿಕ ವಲಯದ ಉದ್ದಿಮೆಗಳ ಶೇರು ಮಾರಾಟದ ವಿಷಯ ಎನ್.ಡಿ.ಎ ಸರ್ಕಾರದೊಳಗೇ ವಿವಾದವನ್ನೆಬ್ಬಿಸಿದೆ. ಪ್ರಮುಖ ತೈಲ ಕಂಪನಿಗಳಾದ ಹೆಚ್.ಪಿ.ಸಿ.ಎಲ್ ಮತ್ತು ಬಿಪಿಸಿಎಲ್‌ಗಳ ಶೇರು ಮಾರಾಟ ಸಂಘ ಪರಿವಾರದೊಳಗೇ ಒಡಕು ಧ್ವನಿಗಳನ್ನು ಹೊರಡಿಸಿತ್ತು. ಇದರ ನಿಜ ಕಾರಣವೇನು?

ಐಎಂಎಫ್ ಪ್ರತಿನಿಧಿಸುವ ವಿದೇಶೀ ಬಂಡವಾಳಿಗರು ಹೀಗೆನ್ನುತ್ತಾರೆ


1) ಅರುಣ ಶೌರಿಯವರು ಪ್ರತಿಪಾದಿಸಿರುವ ಈ ಶೇರು ಮಾರಾಟಕ್ಕೆ ಪ್ರತಿರೋಧ ಬಂದಿರುವುದು ಆರ್ಥಿಕ ಸುಧಾರಣಾ ಪ್ರಕ್ರಿಯೆಗೆ ಹಿನ್ನಡೆಯುಂಟು ಮಾಡುತ್ತಿದೆ ಎಂದು ಬೊಬ್ಬೆ ಹಾಕುತ್ತಿದ್ದಾರೆ.

2) ಆರ್ಥಿಕ ಸುಧಾರಣೆಯಲ್ಲಿ ಹಿನ್ನಡೆಯುಂಟಾಗಿರುವುದರಿಂದ ಕಳೆದ ಕೆಲವು ತಿಂಗಳುಗಳು ಕಡಿಮೆ ದರದ ಆರ್ಥಿಕ ಬೆಳವಣಿಗೆ ಕಾರಣ ಎಂದು ಹೇಳುತ್ತಿದ್ದಾರೆ.

ಹೀಗಾಗಿ ಹಣಕಾಸು ಖೋತಾದ ನಂತರ ಈ ಶೇರು ಮಾರಾಟ ಭಾರತದ ಅತ್ಯಂತ ದೊಡ್ಡ ಆಧುನಿಕ ಸಮಸ್ಯೆಯಾಗಿ ಹೊರಹೊಮ್ಮಿದೆ. ನಿರುದ್ಯೋಗ, ಬಡತನಗಳು ನಮ್ಮ ಆರ್ಥಿಕ ಸಮಸ್ಯೆಗಳ ಪಟ್ಟಿಯಲ್ಲಿ ಇರುವಂತೆ ಕಾಣದು.

ಶೇರು ಮಾರಾಟದ ಮಂತ್ರಿಗಳಾದ ಅರುಣ ಶೌರಿ ಹೆಚ್.ಪಿ.ಸಿ.ಎಲ್ ಮತ್ತು ಬಿಪಿಸಿಎಲ್‌ಗಳ ಶೇಕಡಾ 26ರಷ್ಟು ಶೇರುಗಳನ್ನು ಖಾಸಗೀಯವರಿಗೆ ಮಾರಿ ಅವುಗಳ ವ್ಯವಸ್ಥಾಪನೆಯನ್ನು ಅವರಿಗೆ ನೀಡುವ ಉತ್ಸಾಹದಲ್ಲಿದ್ದಾರೆ. ಪ್ರಾಯಶಃ ಉಪಪ್ರಧಾನಿಯವರ ಕುಮ್ಮಕ್ಕಿನಿಂದ ಮಂತ್ರಿಗಳಾದ ರಾಮ ನಾಯ್ಕ, ಜಾರ್ಜ್ ಫರ್ನಾಂಡಿಸ್ ಮತ್ತು ಮುರಳಿ ಮನೋಹರ ಜೋಷಿ ಈ ಕ್ರಮದ ವಿರುದ್ಧ ಧ್ವನಿಯೆತ್ತಿದ್ದಾರೆ.

ರಾಮ ನಾಯ್ಕರಿಗೆ ಈ ಮಾರಾಟದಿಂದ ಅವರ ಅಧಿಕಾರದ ಹರಹು ಕಡಿಮೆಯಾಗುತ್ತದೆ. ಜಾರ್ಜ್ ಫರ್ನಾಂಡಿಸರು ಮಧ್ಯಾವಧಿ ಸಮೀಕ್ಷೆಯಾಗಬೇಕೆಂದು ಹೇಳಿದರೂ ಅವರ ನಿಜವಾದ ಉದ್ದೇಶ ಸ್ಪಷ್ಟವಿಲ್ಲ. ತಾವು ಖಾಸಗೀಕರಣಕ್ಕೆ ವಿರೋಧಿಯಲ್ಲ ಎಂದು ಅವರು ಆಗಲೇ ಘೋಷಿಸಿಯೂ ಆಗಿದೆ. ಒಂದು ಸಮೀಕ್ಷೆ ನಡೆಸುವುದು ಒಳ್ಳೆಯದೆಂದು ತಾವು ಹೇಳಿದ್ದು ಎಂದೇ ಅವರು ಹೇಳಿದ್ದಾರೆ.



ಅರುಣಶೌರಿ : ದೇಶ ಮಾರಲೆಂದೇ ಈ ಮಂತ್ರಿ

ಮುರಳಿ ಮನೋಹರ ಜೋಷಿಯವರು ಸ್ವದೇಶಿ ಜಾಗರಣ ಮಂಚದ ಧ್ವನಿಯಾಗಿರುವಂತೆ ಕಾಣಿಸುತ್ತಿದೆ. ಆರ್ಥಿಕ ವಿಷಯಗಳ ಕಡೆಗೆ ಸಾಮಾನ್ಯವಾಗಿ ತಲೆ ಹಾಕದ ಅವರು ಈಗ ಈ ವಿಷಯದಲ್ಲಿ ತಲೆ ಹಾಕಿರುವುದನ್ನು ನೋಡಿದರೆ ಬಿಜೆಪಿಯೊಳಗೆ ಅಧಿಕಾರಕ್ಕಾಗಿ ಹೊಡೆದಾಟ. ಬೇರೊಂದು ಮಜಲಿನಲ್ಲಿ ಪ್ರಾರಂಭವಾಗಿರಬಹುದೆಂದು ಅನಿಸುತ್ತದೆ.

ಎಲ್ಲ ವಿಷಯಗಳನ್ನು ಗಮನಿಸಿದರೆ ಈ ಪೂರ್ಣ ವಿವಾದ ಎನ್‌ಡಿಎ ಒಳಗೆ ರಾಜಕೀಯ ಸ್ಥಾನಗಳಿಗಾಗಿ ಹೊಡೆದಾಟದಿಂದ ಉಂಟಾಗಿರುವುದು ಹೊರತು ಯಾವುದೇ ಸೈದ್ಧಾಂತಿಕ ತಳಹದಿಯ ಮೇಲೆ ಅಲ್ಲ ಎಂಬುದು ಸ್ಪಷ್ಟ.

ಯಾಕೆ ಶೇರು ಮಾರಾಟ ಕೂಡದು?

ಹೆಚ್‌ಪಿಸಿಎಲ್ ಮತ್ತು ಬಿಪಿಸಿಎಲ್ ಎರಡೂ ಲಾಭ ಗಳಿಸುತ್ತಿರುವ ತೈಲ ಉದ್ದಿಮೆಗಳು ಸರ್ಕಾರಿ ಬಾಂಡುಗಳ ಮೇಲೂ ಹೆಚ್ಚಿನ ಲಾಭ ತಂದುಕೊಡಬಲ್ಲವು. ಆದ್ದರಿಂದಲೇ ಖಾಸಗಿಯವರು ಈ ಶೇರುಗಳ ಹಿಂದೆ ಬಿದ್ದಿರುವುದು. ಈ ಕಂಪನಿಗಳಲ್ಲಿನ ಹೂಡಿಕೆಯಿಂದ ಬರುವ ಲಾಭ ಅವರಿಗೆ ಕನಿಷ್ಠ ಹೂಡಿಕೆಯ ಮೇಲಿನ ಕನಿಷ್ಠ ಲಾಭ ಏನೆಂಬುದನ್ನು ತಿಳಿಸುತ್ತದೆ.

ಸರ್ಕಾರ ಈ ಲಾಭವನ್ನು ತಾನೇ ಇಟ್ಟುಕೊಂಡು ಅದರ ಮೇಲೆ ಸಾಲ ಪಡೆಯಬಹುದಿತ್ತು. ಯಾಕೆಂದರೆ ಲಾಭ ಈ ಸಾಲದ ಬಡ್ಡಿಗಿಂತ ಹೆಚ್ಚಿಗೆ ಇರುತ್ತದೆ. ಆದರೂ ಸರ್ಕಾರ ಯಾಕೆ ಈ ಶೇರುಗಳನ್ನೇ ಮಾರಾಟ ಮಾಡಬಯಸುತ್ತದೆ?

ಶೇ 26ರಷ್ಟು ಶೇರುಗಳನ್ನು ಮಾರುವುದರಿಂದ ಈ ಕಂಪನಿಗಳ ಹತೋಟಿ ಖಾಸಗೀಯವರಿಗೆ ಹೋಗುತ್ತದೆ. ಖಾಸಗೀಯವರು ಒಟ್ಟು ಶೇರುಗಳನ್ನು ಕೊಳ್ಳುವ ಸಾಹಸ ಮಾಡಲಾರರು. ಅವರು ಕಂಪನಿಯ ಅಲ್ಪ ಶೇರುಗಳನ್ನು ಮಾತ್ರ ತೆಗೆದುಕೊಂಡು ಹತೋಟಿಯನ್ನು ಸರ್ಕಾರದ ಕೈಯಲ್ಲೇ ಬಿಡಲೂ ಸಿದ್ಧರಿಲ್ಲ. ಆದ್ದರಿಂದಲೇ ಸರ್ಕಾರ ತನ್ನ ಶೇರು ಮಾರಾಟ ಕಾರ್ಯಕ್ರಮವನ್ನು ಯಶಸ್ವಿಗೊಳಿಸಲು ಲಾಭದಾಯಕ ಉದ್ದಿಮೆಯನ್ನು ಅಲ್ಪ ಹೂಡಿಕೆಗೆ ಪ್ರತಿಯಾಗಿ ಖಾಸಗಿಯವರಿಗೆ ಕೊಡಲು ಮುಂದಾಗಿರುವುದು.

ಹಣಕಾಸು ಸಂಸ್ಥೆಗಳ ಮೂಲಕ ಸರ್ಕಾರ ಹಿಂದೆ ಖಾಸಗೀಯವರಿಗೆ ಸಾಲ ನೀಡಿದ್ದ ಅಥವಾ ಹೂಡಿಕೆ ಮಾಡಿದ್ದ ಅನುಭವ ತೆಗೆದುಕೊಂಡರೆ ಅದು ವ್ಯವಸ್ಥಾಪನೆಯಲ್ಲಿ ತಟಸ್ಥವಾಗಿದ್ದುದು ಕಂಡುಬರುತ್ತದೆ. ಇದರಿಂದ ಖಾಸಗೀಯವರಿಗೆ ನಿರುಮ್ಮಳತೆ ಇರುತ್ತದೆ. ಯಾಕೆಂದರೆ ಅವರು **ಆಡಿದ್ದೇ ಆಟ.**

ಕೊಳ್ಳುವವರಿಗೆ ಉದ್ದಿಮೆಗಳ ಬಗ್ಗೆ ವಿಶ್ವಾಸಾಮೃತೆ ನೀಡಿದ್ದರೆ ಅವರಿಗೆ ಅದು ಇನ್ನೂ ಲಾಭದಾಯಕವಾಗುತ್ತದೆ. ಉದಾಹರಣೆಗೆ ಐಪಿಸಿಎಲ್ ಅನ್ನು ಕೊಂಡ ರಿಲೈಯನ್ಸ್ ಇಂತಹ ಲಾಭ ಪಡೆದಿದೆ. **ಟಾಟಾಗಳು ವಿಎಸ್‌ಎನ್‌ಎಲ್ ಅನ್ನು ಕೊಂಡ ಮೇಲೆ ಅಲ್ಲಿನ ಹಣವನ್ನು ತಮ್ಮ ಸಾಮ್ರಾಜ್ಯ ಬೆಳೆಸಲು ಬಳಸಿದ ಉದಾಹರಣೆಗಳೂ ನಮ್ಮ ಮುಂದಿವೆ.**


ಇಂತಹ ದೊಡ್ಡ ಪ್ರಮಾಣದ ರಿಯಾಯತಿಯನ್ನು ನೀಡುವುದಷ್ಟೇ ಅಲ್ಲ. ಮಾಡರ್ನ್ ಫುಡ್ಸ್, ಬಾಲ್ಕೊ ಮತ್ತು ಇತ್ತೀಚಿಗಿನ ಐಟಿಡಿಸಿಯ ಆಸ್ತಿಗಳ ಮಾರಾಟವನ್ನು ನೋಡಿದರೆ ಶೇರು ಮಾರಾಟ ಅತೀ ಅಗ್ಗದ ಬೆಲೆಗೆ ಆಗುತ್ತಿರುವುದು ಗೊತ್ತಾಗುತ್ತದೆ.

ಅಂತರ್ರಚನಾ ಸೌಲಭ್ಯಗಳಲ್ಲಿ ಹೂಡಿಕೆ ಮಾಡಲು ಸಂಪನ್ಮೂಲ ಸಂಗ್ರಹಿಸುವುದೇ ಉದ್ದೇಶವಾದರೆ ಅಂತಹ ಸಂಪನ್ಮೂಲ ಸಂಗ್ರಹಿಸಲು ಈ ದುಬಾರಿ ದಾರಿಯನ್ನೇ ಹಿಡಿಯಬೇಕಾದದ್ದಿಲ್ಲ. ಬೇರೆ ದಾರಿಗಳಿವೆ.

ಉದಾಹರಣೆಗೆ ಹಣಕಾಸು ಸಂಸ್ಥೆಗಳು ಹಲವು ಖಾಸಗಿ ಕಂಪನಿಗಳಲ್ಲಿ ಶೇರು ಹೊಂದಿರುತ್ತವೆ. ಈ ಶೇರುಗಳನ್ನು ಹೊಂದಿದ್ದರೂ (ಪರೋಕ್ಷವಾಗಿ ಸರ್ಕಾರವೇ ಇದನ್ನು ಹೊಂದಿರುವುದು) ಅವು ಅತ್ಯಂತ ವ್ಯವಸ್ಥಾಪನೆ ಮತ್ತು ನಿರ್ವಹಣೆಯಲ್ಲಿ ಯಾವುದೇ ಪಾತ್ರ ವಹಿಸುವುದಿಲ್ಲ. ಆದ್ದರಿಂದ ಈ ಶೇರುಗಳನ್ನು ಮಾರಿ ಸಂಪನ್ಮೂಲ ಸಂಗ್ರಹಿಸಬಹುದು. ಎರಡನೇಯದಾಗಿ ಸರ್ಕಾರ ಮಧ್ಯಮ ಮತ್ತು ದೊಡ್ಡ ಪ್ರಮಾಣದ ಉದ್ದಿಮೆಗಳು ಸಾಲ ಪಡೆದು ನಿಷ್ಕ್ರಿಯ ಆಸ್ತಿಯನ್ನಾಗಿಸಿರುವ 65000 ಕೋಟಿ ರೂಪಾಯಿಗಳ ವಸೂಲಿಯ ಕೆಲಸವನ್ನೂ ಮಾಡಬಹುದು.

ಆದರೆ ಶೇರು ಮಾರಾಟ ಈ ಮುಖ್ಯ ಪ್ರಶ್ನೆಗಳನ್ನು ಎದುರಿಸುವುದೇ ಇಲ್ಲ. ಮಧ್ಯ ಅವಧಿ ಸಮೀಕ್ಷೆಯ ಮಾತುಗಳನ್ನಾಡುವವರೂ ಈ ಮೇಲಿನ ಪ್ರಶ್ನೆಗಳನ್ನು ಎತ್ತಿಕೊಳ್ಳುತ್ತಿಲ್ಲ.

ಈ ಪ್ರಶ್ನೆಗಳನ್ನು ಎತ್ತುತ್ತಿರುವವರು ಯಾರ ಹಿತಾಸಕ್ತಗಳನ್ನು ಪ್ರತಿನಿಧಿಸುತ್ತಿದ್ದಾರೆ ಎಂಬ ಮುಖ್ಯ ಪ್ರಶ್ನೆಯೂ ಏಳುತ್ತದೆ.


ಜಸ್ವಂತ್ ಸಿಂಗ್ ವಿದೇಶಿ ವ್ಯವಹಾಗಳಿಂದ ಸ್ವದೇಶಿ ಹರಾಜಿನತ್ತ

ಶೇರು ಮಾರಾಟದ ಪೂರ್ತಿ ಪ್ರ... ಮೋಸದಾಟ ಮತ್ತು ಸರ್ಕಾರಿ ಲೆಕ್ಕ... ಖಾಸಗೀಯವರಿಗೆ ಲಾಭ ಮಾಡಿಕೊಡುವ ಪ್ರಯತ್ನ ಎಂಬುದು ಬಹಳ ಸ್ಪಷ್ಟವಾಗುತ್ತದೆ.

- ಜಿ.ಎಸ್. ಮಣಿ.

ಚೆಕ್ಕೇರ ಬಿದ್ದಪ್ಪ ಮೊಣ್ಣಯ್ಯ : ಅರಿಯದ ಬದುಕು

ಕರ್ನಾಟಕ ರಾಜ್ಯದಲ್ಲಿ ಕಮ್ಯುನಿಸ್ಟ್ ಚಳುವಳಿಯ ಸಂಸ್ಥಾಪಕ ಮುಖಂಡರಲ್ಲೊಬ್ಬರಾದ ಕೊಡಗಿನ ಕಲಿ ಕಾಮ್ರೇಡ್ ಸಿ.ಬಿ.ಮೊಣ್ಣಯ್ಯನವರ ಕುರಿತ ಹೊಸ ಸಂಗತಿಗಳನ್ನು ಕಳೆದ ವಾರ ಓದಿದ್ದೀರಿ. ಉಳಿದ ಭಾಗ ಈ ವಾರ

ಡಾ.. ಅಸ್ರಣ್ಣ ನೆನಪು


ಸ್ವಾತಂತ್ರ್ಯದ ಬೆಲೆ ತಿಳಿಯಿತೇ?

ಆಗಸ್ಟ್ 15 ರಂದು ಪ್ರತಿ ವರ್ಷವೂ ಮೊಣ್ಣಯ್ಯನವರ ಮನೆಯಲ್ಲಿ ಹಬ್ಬವಂತೆ. ಅಂದು ಸಿಹಿ ತಿಂಡಿ ಮಾಡಲೇಬೇಕು. 'ಸ್ವಾತಂತ್ರ್ಯದ ಬೆಲೆ ನೀವೆಲ್ಲಾ ತಿಳಿಯಬೇಕು. ಅದಕ್ಕಾಗಿ ಅದೆಷ್ಟು ಜನ ತ್ಯಾಗ ಬಲಿದಾನ ಮಾಡಿದ್ದಾರೆ ತಿಳಿದಿದೆಯೇ' ಎಂದು ಪ್ರಶ್ನಿಸುತ್ತಿದ್ದರಂತೆ.

ಬಡವರಾದ ಮೊಣ್ಣಯ್ಯನವರು ಸಂಘಟನೆಯ ಸಂದರ್ಭ, ಹೋರಾಟದ ಸಂದರ್ಭ ಜನರಿಂದ ಸಹಾಯ ಕೇಳಿ ಪಡೆಯುತ್ತಿದ್ದರಂತೆ. ಅದನ್ನು ಸ್ಮರಿಸಿಕೊಂಡ ಡಾ.ಅಸ್ರಣ್ಣನವರೆಂದರು-"ರಾಷ್ಟ್ರದ ವಿಮೋಚನೆಯ ಕಾರ್ಯಕ್ಕಾಗಿ ಉನ್ನತ ಧ್ಯೇಯ ಸಾಧನೆಗಾಗಿ, ನಿಸ್ವಾರ್ಥಿಯಾಗಿ ಅಹೋರಾತ್ರಿ ದುಡಿದ ಮೊಣ್ಣಯ್ಯ ರಾಷ್ಟ್ರಕ್ಕಾಗಿ ಭಿಕ್ಷೆ ಬೇಡಿದ ಮಹಾನ್ ಚೇತನ"

ಕಾ.ಸಿ.ಬಿ.ಮೊಣ್ಣಯ್ಯನವರಂತಾ ತ್ಯಾಗಿಗಳ ಬಲಿದಾನದಿಂದ ಕಟ್ಟಲ್ಪಟ್ಟ ಕಮ್ಯುನಿಸ್ಟ್ ಚಳವಳಿಯನ್ನು ಮುಂದೆ ಬೆಳೆಸಿ ಅವರ ಕನಸನ್ನು ನನಸಾಗಿಸಬೇಕಾಗಿದೆ. ಅವರಂತಹವರ ತ್ಯಾಗ ಬಲಿದಾನಗಳು ವ್ಯರ್ಥವಲ್ಲ ಎಂದು ಸಾರಿ ಹೇಳಿ ಚಳವಳಿಯನ್ನು ಮುಂದಕ್ಕೊಯ್ಯುವುದು ಇಂದಿನ ಪೀಳಿಗೆಯ ಯುವಕರ ಕರ್ತವ್ಯವಾಗಿದೆ.

ಕಾ.ಮೊಣ್ಣಯ್ಯನವರಂತಹಾ ಸಹಸ್ರಾರು ಮಂದಿಯ ಅಪಾರ ತ್ಯಾಗ, ಬಲಿದಾನಗಳ ಫಲವಾಗಿ ದೊರಕಿದ ಸ್ವಾತಂತ್ರ್ಯದ ಸತ್ಫಲಗಳನ್ನು ಇಲ್ಲದಾಗಿಸಿ ಈ ನಮ್ಮ ದೇಶವನ್ನು ಮತ್ತೆ ವಿದೇಶಿ ಸಾಮ್ರಾಜ್ಯಶಾಹಿಗಳ ಆಡುಂಬೊಲವಾಗಿಸಲು; ಈ ದೇಶದ ಅಖಂಡತೆಯನ್ನು ಮುರಿಯಲು ಮತಾಂಧ ಶಕ್ತಿಗಳು ಅಹರ್ನಿಶಿ ಶ್ರಮಿಸುತ್ತಿರುವ ಈ ವೇಳೆಯಲ್ಲಿ ಕಾ.ಮೊಣ್ಣಯ್ಯನವಂತಹವರ ಜೀವನ ಗಾಥೆ ನಮಗೆ ಸ್ಫೂರ್ತಿಯ ಸೆಲೆಯಾಗಬೇಕಾಗಿದೆ.


ಪತ್ನಿ ಸರಸ್ವತಿ ಹಾಗೂ ಮಗಳೊಂದಿಗೆ ಮೊಣ್ಣಯ್ಯ

ಗಾಂಧಿವಾದಿ ಶ್ರೀ ಮಲ್ಲೇಂಗಡ ಚಂಗಪ್ಪನವರ ಒಡನಾಟ

ಶ್ರೀ ಮಲ್ಲೇಂಗಡ ಚಂಗಪ್ಪನವರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಕಾಂ ಮೊಣ್ಣಯ್ಯನವರ ಸಮಕಾಲೀನರು ಮಡಿಕೇರಿಯ ಕೋಟೆಯ ಮೇಲೆ ಹಾರುತ್ತಿದ್ದ ಯೂನಿಯನ್ ಜ್ಯಾಕ್ ಧ್ವಜವನ್ನು ತನ್ನ ಹದಿನೆಂಟನೇ ವಯಸ್ಸಿನಲ್ಲಿ ಹತ್ತಿ ಕಿತ್ತೆಸೆದು ತ್ರಿವರ್ಣ ಧ್ವಜವನ್ನು ಹಾರಿಸಿದ ಮತ್ತು ಅದಕ್ಕಾಗಿ ಶಿಕ್ಷೆಗೊಳಗಾದ ಧೀರರವರು.

ಅವರನ್ನು ಭೇಟಿಯಾದಾಗ ಅವರೆಂದರು "ನನಗೂ ಮೊಣ್ಣಯ್ಯನವರಿಗೂ ಬಾಲ್ಯ ದಿಂದಲೂ ಪರಿಚಯ. ಪ್ರಾಯದಲ್ಲಿ ಒಂದು ವರ್ಷ ವ್ಯತ್ಯಾಸ. ಎರಡು ಕ್ಲಾಸ್ ಮುಂದಿದ್ದರು. ಅವರ ತಾಯಿ ತನ್ನ ಗಂಡನ ಮನೆಯಿಂದ ತಾಯಿಮನೆ ಮಲೆನಾಡಿಗೆ ಹೋಗುವಾಗ ಮಧ್ಯಾಹ್ನ ನಮ್ಮಲ್ಲಿ ಉಳಿದು ಊಟ ಮುಗಿಸಿ ವಿಶ್ರಾಂತಿ ಪಡೆದು ಅನಂತರ ತನ್ನ ಕಾಲ್ನಡೆ ಪ್ರಯಾಣ ಮುಂದುವರೆಸುತ್ತಿದ್ದರು.

ಸ್ವಾತಂತ್ರ್ಯ ಯೋಧ, ಶ್ರಮಜೀವಿಗಳ ನಾಯಕ ಸಂಗಾತಿ ಡಾ। ಅಸ್ರಣ್ಣ ಇನ್ನಿಲ್ಲ.

ಕೊಡಗಿನ ಸಂಗಾತಿ, ಸ್ವಾತಂತ್ರ್ಯಯೋಧ, ಪ್ಲಾಂಟೇಶನ್ ಕಾರ್ಮಿಕರ ನೇತಾರ ಡಾ। ಐ.ಆರ್. ಅಸ್ರಣ್ಣ ಅವರು ಡಿಸೆಂಬರ್ 4 ರಂದು ಹೃದಯಾಘಾತದಿಂದ ನಿಧನರಾಗಿದ್ದಾರೆ. 89 ವರ್ಷದ ಅವರು ಕೆಲ ಕಾಲದಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಅಸ್ರಣ್ಣನವರ ಮಕ್ಕಳಾದ ಸಂಗಾತಿ ಡಾ। ದುರ್ಗಾಪ್ರಸಾದ್, ಐ.ಆರ್. ಪ್ರಮೋದ್, ಪ್ರದೀಪ್, ಪ್ರಸನ್ನ ಸೇರಿದಂತೆ ನಾಲ್ಕು ಮಕ್ಕಳು ಮತ್ತು ಪತ್ನಿ ಲೀಲಾವತಿಯವರನ್ನು ಅಗಲಿದ್ದಾರೆ. ವೈದ್ಯರಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ, ಕರ್ನಾಟಕದ ಏಕೀಕರಣಕ್ಕಾಗಿ ಮತ್ತು ಕಮ್ಯುನಿಸ್ಟರಾಗಿ ಕಾರ್ಮಿಕರ ಮುಖಂಡರಾಗಿ ದುಡಿದ ಸಂಗಾತಿ ಅಸ್ರಣ್ಣ ಎಲ್ಲರನ್ನು ಅಗಲಿದ್ದಾರೆ.

ಸಂಕ್ಷಿಪ್ತ ಪರಿಚಯ

ಸಂಗಾತಿ ಡಾ।ಐ.ಆರ್. ಅಸ್ರಣ್ಣ ದಕ್ಷಿಣ ಕನ್ನಡ ಜಿಲ್ಲೆಯ ಮೂಡು ಬಿದರೆ ಸಮೀಪದ ಇರುವೈಲು ಗ್ರಾಮದ ಗೋವಿಂದ ಅಸ್ರಣ್ಣ - ರಮಾಬಾಯಿ ದಂಪತಿಗಳ ಪ್ರಥಮ ಪುತ್ರನಾಗಿ ಜನಿಸಿದರು. ಇರುವೈಲು - ಏಕಾರು ಗ್ರಾಮಗಳಲ್ಲಿ ತನ್ನ ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾಭ್ಯಾಸ ಮುಗಿಸಿದ ಅಸ್ರಣ್ಣನವರು ಪ್ರೌಢ ಶಿಕ್ಷಣವನ್ನು ಮಂಗಳೂರಿನ ಕೆನರ ಹೈಸ್ಕೂಲ್‌ನಲ್ಲಿ ಪಡೆದರು. ನಂತರ ಮದ್ರಾಸಿನ ಆಯುರ್ವೇದ ಮೆಡಿಕಲ್ ಕಾಲೇಜಿನಲ್ಲಿ ಅಧ್ಯಯನ ನಡೆಸಿ ಎಲ್.ಐ.ಎಂ. ಡಿಗ್ರಿ ಪಡೆದರು. 1940ರ ದಶಕದಲ್ಲಿ ವಿರಾಜಪೇಟೆಯಲ್ಲಿ ತನ್ನ ವೈದ್ಯಕೀಯ ವೃತ್ತಿ ಆರಂಭಿಸಿದ ಅಸ್ರಣ್ಣನವರು ತನ್ನ ವೃತ್ತಿಗೆ ಮಾತ್ರ ಅಂಟಿಕೊಳ್ಳದೆ ರಾಜಕೀಯದಲ್ಲೂ ಭಾಗವಹಿಸತೊಡಗಿದರು. ಕಾಂಗ್ರೆಸ್‌ನ ಸಕ್ರಿಯ ಸದಸ್ಯರಾಗಿ ದುಡಿದು, ಸ್ವಾತಂತ್ರ್ಯ ದೊರೆತ ನಂತರ ಭಾಷಾವಾರು ಪ್ರಾಂತ ರಚನೆಯ ಹೋರಾಟದ ಸಂದರ್ಭದಲ್ಲಿ 'ಕರ್ನಾಟಕ ಏಕೀಕರಣ'ಕ್ಕಾಗಿ ನಡೆದ ಹೋರಾಟದಲ್ಲಿ ಭಾಗವಹಿಸಿದರು. ಕರ್ನಾಟಕ ಏಕೀಕರಣ ಸಮಿತಿಯ ಕೊಡಗು ಘಟಕದ ಗೌರವ ಕಾರ್ಯದರ್ಶಿಗಳಲ್ಲಿ ಇವರೂ ಒಬ್ಬರಾಗಿದ್ದರು. ಅಂದು ಈ ಸಮಿತಿಯಲ್ಲಿ ಸಿ.ಬಿ.ಮೊಣ್ಣಯ್ಯ ಮತ್ತು ಡಾ। ನಂಜುಂಡೇಶ್ವರ ಎಂಬ ಕಮ್ಯುನಿಸ್ಟರು ಪ್ರಮುಖ ಮುಖಂಡರಾಗಿದ್ದರು.


ಕಮ್ಯೂನಿಸ್ಟ್ ಪಕ್ಷ ಸೇರಿದ ಅಸ್ರಣ್ಣ

ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಕಾಂಗ್ರೆಸ್ ಪಕ್ಷ ಸಂದರ್ಭ ಸಾದಕ ನೀತಿಯನ್ನು ಸಾಧಿಸುತ್ತಿತ್ತು, ಇದು ಅಸ್ರಣ್ಣನವರಿಗೆ ಸಹಿಸಲಾಗಲಿಲ್ಲ. ಕಮ್ಯುನಿಸ್ಟರು ಒಂದು ತತ್ವಬದ್ಧ ದೃಡ ನಿಲುವಿನಿಂದ ಹೋರಾಡುತ್ತಿದ್ದರು. ಅಸ್ರಣ್ಣನವರಿಗೆ ಇದು ಸ್ಪೂರ್ತಿದಾಯಕವಾಗಿ ಕಂಡಿತು. ಅವರು ಕಾಂಗ್ರೆಸ್ ಪಕ್ಷ ತೊರೆದು ಕಮ್ಯುನಿಸ್ಟ್ ಪಕ್ಷ ಸೇರಿದರು. ನಂತರ ಮುನಿಸಿಪಾಲಿಟಿ ಸದಸ್ಯರಾಗಿ ಆಯ್ಕೆಯಾದರು.

ಮಲ ಹೊರುವ ಪದ್ಧತಿ ವಿರೋಧಿಸಿ

ಮುನಿಸಿಪಾಲಿಟಿ ಸದಸ್ಯರಾಗಿ ಆಯ್ಕೆಯಾದ ಅಸ್ರಣ್ಣನವರು ಅಲ್ಲಿ ತೋಟಿಗಳೆಂದು ಕರೆಸಿಕೊಳ್ಳುವ ನಾಲ್ಕನೇ ದರ್ಜೆ ಕೆಲಸಗಾರರು ತಲೆಯ ಮೇಲೆ ಮಲ ಹೊರುವ ಪದ್ಧತಿಯನ್ನು ನೋಡಿ ಅವರಿಗೆ ಸಹಿಸಲಾಗಲಿಲ್ಲ. ಆ ನೌಕರರನ್ನು ಸಂಘಟಿಸಿ

ಡಾ. ಐ.ಆರ್.ಅಸ್ರಣ್ಣನವರು ಅಪರೂಪದ ಜೀವಿ. ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿ, ಕಾಂಗ್ರೆಸ್‌ನಲ್ಲಿದ್ದು - ಬಳಿಕ ಕಮ್ಯುನಿಸ್ಟ್ ಪಕ್ಷಕ್ಕೆ ಆಕರ್ಷಿತರಾದವರು. ಅಂದಿನ ಸ್ಥಿತಿಯಲ್ಲೇ ತಲೆಮೇಲೆ ಮಲ ಹೊರುತ್ತಿದ್ದ ಪದ್ಧತಿಯ ವಿರುದ್ಧ ತಿರುಗಿಬಿದ್ದು ಹೋರಾಟ ಸಂಘಟಿಸಿದವರು. ಹಾಗೇ ಪ್ಲಾಂಟೇಷನ್ ಕಾರ್ಮಿಕರನ್ನು ಸಂಘಟಿಸಿ - ಚಳುವಳಿ ರೂಪಿಸಿ, ಅವರ ಹಿತಗಳಿಗಾಗಿ ಕೊನೆ ಉಸಿರಿರುವವರೆಗೂ ದುಡಿದವರು. ಅಖಿಲ ಭಾರತ ಪ್ಲಾಂಟೇಷನ್ ಕಾರ್ಮಿಕರ ರಾಷ್ಟ್ರ ಸಮ್ಮೇಳನದ ಸ್ವಾಗತ ಸಮಿತಿಯ ಗೌರವಾಧ್ಯಕ್ಷರಾಗಿದ್ದ ಜನಾನುರಾಗಿ ಕಾಂ. ಅಸ್ರಣ್ಣನವರು ಸಮ್ಮೇಳನಕ್ಕೆ ಮೊದಲೇ ಅಗಲಿದ್ದಾರೆ.



ಇಂತಹ ನೀಚ ಪದ್ಧತಿಯ ವಿರುದ್ಧ ಹೋರಾಟ ನಡೆಸಿದರು. ಈ ನೌಕರರಿಗೆ ಆರ್ಥಿಕ ಭದ್ರತೆ ಇರಲಿಲ್ಲ. ನಿರ್ದಿಷ್ಟ ಆಧಾಯವಿಲ್ಲದೆ ಊರ ಪ್ರಮುಖರೆನಿಸಿ ಕೊಳ್ಳುವವರು ಕೊಡುತ್ತಿದ್ದ ಪುಡಿಗಾಸೆ ಅವರ ಸಂಪಾದನೆಯಾಗಿತ್ತು. ಮೊದ ಮೊದಲು ವಿರಾಜಪೇಟೆ ಅನಂತರ ಜಿಲ್ಲೆಯ ತೋಟಿಗಳನ್ನೆಲ್ಲಾ ಸೇರಿಸಿ ಸ್ವೀಪರ್ಸ್ ಅಂಡ್ ಸೆಕೆವೆಂಜರ್ಸ್ ಅಸೋಷಿಯೇಷನ್ ಸ್ಥಾಪಿಸಿ ಅದರ ಮೂಲಕ ಹೋರಾಟ ನಡೆಸಿ ಅವರ ಬೇಡಿಕೆಗಳಿಗಾಗಿ ಶ್ರಮಿಸಿದರು.

ಒಮ್ಮೆ ಅಸ್ರಣ್ಣನವರು ಈ ಸಂಘಟನೆಯ ಕೆಲವು ಸದಸ್ಯರೊಂದಿಗೆ ಜಿಲ್ಲೆಯ ಅಧಿಕಾರಿಯೊಬ್ಬರನ್ನು ಭೇಟಿಯಾಗಿದ್ದರು. ನೌಕರರ ಬೇಡಿಕೆ ಬಗ್ಗೆ ಚರ್ಚಿಸುತ್ತಿದ್ದಾಗ ನಿಯೋಗದೊಂದಿಗೆ ಹೋಗಿದ್ದ ಮಹಿಳೆಯೊಬ್ಬರು ತನ್ನ ಕಂಕುಳಲ್ಲಿದ್ದ ನಾಲ್ಕು ತಿಂಗಳ ಮಗುವನ್ನು ಅಧಿಕಾರಿಗಳ ಮೇಜಿನ ಮೇಲೆ ದೊಪ್ಪೆಂದು ಹಾಕಿ ನಮ್ಮ ಇಂದಿನ ಪರಿಸ್ಥಿತಿಯಲ್ಲಿ ಇಂತಹ ಮಕ್ಕಳನ್ನು ಹೇಗೆ ಸಾಕುವುದು ನೀವೇ ಹೇಳಿ" ಎಂದು ಪ್ರಶ್ನಿಸಿದಳಂತೆ. ಈ ಘಟನೆ ಒಂದು ಕ್ಷಣ ಎಲ್ಲರನ್ನು ದಂಗುಬಡಿಸಿತ್ತು. ಅಧಿಕಾರಿ ಕಣ್ಣಲ್ಲಿ ನೀರು ಬಂತು. ಮೇಲಧಿಕಾರಿಯವರ ಜೊತೆ ಚರ್ಚಿಸಿ ಬೇಡಿಕೆಗಳ ಬಗ್ಗೆ ಸೂಕ್ತ ನಿರ್ಧಾರ ತೆಗೆದುಕೊಳ್ಳುವುದಾಗಿ ಭರವಸೆ ನೀಡಿದ ನಂತರ ಆ ಕೆಲಸವನ್ನೂ ಮಾಡಿದರು. ಸರಕಾರದಿಂದ ನೌಕರರಿಗೆ ಸ್ವಲ್ಪ ಸವಲತ್ತುಗಳೂ ದೊರೆತವು.

ತೋಟ ಕಾರ್ಮಿಕರ ಸಂಘಟನೆ

ಪೌರ ಕಾರ್ಮಿಕರ ಹೋರಾಟಗಳು ಮುಂದುವರಿಯುತ್ತಿದ್ದಂತೆ ಇತರ ವಿಭಾಗದ ಕಾರ್ಮಿಕರೂ ತಮ್ಮ ಸಮಸ್ಯೆಗಳೊಂದಿಗೆ ಅಸ್ರಣ್ಣನವರ ಬಳಿಗೆ ಬರಲಾರಂಬಿಸಿದರು. ತೋಟಕಾರ್ಮಿಕರನ್ನು ಒಳಗೊಂಡ ಕೊಡಗು ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ ರಚನೆಯಾಯಿತು. ಅಂದಿನಿಂದ ಇಂದಿನವರೆಗೂ ಅಸ್ರಣ್ಣನವರೇ ಕಾರ್ಯದರ್ಶಿಯಾಗಿದ್ದರು. ಈ ಸಂಘಟನೆಯ ನೇತೃತ್ವದಲ್ಲಿ ಅನೇಕ ಹೋರಾಟಗಳು ನಡೆದು ಬಂದಿವೆ. ಪ್ರಾರಂಭದಲ್ಲಿ ಈ ಸಂಘ ಎ.ಐ.ಟಿ.ಯು.ಸಿ. ಯಲ್ಲಿದ್ದು ನಂತರ ಸಿ.ಐ.ಟಿ.ಯುಗೆ ನೊಂದಾಯಿಸಲ್ಪಟ್ಟಿದೆ. ಅಸ್ರಣ್ಣನವರು ಕರ್ನಾಟಕ ಪ್ಲಾಂಟೇಶನ್ ಫೆಡರೇಷನ್‌ನ ಪದಾಧಿಕಾರಿಯಾಗಿದ್ದರು.

ಅವರು ಕಾರ್ಮಿಕ ರಂಗೆ, ರಾಜಕೀಯ ರಂಗವಲ್ಲದೆ ಇತರ ರಂದಲ್ಲೂ ದುಡಿದಿದ್ದಾರೆ. ವೀರಾಜಪೇಟೆಯಲ್ಲಿ ಕರ್ನಾಟಕ ಸಂಘದ ಸ್ಥಾಪಕ ಸದಸ್ಯರಲ್ಲಿ ಅವರೂ ಒಬ್ಬರು. ವೀರಾಜಪೇಟೆಯ ಪುರಸಭಾ ಸದಸ್ಯರಾಗಿಯೂ, ಉಪಾಧ್ಯಕ್ಷರಾಗಿಯೂ ಅವರು ದುಡಿದಿದ್ದಾರೆ. ವೀರಾಜಪೇಟೆ ಟೌನ್ ಬ್ಯಾಂಕಿನ ಅಧ್ಯಕ್ಷರಾಗಿದ್ದರು. ಹಿಂದೆ ಈ ಬ್ಯಾಂಕಿನಲ್ಲಿ ಅವ್ಯವಹಾರದ ಪ್ರಕರಣ ಹೊರಬಂದಾಗ ಅದರ ವಿರುದ್ಧ ನಡೆದ ಹೋರಾಟದಲ್ಲಿ ಅವರು ಮುಂಚೋಣಿಯಲ್ಲಿದ್ದರು. ಅವರ ನಿಧನ ಕಾರ್ಮಿಕ ವರ್ಗದ ಚಳುವಳಿಗೆ ತುಂಬಲಾರದ ನಷ್ಟವಾಗಿದೆ.

ಅಸ್ರಣ್ಣನವರು ನಿಧನಕ್ಕೆ ಸಿಪಿಐ(ಎಂ) ರಾಜ್ಯ ಸಮಿತಿ, ಕೊಡಗು ಜಿಲ್ಲಾ ಘಟಕಗಳು ತೀವ್ರ ಶೋಕ ವ್ಯಕ್ತಪಡಿಸಿವೆ. ಡಿ. 5 ರಂದು ವಿರಾಜಪೇಟೆಯಲ್ಲಿ ನಡೆದ ಅಂತಿಮ ಯಾತ್ರೆಯಲ್ಲಿ ಪಕ್ಷದ ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ವೈ. ಗುರುಶಾಂತ್, ರಾಜ್ಯಸಮಿತಿ ಸದಸ್ಯ ವಿ. ಸುಕುಮಾರ್ ಭಾಗವಹಿಸಿದ್ದರು. ಕೊಡಗು ಜಿಲ್ಲಾ ಸಿಪಿಐ(ಎಂ) ಕಾರ್ಯದರ್ಶಿ ಪೀಟರ್ ಲೋಬೋ, ಹೆಚ್.ಎಂ.ಕಾಳಯ್ಯ, ಡಿವೈಎಫ್ಐ, ಎಸ್.ಎಫ್.ಐ, ಮಹಿಳಾ ಸಂಘ, ಸಿಐಟಿಯು ಜಿಲ್ಲಾ ನಾಯಕರು ಪಾಲ್ಗೊಂಡಿದ್ದರು. ಅವರ ಗೃಹದಿಂದ ಹೊರಟ ಯಾತ್ರೆಯಲ್ಲಿ ಸುಮಾರು 1500ಕ್ಕೂ ಅಧಿಕ ಜನತೆ, ಭಾಗವಹಿಸಿ, ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿದರು. ಇದರಲ್ಲಿ ವಿವಿಧ ಕ್ಷೇತ್ರಗಳ ಗಣ್ಯರು, ರಾಜಕೀಯ ನಾಯಕರು, ಪಾಲ್ಗೊಂಡಿದ್ದರು. ಬಳಿಕ ಪುರಭವನದಲ್ಲಿ ಶ್ರದ್ಧಾಂಜಲಿ ಸಭೆ ಜರುಗಿತು. ಅಂದು ಡಾ। ಅಸ್ರಣ್ಣನವರ ನಿಧನದ ಗೌರವಾರ್ಥ ಇಡೀ ವಿರಾಜಪೇಯೆ ಬಂದ್ ಆಚರಿಸುವ ಮೂಲಕ ಗೌರವ ಸಲ್ಲಿಸಲಾಯಿತು. ಪುರಸಭೆ ಹಾಗೂ ಕೊಡಗು ಜಿಲ್ಲಾ ಪಂಚಾಯತ್ ಸಭೆ ಜರುಗುತ್ತಿರುವಾಗ ಸುದ್ದಿ ತಿಳಿದಿದ್ದರಿಂದ ಶ್ರದ್ಧಾಂಜಲಿ ನಿರ್ಣಯ ಅಂಗೀಕರಿಸಿದವು. ಕನ್ನಡ ಸಾಹಿತ್ಯ ಪರಿಷತ್ ಒಳಗೊಂಡು ಅನೇಕ ಸಂಘ ಸಂಸ್ಥೆಗಳು ಅವರಿಗೆ ಸಂತಾಪ ಸಲ್ಲಿಸಿವೆ.

ಕೊನೆಯ ಉಸಿರಿನವರೆಗೂ ಶ್ರಮಜೀವಿಗಳದ್ದೇ ಚಿಂತೆ

ಡಾ। ಅಸ್ರಣ್ಣನವರದ್ದು ಅಹೋರತ ದುಡಿಮೆ. ಅವರು ತೊಂಬತ್ತರ ಅಂಚಿನಲ್ಲಿದ್ದರೂ ಕಾರ್ಮಿಕ ವರ್ಗಕ್ಕಾಗಿ ದಣಿವರಿಯದ ಹೋರಾಟಗಾರರು, ಪ್ರತಿನಿತ್ಯವೂ ಕಾರ್ಮಿಕರ ಸಮಸ್ಯೆಗಳಿಗೆ ಗಮನ ಕೊಡುತ್ತಿದ್ದರು. ಬಹುತೇಕ ತಾವೇ ಹಾಜರಾಗುತ್ತಿದ್ದರು. ಅವರ ದೇಹಾರೋಗ್ಯ ಹದಗೆಟ್ಟಿದ್ದರೂ ಗಂಟಲೊಳಗೆ ಹುಣ್ಣು ಬಂದು ವರುಷಗಳಿಂದ ಭಾಧಿಸುತ್ತಿದ್ದರೂ ಯಾತನೆಯನ್ನು ಸಹಿಸಿದರೇ ಹೊರತು ಯಾರೊಂದಿಗೂ ಅದನ್ನು ತೋರ್ಪಡಿಸಲಿಲ್ಲ, ಹೇಳಿಕೊಳ್ಳಲಿಲ್ಲ. ಸ್ವತಃ ವೈದ್ಯರಾಗಿರುವ ಅವರು ತಾವೇ ಔಷಧಿಗಳನ್ನು ತೆಗೆದು ಕೊಳ್ಳುತ್ತಿದ್ದರು, ಅವರ ಗಂಟಲಲ್ಲಿ ಹುಣ್ಣಾಗಿದೆ ಎಂಬುದು ತಿಳಿದದ್ದೇ ಕೊನೆ ಉಸಿರೆಳೆಯುವ ನಾಲ್ಕು ದಿನಗಳ ಮೊದಲು ಇದು ತಿಳಿದದ್ದೆ ಅವರ ಮಗ ಡಾ। ದುರ್ಗಾ ಪ್ರಸಾದ್ ಅವರನ್ನು ಮಂಗಳೂರಿಗೆ ಬೇರೆಡೆಗೆ ಕರೆದೊಯ್ದರು. ಅವರ ಇನ್ನೊಬ್ಬ ಮಗ ಶ್ರೀ ಪ್ರಸನ್ನ ಅವರಲ್ಲಿ ಸಾಯುವುದಕ್ಕೆ ಕೆಲವೇ ಗಂಟೆಗಳ ಮೊದಲು ಹೇಳಿದ್ದು "ನನಗೇನು ಹೆಚ್ಚಿಗೆ ಜೀವನ ಮಾಡುವುದು ಅಗತ್ಯವಿಲ್ಲ, ಆಶೆಯಿಲ್ಲ. ಆದರೆ ನಮ್ಮ ತೋಟ ಕಾರ್ಮಿಕರ ಒಂದು ಇಪ್ಪತ್ತು ಕೇಸ್‌ಗಳು ಹಾಗೇ ಉಳಿದುಬಿಟ್ಟಿವೆ. ತುಂಬಾ ಪಾಪದ ಜನ ನನ್ನನ್ನೇ ನಂಬಿದ್ದಾರೆ ಅವುಗಳನ್ನು ಇತ್ಯರ್ಥ ಪಡಿಸುವಷ್ಟು ಕಾಲ ಬದುಕಿದರೆ ಸಾಕಪ್ಪ ಎಂದು. ಇದು ಅವರ ಆಶೆಯಲ್ಲ, ಅವರ ಬದ್ಧತೆಗೆ ಸಾಕ್ಷಿ. ಅದು ಹಾಗೆ ಉಳಿದಿದೆ. ಅದನ್ನು ಮುಂದೊಯ್ಯಬೇಕಿದೆ.

...

ಅವರು ಚಿಕಿತ್ಸೆಗೆ ಹೊರಡುವ ಮೊದಲು 10,100 ರೂ.ಗಳ ಚೆಕ್‌ನ್ನು ಮಗ ಪ್ರಮೋದ್‌ಗೆ ನೀಡಿ ತಕ್ಷಣ ಅದನ್ನು ಪ್ಲಾಂಟೇಶನ್ ಸಮ್ಮೇಳನದ ಖರ್ಚಿಗೆ ಕಳುಹಿಸಲು ತಿಳಿಸಿದರು. ಒಂದು ವೇಳೆ ಆಸ್ಪತ್ರೆಯಿಂದ ವಾಪಾಸಾಗದಿದ್ದರೆ? ಸಮ್ಮೇಳನಕ್ಕೆ ತೊಂದರೆ ಆಗಬಾರದು ಎಂಬುದು ಅವರ ನಿರ್ಧಾರ.

→

ಅವರು ಬಾಲ್ಯದ ವಿದ್ಯಾಭ್ಯಾಸ ಮುಗಿಸಿ ಮಡಿಕೇರಿಗೆ ಹೋದರು. ನಂತರ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದರು. ಕೊಡಗಿನಿಂದ ಹೊರಕ್ಕೆ ಹೋದರು. ತುಂಬಾ ಕೆಲಸ ಮಾಡಿದ್ದಾರೆ.

ವಿವಾಹನಂತರ ಅವರು ಗೋಣಿಕೊಪ್ಪಲಿನಲ್ಲಿ ಮನೆ ಮಾಡಿಕೊಂಡಿದ್ದರು. ಆಗ ಅವರು ನನ್ನಲ್ಲಿಗೆ ಬರುತ್ತಿದ್ದರು. ನನಗೆ ಕಮ್ಯುನಿಸಂ ಬಗ್ಗೆ ತುಂಬಾ ಹೇಳುತ್ತಿದ್ದರು. ನನ್ನನ್ನು ಕಮ್ಯುನಿಸ್ಟನಾಗಿಸಲು ತುಂಬಾ ಪ್ರಯತ್ನಿಸುತ್ತಿದ್ದರು. ಅವರು ಪಕ್ಷದ ನಿಧಿ ಸಂಗ್ರಹಕ್ಕೆ ಹೋಗುವಾಗಲೆಲ್ಲಾ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು. ನಾನೂ ಹೋಗುತ್ತಿದ್ದೆ. ಆದರೆ ನಾನು ಗಾಂಧಿವಾದಿಯಾಗಿಯೇ ಉಳಿದೆ.

ನನ್ನೊಡನೆ ಯಾವಾಗಲೂ ವಾದಿಸುತ್ತಲಿರುತ್ತಿದ್ದರು. ಅಷ್ಟೇ ಅಲ್ಲದೇ ಕಕ್ಕಿಲ್ಲಾಯ, ಉಪಾಧ್ಯಾಯರನ್ನೂ ನನ್ನಲ್ಲಿಗೆ ಕರೆದು ತಂದಿದ್ದರು. ಅವರ ಹುಮ್ಮಸ್ಸು ನನ್ನನ್ನು ಬದಲಾಯಿಸಲು ಉದ್ದೇಶಿಸಿದ್ದರು. ಈರ್ವರೂ ನನ್ನೊಂದಿಗೆ ಹಲವುದಿನ ಇದ್ದರು. ಆದರೆ ನನಗೆ ಗಾಂಧಿವಾದ ಬಿಡಲು ಮನಸ್ಸಿರಲಿಲ್ಲ. ಕೊನೆಗೊಮ್ಮೆ ಉಪಾಧ್ಯಾಯರೇ ಹೇಳಿದರು "ಮೊಣ್ಣಯ್ಯ, ನೀನ್ಯಾಕೆ ಅವರನ್ನು ಅಷ್ಟು ನಿರ್ಬಂಧಿಸುತ್ತೀಯಾ? ಅವರು ಗಾಂಧಿವಾದಿಯಾಗಿಯೇ ಉಳಿಯಲಿ, ಮುಂದೆ ಅವರಾಗಿ ಬರುವುದಾದರೆ ಬರಲಿ.

ಆದರೆ ಈ ವ್ಯತ್ಯಾಸ ನಮ್ಮ ಸ್ನೇಹಕ್ಕೆಂದೂ ಅಡ್ಡಿ ಬರಲೇ ಇಲ್ಲ. ನಾನು ಅವರೊಂದಿಗೆ ಬೆಂಗಳೂರಿಗೆ ಒಮ್ಮೆ ಹೋಗಿದ್ದೆ. ಅಲ್ಲಿ ಅವರ ಪಕ್ಷದವರು ಅವರಿಗೆಷ್ಟು ಗೌರವ ತೋರುವರೆನ್ನುವುದನ್ನು ಕಂಡೆ. ಅವರಿಗೆ ತುಂಬಾ ಗೌರವವಿತ್ತು.

ಒಮ್ಮೆ ಮೊಣ್ಣಯ್ಯ ಬೆಂಗಳೂರಿನಲ್ಲಿ ಒಂದು ಭಾಷಣ ಮಾಡಬೇಕಿತ್ತಂತೆ. ಈಗಾಗಲೇ ಕಮ್ಯುನಿಸ್ಟ್ ಚಳುವಳಿಯಲ್ಲಿ ದುಡಿಯುತ್ತಿದರೂ ಸಾಕಷ್ಟು ಸೈದ್ಧಾಂತಿಕ ತಿಳುವಳಿಕೆ ಇಲ್ಲದ ಕಾರಣ ಅವರು ಮಾಡಿದ ಭಾಷಣ ಅವರಿಗೇ ತೃಪ್ತಿಯಾಗಲಿಲ್ಲವಂತೆ. ನಾಚಿಕೆಯಾಗಿ ಊರು ಬಿಟ್ಟು ಗೋವೆಗೆಲ್ಲೋ ಹೋಗಿ ನಾಲ್ಕು ಮಾಂ ಜೀವಿಸಿದರಂತೆ. ಅಲ್ಲಿ ಸ್ವಾಧ್ಯಯನ ನಡೆಸಿ ತನ್ನ ಸೈದ್ಧಾಂತಿಕ ತಿಳುವಳಿಕೆಯನ್ನು ಹೆಚ್ಚಿಸಿಕೊಂಡರಂತೆ.

- ಡಾ. ಐ.ಆರ್.ದುರ್ಗಾಪ್ರಸಾದ್

ಡಿಸೆಂಬರ್ 6 ಕ



ಅಯೋಧ್ಯಾ ಕಾಂಡ-ಹತ್ತು ವರ್ಷಗಳು

ಡಿಸೆಂಬರ್ 1992, ಭಾರತದ ಇತಿಹಾಸದಲ್ಲಿ ಒಂದು ಕಪ್ಪು ದಿನ. ಅಂದು ಖಾವಿ ಪಡೆಗಳು ಉರುಳಿಸಿದ್ದು ಕೇವಲ ಮಸೀದಿಯ ಮೂರು ಗುಮ್ಮಟಗಳನ್ನಲ್ಲ. ಬದಲಾಗಿ ನಾಗರೀಕ ಭಾರತ ಪ್ರತಿಪಾದಿಸಿಕೊಂಡು ಬಂದಿದ್ದ ಧರ್ಮನಿರಪೇಕ್ಷತೆ, ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯದಂತಹ ಉನ್ನತ ಮೌಲ್ಯಗಳ ಮೇಲೆ ಕ್ರೂರ ಧಾಳಿಯನ್ನು ಹರಿಬಿಟ್ಟರು. ಇದರ ಬೆನ್ನಲ್ಲಿ ದೇಶದಾದ್ಯಂತ ವ್ಯಾಪಕ ಕೋಮು ಘರ್ಷಣೆಗಳನ್ನು ಹುಟ್ಟು ಹಾಕಲಾಯಿತು. ಇದು ಆಕಸ್ಮಿಕವಾಗಿ ಅಥವಾ ವ್ಯಕ್ತಿಗತವಾದ ದೌರ್ಬಲ್ಯಗಳಿಂದ ಸಂಭವಿಸಿದ್ದಲ್ಲ. ಅದು ಆಧುನಿಕ ಭಾರತವನ್ನು ವಿರೋಧಿಸಿದ ಫ್ಯಾಸಿಸ್ಟ್ ಮನೋಭಾವದ ಕರಾಳ ಶಕ್ತಿಯಾದ ಆರ್.ಎಸ್.ಎಸ್. ನಂತಹ ಪ್ರತಿಪಾದನೆಯ 'ಹಿಂದುತ್ವ ರಾಷ್ಟ್ರ'ದ ತತ್ವ ಮತ್ತು ಸಿದ್ಧಾಂತದ ದೀರ್ಘಾವಧಿ ಯೋಜನೆಯ ಭಾಗವಾಗಿಯೇ ಇತ್ತು. ಅಲ್ಲದೇ ಜಾರಿಯಾಗತೊಡಗಿದ್ದ ಉದಾರೀಕರಣ, ಜಾಗತೀಕರಣಕ್ಕೆ ವಿರೋಧವಾದ ಜನತೆಯ ಹೋರಾಟವನ್ನು ಸದೆ ಬಡಿಯುವುದಾಗಿತ್ತು. ಅಲ್ಲಿಂದ ಇಲ್ಲಿಯವರೆಗಿನ ದ್ವೇಷ ಹೆಚ್ಚಿಸಿದ ಈ ದಶಕದ ಅವಧಿ, 1998 ರಲ್ಲಿ ಅಧಿಕಾರಕ್ಕೇರಿದ ಬಿಜೆಪಿ ಕೂಟ, ಅದರ ಪರಿವಾರದ ಕೃತ್ಯಗಳು ಭಾರತದ ಭವಿಷ್ಯವನ್ನೇ ಕರಾಳವಾಗಿಸಿ ಕವಲು ಹಾದಿಯಲ್ಲಿ ನಿಲ್ಲಿಸಿದೆ. ಗತಕಾಲದಿಂದಲೂ, ಈ ದಶಕದ ತಲ್ಲಣಕಾರಿ ಘಟನೆಗಳಿಂದಲೂ ದೇಶದ ಜನ ಪಾಠ ಕಲಿಯಬೇಕಾಗಿದೆ. ಮುಂದೊತ್ತುತ್ತಿರುವ ಫ್ಯಾಸಿಸ್ಟ್ ಮನೋಭಾವದ ಶಕ್ತಿಗಳನ್ನು ಹಿಮ್ಮೆಟ್ಟಿಸಬೇಕಿದೆ. ಈ ಹಿನ್ನೆಲೆಯಲ್ಲಿ ಅಂದಿನ ಮತ್ತು ಅಲ್ಲಿಂದ ಇಂದಿನವರೆಗಿನ ಘಟನೆ, ಸನ್ನಿವೇಶ, ಸಂದರ್ಭಗಳನ್ನು ವಿಶ್ಲೇಷಿಸಿ ತೆರೆದಿಡುವ ಪ್ರಯತ್ನವೇ ಈ ವಿಶೇಷ ಲೇಖನಗಳ ಪುರವಣಿ..

ವಿಶ್ವಕವಿ ರವೀಂದ್ರನಾಥ ಠಾಗೋರರು ತಮ್ಮ ಸುಪ್ರಸಿದ್ಧ ಕವಿತೆಯೊಂದರಲ್ಲಿ "ಎಲ್ಲಿ ಶಿರವೆತ್ತಿ ನಡೆಯುವರೋ, ಅಲ್ಲಿ ಆ ಸ್ವಾತಂತ್ರ್ಯದಂಗಳದಿ ನನ್ನ ದೇಶ ಹೆಜ್ಜೆಯಿಡಲಿ' ಎಂದು ಆಶಿಸಿದ್ದರು. ಆದರೆ 1992ರ ಡಿಸೆಂಬರ್ 6 ರಂದು ಅವರೇನಾದರೂ ನಮ್ಮ ನಡುವೆ ಇದ್ದಿದ್ದರೆ ಅವರು ಸಹ ತಮ್ಮ ತಲೆಯನ್ನು ತಗ್ಗಿಸಿಕೊಳ್ಳುತ್ತಿದ್ದರು. ಪುರಾತನ ನಾಗರೀಕತೆಯ ವಾರಸುದಾರರು ನಾವೆಂದು ಹೇಳಿಕೊಳ್ಳುವ, ವಿಶ್ವಕ್ಕೇ ಸಹನೆ, ಸಹಿಷ್ಣುತೆ ಸಹಬಾಳ್ವೆಯ ಸಂದೇಶವನ್ನು ಸಾರಿದವರು ನಾವೆಂದು ಹೇಳಿಕೊಳ್ಳುವ ಈ ದೇಶದಲ್ಲಿ ಅಂದು ನಡೆಯಬಾರದ್ದು ನಡೆದುಹೋಯಿತು. ದ್ವೇಷದಿಂದ ಅಂಧರಾದ ಧರ್ಮಾಧಿಕಾರಿಗಳು, ಅವರ ರಾಜಕೀಯ ವಕ್ತಾರರು ಮತ್ತು ಅವರ ಹುಚ್ಚೆದ್ದ ಹಿಂಬಾಲಕರು ಅಕ್ರಮ ಕೂಟ ನಿರ್ಮಿಸಿಕೊಂಡು ಹಾಡುಹಗಲಲ್ಲೇ, ಕಾನೂನು ವ್ಯವಸ್ಥೆ ಪರಿಪಾಲಕರ ಕಣ್ಣೆದುರಿನಲ್ಲೇ, 4 ಶತಮಾನಗಳಿಂದಲೂ ಮುಸಲ್ಮಾನರಿಗೆ ಪವಿತ್ರ ಪ್ರಾರ್ಥನಾ ಸ್ಥಳವಾಗಿದ್ದ ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಿದಾಗ ವಿಶ್ವ ಸಮುದಾಯದ ಎದುರು ಇಡೀ ದೇಶವೇ ತಲೆತಗ್ಗಿಸುವಂತಾಯಿತು. ಬ್ರಿಟಿಷ್ ವಸಾಹತುಶಾಹಿ ವಿರೋಧಿ ಹೋರಾಟದಲ್ಲಿ ವೈವಿಧ್ಯತೆಯಲ್ಲಿ ಏಕತೆಯನ್ನು ಮೈಗೂಡಿಸಿಕೊಂಡು ಹೊರಹೊಮ್ಮಿದ್ದ ನಮ್ಮ ದೇಶವು ಹತ್ತು ವರ್ಷಗಳ ಹಿಂದೆ ಅನುಭವಿಸಿದ ಆಘಾತದಿಂದ ಇನ್ನೂ ಚೇತರಿಸಿಕೊಳ್ಳಲಿಲ್ಲ. ಡಿಸೆಂಬರ್ 6 ಸ್ವತಂತ್ರ ಭಾರತದ ಚರಿತ್ರೆಯಲ್ಲಿ ಶಾಶ್ವತವಾಗಿ ಒಂದು ಕರಾಳ ದಿನವಾಗಿ ಉಳಿಯಲಿದೆ.

ಇದು ಕೇವಲ ಮಂದಿರ ಮಸೀದಿ ಸಮಸ್ಯೆಯಲ್ಲ. ಮಂದಿರ ಮಸೀದಿ ವಿವಾದ ಕೇವಲ ನೆಪಮಾತ್ರ ಮುಸಲ್ಮಾನರಿಗೆ ಮತ್ತು ಇತರ ಅಲ್ಪಸಂಖ್ಯಾತರಿಗೆ ಈ ದೇಶದಲ್ಲಿರಲು ಯಾವುದೇ ಹಕ್ಕು ಇಲ್ಲ ಎಂದು ದೇಶಕ್ಕೆ ಮನವರಿಕೆ ಮಾಡಲು ಈ ಹಿಂದುತ್ವ ಶಕ್ತಿಗಳು ಬಯಸುತ್ತವೆ. ಮಂದಿರ - ಮಸೀದಿ ಪ್ರಶ್ನೆ ಇತ್ಯರ್ಥವಾಗುವುದು ಅವರಿಗೆ ಬೇಕಾಗಿಲ್ಲ. ಆದ್ದರಿಂದಲೇ ನ್ಯಾಯಾಲಯದ ತೀರ್ಮಾನಕ್ಕೆ ಬದ್ಧರಾಗಲು ಅವರು ಸಿದ್ಧರಿಲ್ಲ. ನ್ಯಾಯಾಲಯ ಹೊರಗೆ ವಿವಾದ ಸೌಹಾರ್ದಯುತವಾಗಿ ಬಗೆಹರಿಯುವ ಸಾಧ್ಯತೆಯಿಲ್ಲ ಏಕೆಂದರೆ ಇದರ ಜೊತೆಯಲ್ಲಿ ಅವರು ಮಥುರಾ ಮತ್ತು ಕಾಶಿಯಲ್ಲಿರುವ ಮಸೀದಿಗಳ ಬಗ್ಗೆ ಬೆದರಿಕೆಹಾಕುತ್ತಾ ಇರುತ್ತಾರೆ. ಭಾರತವನ್ನು ಒಂದು ಮತ ಆಧಾರಿತ ಫ್ಯಾಸಿಸ್ಟ್ ಸ್ವರೂಪದ ರಾಷ್ಟ್ರವಾಗಿಸುವ ತಮ್ಮ ಗುರಿ ಸಾಧನೆಗಾಗಿ ಈ ಕರಾಳ ಶಕ್ತಿಗಳು ತಮ್ಮ ಭಾತೃಘಾತಕ ಆಟವನ್ನು ಮುಂದುವರೆಸದೇ ಇರಲಾರದು. ಕಳೆದ ಹತ್ತು ವರ್ಷಗಳಲ್ಲಿ ಇದು ಸಾಬೀತಾಗಿದೆ. ಮತೀಯ ದಂಗೆಗಳಲ್ಲಿ ಅಮಾಯಕರ ರಕ್ತ ಹರಿಸಿದಷ್ಟು ಮತೀಯ ಧ್ರುವೀಕರಣಕ್ಕೆ ಗೊಬ್ಬರವಾಗುತ್ತಿರುವುದನ್ನು ಕಂಡು ಅವರು ರಾಕ್ಷಸೀ ಆನಂದವನ್ನು ಸವಿಯುತ್ತಾರೆ. ಗುಜರಾತ್‌ನಲ್ಲಿ ಇವರ ಅಟ್ಟಹಾಸವನ್ನು ಕಂಡು ಇಡೀ ವಿಶ್ವವೇ ಧಿಗ್ಭ್ರಮೆಗೊಂಡಿದೆ. ಇವರನ್ನು ಈಗ ಮಟ್ಟಹಾಕದಿದ್ದರೆ ಇನ್ನ್ಯಾವಾಗ? ಎಲ್ಲ ದೇಶಪ್ರೇಮಿ ಜನಗಳು ಇಂದು ತಮ್ಮ ಮೌನವನ್ನು ಮುರಿದು ನಮ್ಮ ಬಹುಮುಖಿ ಸಂಸ್ಕೃತಿಯನ್ನು ಸಹಿಷ್ಣುತೆ, ಸಹಬಾಳ್ವೆಯ ಮೌಲ್ಯಗಳನ್ನು ನಾಶಮಾಡಲು ಹೊರಟಿರುವ ಶಕ್ತಿಗಳ ವಿರುದ್ಧ ಧ್ವನಿ ಎತ್ತುವಂತೆ ಮಾಡುವ ದೃಷ್ಟಿಯಿಂದ ಡಿಸೆಂಬರ್ 6 ಅನ್ನು ಸ್ಮರಿಸುವುದು ಅಗತ್ಯವಾಗಿದೆ.

ಆಧಾರರಹಿತ ಕಟ್ಟುಕಥೆ ; ಆರ್.ಎಸ್.ಶರ್ಮ, ಡಿ.ಎನ್.ಝಾ, ಎಂ. ಅತ್ತರ್ ಅಲಿ, ಸೂರಟ್ ಭಾನ್ ಎಂಬ ಪ್ರಸಿದ್ಧ ಇತಿಹಾಸಕಾರರು ನೀಡಿರುವ ವರದಿಯ ಪ್ರಕಾರ ನಾನೂರೈವತ್ತಕ್ಕೂ ಹೆಚ್ಚು ವರ್ಷಗಳ ಹಿಂದೆ ಆಯೋಧ್ಯೆಯಲ್ಲಿ ಮಂದಿರವೊಂದನ್ನು ನಾಶಮಾಡಿ ಅದರ ಜಾಗದಲ್ಲಿ ಬಾಬ್ರಿ ಮಸೀದಿಯನ್ನು ಕಟ್ಟಲಾಗಿತ್ತು ಎನ್ನುವ ಈ ಖಾವಿ ಪಡೆಗಳ ವಾದಕ್ಕೆ ಯಾವುದೆ ಐತಿಹಾಸಿಕ ಆಧಾರವಿಲ್ಲ. ಬಾಬ್ರಿ ಮಸೀದಿ ಇದ್ದ ಸ್ಥಳದಲ್ಲಿಯೇ ರಾಮ ಮಂದಿರವಿತ್ತು ಎನ್ನುವುದನ್ನು ಸಾಬೀತುಪಡಿಸುವ ಯಾವ ಪುರಾವೆಯೂ ಇಲ್ಲ. ವಿಶ್ವ ಹಿಂದು ಪರಿಷತ್ ಪುರಾವೆಯಾಗಿ ಕೊಡುವ ಸಂಸ್ಕೃತ ಗ್ರಂಥ ಸ್ಕಂದ ಪುರಾಣದಲ್ಲಿ ಪ್ರಸ್ತಾವಿಸಲಾಗಿರುವ ಅಯೋಧ್ಯಾ ಮಹಾತ್ಮೆಯಲ್ಲಿ ರಾಮನ ಜನ್ಮಕ್ಕಿಂತಲೂ ರಾಮನ ಸಾವಿಗೇ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. ಇಲ್ಲಿ ವರ್ಣಿಸಲಾದ 'ಸ್ವರ್ಗದ ಬಾಗಿಲು' ಎಂಬ ಸ್ಥಳವನ್ನು ಸರಯೂ ನದಿಯ ದಂಡೆಯಲ್ಲಿ ಇರುವ ಒಂದು ಗುಹೆಯೊಂದಿಗೆ ಗುರುತಿಸಲಾಗುತ್ತದೆ. ಇಲ್ಲಿ ರಾಮನ ಅಸ್ತಿಯ ಬೂದಿಯನ್ನು ಹೂಳಲಾಗಿದೆ ಎಂಬ ನಂಬಿಕೆಯಿದೆ. ಅಯೋಧ್ಯಾ ಮಹಾತ್ಮೆಯಲ್ಲಿ ಸ್ವರ್ಗದ ಬಾಗಿಲ ವರ್ಣಿಸುವ 100 ಶ್ಲೋಕಗಳಿದ್ದರೆ ಜನ್ಮಸ್ಥಾನವನ್ನು ವರ್ಣಿಸುವ ಎಂಟೇ ಶ್ಲೋಕಗಳಿವೆ. ರಾಮನು ಸ್ವರ್ಗಕ್ಕೆ ಸಾಗಿದ ಮಾರ್ಗವೆಂದು ನಂಬಿಕೆಯಿರುವ ಸ್ಥಳವನ್ನು ತೀರ್ಥಕ್ಷೇತ್ರವಾಗಿ ವರ್ಣಿಸಲಾಗಿದೆಯೇ ಹೊರತು ರಾಮನ ಜನ್ಮ ಸ್ಥಾನವನ್ನು ವರ್ಣಿಸಲಾಗಿಲ್ಲ. ಅಯೋಧ್ಯೆಯೇ ಆಗಿರಬಹುದೆಂದು ಒಪ್ಪಿಕೊಂಡರೂ ಗ್ರಂಥದಲ್ಲಿ ವರ್ಣಿಸಲಾದ ಜನ್ಮ ಸ್ಥಾನಕ್ಕೂ ಬಾಬ್ರಿ ಮಸೀದಿ ಇರುವ ಸ್ಥಳಕ್ಕೂ ಯಾವುದೇ ಸಂಬಂಧವಿಲ್ಲ.

13ನೇ ಶತಮಾನದಿಂದ ಬಾಬ್ರಿ ಮಸೀದಿಯ ಅಕ್ಕ ಪಕ್ಕದಲ್ಲಿ ಮುಸಲ್ಮಾನರು ವಾಸಿಸುತ್ತಿದ್ದ ತಾಣಗಳಿದ್ದವು ಎನ್ನುವುದಕ್ಕೆ ಭೂಗರ್ಭ ಸಂಶೋಧನೆಯ ಪುರಾವೆಗಳಿವೆ. ಬಾಬ್ರಿ ಮಸೀದಿ ನಿರ್ಮಾಣದ ಬಗ್ಗೆ ಅಲ್ಲಿ ಅಳವಡಿಸಲಾದ

ನಿತ್ಯಾನ



ವಿಭಜನಕಾರಿ ದಂತ ಕಥೆಗಳು

ವಿವಾದದ ಉಗಮ :

ದೇವಾಲಯಗಳನ್ನು ಕೆಡವಿ ಮಸೀದಿಗಳನ್ನು ಕಟ್ಟಲಾಗಿರುವ ಬಗ್ಗೆ ಮೊದಲ ಉಲ್ಲೇಖ ದೊರೆಯುತ್ತಿರುವುದು ಮಿರ್ಜಾಜಾನ್ ಅವರು 1855-56ರಲ್ಲಿ ಬರೆದ 'ಹಾದಿಕಾ ಇ -ಷುಹಾದ' ಎಂಬ ಪ್ರಚೋದನಾಕಾರಿ ಪ್ರಬಂಧದಲ್ಲಿ. 1955ರ ವೇಳೆಗೆ ಔಧ್ ನವಾಬನ ಆಳ್ವಿಕೆಯ ಸಮಯದಲ್ಲಿ ಹಿಂದುಗಳ ಮತ್ತು ಮುಸಲ್ಮಾನರ ನಡುವೆ ವೈಷಮ್ಯ ಬೆಳೆದು ತೀವ್ರವಾದ ಘರ್ಷಣೆಗಳು ನಡೆಯಲಾರಂಭಿಸಿದ್ದವು. ಇಸ್ಲಾಮನ್ನು ಬಲಪಡಿಸಲು ದೇವಾಲಯಗಳನ್ನು ನಾಶಮಾಡಿ ಮಸೀದಿಗಳನ್ನು ಕಟ್ಟಲಾಗಿದೆ ಎಂಬ ಮಾತನ್ನು ಮಿರ್ಜಾ ಜಾನ್ ಅವರು ಮೊಘಲ್ ಚಕ್ರವರ್ತಿ ಬಹಾದೂರ್ ಷಾನ ಮಗಳು ಬರೆದ ಪುಸ್ತಕದಲ್ಲಿ ಓದಿದ್ದಾಗಿ ಹೇಳುತ್ತಾರೆ. ಆದರೆ ಮೊಘಲ್ ರಾಜಕುಮಾರಿಯಿಂದಾಗಲಿ ಅಥವ ಬೇರೆಯಾರಿಂದಾಗಲಿ ರಚಿತವಾದ ಅಂತಹ ಗ್ರಂಥ ಪ್ರಪಂಚದ ಯಾವ ಸಂಗ್ರಹದಲ್ಲಿಯೂ ಕಂಡುಬಂದಿಲ್ಲ. ಆದ್ದರಿಂದ ಆ ಪುಸ್ತಕವಾಗಲಿ, ಆ ಪುಸ್ತಕದಿಂದ ಆಯ್ದ ವಾಕ್ಯಗಳಾಗಲಿ ಮಿರ್ಜಾ ಜಾನ್ ಅವರ ಕಪೋಲಕಲ್ಪಿತ ಕಟ್ಟು ಕಥೆಯಲ್ಲದೆ ಬೇರೇನೂ ಆಗಿರಲು ಸಾಧ್ಯವಿಲ್ಲ. ಮಿರ್ಜಾ ಜಾನ್ ಬರೆದ ಈ ಪ್ರಬಂಧ 1855ರ ಮತ್ತು ನಂತರದ ಮತೀಯ ಘರ್ಷಣೆಗಳಿಗೆ ಕಾರಣವಾಯಿತು. ಮತಾಂಧ ಮುಸಲ್ಮಾನರೂ ಮತ್ತು ಹಿಂದೂಗಳೂ ಈ ದಂತಕತೆಯನ್ನು ಪ್ರಚಾರಮಾಡಿದರು. ಒಬ್ಬ ತಿಳಿಗೇಡಿ ಮುಸ್ಲಿಂ ಬರಹಗಾರನ ಅವಿವೇಕದ ಕ್ರಮದಿಂದಾಗಿ ಹೊತ್ತಿದ ಬೆಂಕಿ ಇಂದಿಗೂ ಉರಿಯುತ್ತಾ ಇದೆ.

ಹಿಂದೂಗಳ ಮತ್ತು ಮುಸಲ್ಮಾನರ ನಡುವೆ ಬೆಳೆದು ಬಂದ ಅವಿಶ್ವಾಸದ ಅಂತರವನ್ನು ಹೆಚ್ಚಿಸಿ ಅದರ ರಾಜಕೀಯ ಲಾಭ ಪಡೆಯಲು ಬ್ರಿಟಿಷರು ಯಶಸ್ವಿಯಾದರು. ಅಲಹಬಾದ್ ವಿಶ್ವವಿದ್ಯಾಲಯದ ಡಾ। ಸುಶೀಲ್ ಶ್ರೀವಾಸ್ತವ ಈ ಬಗ್ಗೆ ಆಳವಾದ ಅಧ್ಯಯನ ನಡೆಸಿದ್ದಾರೆ. 1857ರ ದಂಗೆಯ ನಂತರ ವಸಾಹತುಶಾಹಿ ಆಳ್ವಿಕೆಯ ವಿರುದ್ಧದ ಆಕ್ರೋಶ ಕುಗ್ರಾಮಗಳನ್ನೂ ಬಡಿದೆಬ್ಬಿಸಿತ್ತು. ದಂಗೆಯ ಸಂದರ್ಭದಲ್ಲಿ ಫೈಜಾಬಾದ್ ಪ್ರದೇಶದ ಭೂಮಾಲಿಕರು ಒಂದು ರೀತಿಯ ತಟಸ್ಥ ಧೋರಣೆಯನ್ನು ತಾಳಿದ್ದರೂ ಇಲ್ಲಿನ ಮಹಂತರು ಬ್ರಿಟಿಷರನ್ನು ಬೆಂಬಲಿಸಿದ್ದರು. ಬ್ರಿಟಿಷರು ಅವರಿಗೆ ಉಡುಗೊರೆಯಾಗಿ ಬಾಬ್ರಿ ಮಸೀದಿ ಎದುರಿನ ಭೂಮಿಯನ್ನು ನೀಡಿದರಲ್ಲದೆ ಮಸೀದಿಯ ಎದುರುಗಡೆ ರಾಮ ಜನ್ಮಸ್ಥಾನವನ್ನು ಗುರುತಿಸುವ ಒಂದು ಕಟ್ಟೆಯನ್ನು ಕಟ್ಟಲು ಅನುಮತಿ ನೀಡಿದರು. ಮಸೀದಿ ಮತ್ತು ಕಟ್ಟೆಯ ನಡುವೆ ಒಂದು ಬೇಲಿಯನ್ನು ಹಾಕಿಸಿದರು. ಮುಂದೆ ಅಲ್ಲೊಂದು ಗೋಡೆಯನ್ನೇ ನಿರ್ಮಾಣ ಮಾಡಲಾಯಿತು.

ಒಡೆದು ಆಳುವ ನೀತಿಯನ್ನು ಮುಂದುವರೆಸಿದ್ದ ಬ್ರಿಟಿಷರು 1859ರಲ್ಲಿ ಆದೇಶವೊಂದನ್ನು ಹೊರಡಿಸಿ ಮಸೀದಿಗೆ ಪ್ರವೇಶಿಸುವವರು ಉತ್ತರದ ಬಾಗಿಲಿನಿಂದ ಮಾತ್ರ ಪ್ರವೇಶಿಸಬೇಕೆಂದು ನಿರ್ಬಂಧಿಸಿದರು. 1855ರ ಮತೀಯ ಗಲಭೆಗಳ


...ಳವಾಗಿಸಿದವರು

ಪರ್ಷಿಯನ್ ಶಾಸನಗಳೇ ಅತಿ ಹಿಂದಿನ ಪುರಾವೆಗಳಾಗಿವೆ. ಈ ದಾಖಲೆಯ ಪ್ರಕಾರ ಅಯೋಧ್ಯೆಯಲ್ಲಿ ಬಾಬರನ ಗವರ್ನರ್ ಆಗಿದ್ದ ಮೀರ್ ಬಖಿ ಎಂಬಾತನು ಹಿಜಿರಾ ಶಕೆ 935 (ಕಿ.ಶ. 1528-29)ರಲ್ಲಿ ಈ ಮಸೀದಿಯನ್ನು ಕಟ್ಟಿಸಿದ್ದನು. ಎ.ಎಸ್.ಬೇವರಿಡ್ಜ್ ಎಂಬವರು 1921ರಲ್ಲಿ ಭಾಷಾಂತರಿಸಿ ಪ್ರಕಟಿಸಿದ 'ಬಾಬರ್ ನಾಮಾ' ಎಂಬ ಬಾಬರನು ಬರೆದ ಗ್ರಂಥದಲ್ಲಿ ಆತನ ಗವರ್ನರ್ ಮೀರ್ ಬಖಿಯ

ನ್ಯಾಸ

ಪ್ರಸ್ತಾಪವಿದೆ. ಬಾಬ್ರಿ ಮಸೀದಿಯಲ್ಲಿ ಲಭ್ಯವಿದ್ದ ಈ ದೀರ್ಘವಾದ (14 ಪದ್ಯಗಳನ್ನೂ ಒಂದು ಪ್ರಾರ್ಥನೆಯನ್ನೂ ಒಳಗೊಂಡ) ಶಾಸನದಲ್ಲಾಗಲಿ ಬಾಬರನು ಬರೆದ ಗ್ರಂಥದಲ್ಲಾಗಲಿ ಅಯೋಧ್ಯೆಯಲ್ಲಿ ಒಂದು ದೇವಸ್ಥಾನವನ್ನು ಒಡೆದು ಮಸೀದಿಯನ್ನು ಕಟ್ಟಲಾಯಿತು ಎಂಬ ಉಲ್ಲೇಖವಿಲ್ಲ. ಮೀರ್ ಬಖಿ ನಿಜವಾಗಿಯೂ ಮಂದಿರವೊಂದನ್ನು ನಾಶಮಾಡಿದ್ದೇ ಆಗಿದ್ದರೆ ಅದೊಂದು ಸಾಹಸ ಕೃತ್ಯವೆಂದು ಪರಿಗಣಿಸಿ ಮತ್ತು ತನ್ನ ಧಾರ್ಮಿಕ ಗೌರವವನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ಅದನ್ನು ದಾಖಲುಗೊಳಿಸದೆ ಇರುತ್ತಿರಲಿಲ್ಲ ಎಂಬುದನ್ನು ಮರೆಯಬಾರದು.

ಬಾಬ್ರಿ ಮಸೀದಿಯನ್ನು ಕಟ್ಟಿಯಾದ ಐವತ್ತೇ ವರ್ಷಗಳ ನಂತರದಲ್ಲಿ ತುಳಸಿ ದಾಸರು ಕ್ರಿ.ಶ 1575-76ರಲ್ಲಿ 'ರಾಮಚರಿತ ಮಾನಸ' ಎಂಬ ಹೆಸರಿನಲ್ಲಿ ರಾಮಾಯಣವನ್ನು ಅವಧಿ ಭಾಷೆಯಲ್ಲಿ ರಚಿಸಿದರು. ಅದು ಮುಂದೆ ತುಳಸಿ ರಾಮಾಯಣ ಎಂದೇ ಪ್ರಚಲಿತವಾಯಿತು. ತುಳಸಿದಾಸರು ತುಂಬಾ ಪ್ರೀತಿಸುತ್ತಿದ್ದ ಶ್ರೀರಾಮನ ಜನ್ಮ ಭೂಮಿಯಲ್ಲಿದ್ದ ದೇವಾಲಯವನ್ನು ಒಡೆದು ಮಸೀದಿಯನ್ನು ಕಟ್ಟಿದ್ದು ನಿಜವಾಗಿದ್ದರೆ ಅವರು ತಮ್ಮ ಕಾವ್ಯದಲ್ಲಿ ಅದನ್ನು ಪ್ರಸ್ತಾಪಿಸದೆ ಇರುತ್ತಿರಲಿಲ್ಲ. ಭಕ್ತರಿಗೆ ಶ್ರೀರಾಮನನ್ನು ಆತನ ಜನ್ಮಸ್ಥಾನದಲ್ಲಿ ಪೂಜಿಸುವ ಅವಕಾಶ ಇಲ್ಲವಾಗಿದ್ದರೆ ತುಳಸಿದಾಸರು ಅದನ್ನು ಸಹಿಸಿಕೊಳ್ಳುತ್ತಿರಲಿಲ್ಲ. ಅವರು ಆ ಬಗ್ಗೆ ಏನೂ ಬರೆದಿಲ್ಲವೆಂದರೆ ಅಂತಹ ವಿದ್ಯಾಮಾನ ನಡೆದಿರಲಿಲ್ಲವೆಂದೇ ಅರ್ಥ. ತುಳಸಿದಾಸರು ತನಗೆ ಪ್ರಯಾಗವೇ ಪವಿತ್ರ ಕ್ಷೇತ್ರ ಎನ್ನುತ್ತಾರೆಯೇ ಹೊರತು ಆಯೋಧ್ಯೆಯನ್ನಲ್ಲ.


ಕೋಮುವಾದಿಗಳ ಓಲೈಕೆಗೆ ಕಾಂಗ್ರೆಸ್ ಸರ್ಕಾರ - 1991 ರಲ್ಲಿ ಶಿಲಾನ್ಯಾಸ

1539ರಲ್ಲಿ ನಿಧನರಾದ ಗುರು ನಾನಕ್ ಅವರು ಬಾಬರನ ತೀವ್ರ ಟೀಕಾಕಾರರಾಗಿದ್ದರು. ಆದರೂ ಬಾಬರನು ಹಿಂದೂ ದೇವಾಲಯವನ್ನು ನಾಶಮಾಡಿ ಮಸೀದಿಯೊಂದನ್ನು ಕಟ್ಟಿಸಿದ ಎಂದು ಎಲ್ಲಿಯೂ ಹೇಳುವುದಿಲ್ಲ ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಹರ್‌ಕಿಷನ್ ಸಿಂಗ್ ಸುರ್ಜಿತ್ ಬರೆದಿದ್ದಾರೆ. ಹೀಗೆ ಮುಂದೆ 18ನೇ ಶತಮಾನದ ಕೊನೆಯ ವರೆಗೂ ಚರಿತ್ರೆಯಲ್ಲಿ ಈ ಮಂದಿರ ಮಸೀದಿ ವಿವಾದದ ಉಲ್ಲೇಖ ದೊರೆಯುವುದಿಲ್ಲ.

ಸ್ವಾತಂತ್ರ್ಯ ನಂತರ :

ಅಲ್ಲಿಂದ ದೇಶಕ್ಕೆ ಸ್ವಾತಂತ್ರ್ಯ ದೊರೆಯುವವರೆಗೂ ಬಾಬ್ರಿ ಮಸೀದಿ ರಾಮ ಜನ್ಮ ಭೂಮಿ ವಿವಾದ ಸುದ್ದಿಯಲ್ಲಿರಲಿಲ್ಲ. ಆದರೆ ದೇಶವು ವಿಭಜನೆಯಾಗಿ ಒಂದು ಭಾಗವು ಇಸ್ಲಾಂ ರಾಷ್ಟ್ರವಾಗಲಿರುವುದನ್ನು ಕಂಡ ಆರ್.ಎಸ್.ಎಸ್.ಗೆ ಪಿತ್ತ ನೆತ್ತಿಗೇರುವಂತಾಯಿತು. 1925ರಲ್ಲಿ ಸ್ಥಾಪನೆಯಾದಾಗಿನಿಂದಲೂ ಸ್ವಾತಂತ್ರ್ಯ ಚಳುವಳಿಯ ಹತ್ತಿರಕ್ಕೂ ಸುಳಿಯದೆ ನಿಂತಿದ್ದ ಆರ್.ಎಸ್.ಎಸ್.ಹಿಂದೂ ರಾಷ್ಟ್ರ ಪ್ರತಿಪಾದನೆಗೆ ಮತ್ತೆ ಚಾಲನೆ ನೀಡಿತು.

ಆರ್.ಎಸ್.ಎಸ್. ಸದಸ್ಯ ನಾಥೂರಾಮ ಘೋಡ್ಸೆಯಿಂದ ಗಾಂಧೀಜಿಯವರ ಕೊಲೆಯಾದುದರಿಂದ ಆರ್.ಎಸ್.ಎಸ್. ಗೆ ಕೆಲಕಾಲ ಹಿನ್ನಡೆಯಾಯಿತಾದರೂ ಸ್ವಾತಂತ್ರ್ಯ ಚಳುವಳಿಯಲ್ಲಿ ಬೆಳೆದು ಬಂದ ಸೆಕ್ಯೂಲರ್ ಮೌಲ್ಯಗಳು ದೇಶದ ವಿಭಜನೆಯಿಂದಾಗಿ ಬಲಹೀನಗೊಂಡಾಗ ಆರ್.ಎಸ್.ಎಸ್. ಅದನ್ನು ಬಳಸಿಕೊಂಡಿತು. ಆರ್.ಎಸ್.ಎಸ್. ತನ್ನ ರಾಜಕೀಯ ಪಕ್ಷವಾದ ಭಾರತೀಯ ಜನ ಸಂಘವನ್ನು (ಇಂದಿನ ಬಿಜೆಪಿಯ ಹಿಂದಿನ ಅವತಾರ) ಸ್ಥಾಪಿಸುವ ಮುನ್ನ ಹಿಂದೂಗಳನ್ನು ಆಕರ್ಷಿಸಲು ಬಾಬ್ರಿ ಮಸೀದಿ ರಾಮಜನ್ಮಭೂಮಿ ವಿವಾದಕ್ಕೆ ಪುನಃ ಜೀವ ಕೊಟ್ಟಿತು.

ಫೈಜಾಬಾದ್ ಜಿಲ್ಲೆಯಲ್ಲಿ ಅಂದು ಆರ್.ಎಸ್.ಎಸ್.ಗೆ ಸಹಾನುಭೂತಿ ಹೊಂದಿದ್ದ ನಯ್ಯರ್ ಎಂಬವರು ಕಲೆಕ್ಟರ್ ಆಗಿದ್ದರು. ಅವರು ನಿವೃತ್ತಿಯಾದ ಮೇಲೆ ಭಾರತೀಯ ಜನ ಸಂಘವನ್ನು ಸೇರಿ ಅದೇ ಪಕ್ಷದ ಉಮೇದ್ವಾರನಾಗಿ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ನಯ್ಯರ್ ಅವರೊಡನೆ ಪಿತೂರಿ ನಡೆಸಿದ ಕೆಲವು ಆರ್.ಎಸ್.ಎಸ್. ಕಿಡಿಗೇಡಿಗಳು 1949 ಡಿಸೆಂಬರ್ 22 ಮತ್ತು 23ರ ಮಧ್ಯ ರಾತ್ರಿಯಲ್ಲಿ ಮಸೀದಿ ಮತ್ತು ಕಟ್ಟೆಯ ನಡುವಿನ ಗೋಡೆಯನ್ನು ಕೆಡವಿ ರಾಮ, ಸೀತೆ ಮತ್ತು ಲಕ್ಷ್ಮಣರ ವಿಗ್ರಹಗಳನ್ನು ಮಸೀದಿಯ ಒಳಗೆ ಇಟ್ಟು ಬಂದರು. ಭಯಂಕರ ಕೋಮುದಳ್ಳುರಿ ಭುಗಿಲೇಳುವ ಪರಿಸ್ಥಿತಿ ನಿರ್ಮಾಣವಾಯಿತು. ಪರಿಸ್ಥಿತಿಯನ್ನು ಮನಗಂಡು ಮಧ್ಯಪ್ರವೇಶಿಸಿದ ಅಂದಿನ ಪ್ರಧಾನಿ ಜವಾಹರಲಾಲ್ ನೆಹರೂ ಅವರು ಮಸೀದಿಗೆ ಬೀಗ ಹಾಕಿಸಿ ನ್ಯಾಯಾಲಯದ ವಶಕ್ಕೆ ನೀಡಿದರು.

1950ರಲ್ಲಿ ಗೋಪಾಲ ಸಿಂಗ್ ವಿಶಾರದ ಎನ್ನುವರೊಬ್ಬರು ಮಸೀದಿ ಇದ್ದ ಜಾಗದಲ್ಲಿ ದೇವಾಲಯವನ್ನು ಕಟ್ಟಲು ಆ ಕಟ್ಟಡವನ್ನು ತಮ್ಮ ವಶಕ್ಕೆ ನೀಡುವಂತೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದರು. ಅದೇ ಬೇಡಿಕೆ ಇಟ್ಟು 1959ರಲ್ಲಿ ಇನ್ನೊಂದು ಅರ್ಜಿ ನ್ಯಾಯಾಲಯದ ಮುಂದೆ ಬಂತು. 1961ರಲ್ಲಿ ಕೇಂದ್ರ ಸುನ್ನಿ ವಕ್ಫ ಮಂಡಳಿ ಅದೇ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿ ಕಟ್ಟಡವು ತಮ್ಮ ಆಸ್ತಿಯೆಂದು ವಾದ ಮಂಡಿಸಿತು. ಈ ಮೂರು ಅರ್ಜಿಗಳನ್ನು ನ್ಯಾಯಾಲಯವು ಒಂದೇ ಪ್ರಕರಣವಾಗಿ ಪರಿಶೀಲನೆಗೆ ಒಳಪಡಿಸಿತು.

ಎಂಬತ್ತರ ದಶಕದ ಮೊದಲ ಬಾಗದಲ್ಲಿ ಆರ್.ಎಸ್.ಎಸ್. ವಿಶಾಲ ತಳಹದಿಯ ವಿಶ್ವ ಹಿಂದೂ ಪರಿಷತ್ತನ್ನು ಸ್ಥಾಪಿಸಿ, ರಥಯಾತ್ರೆ, ಏಕಾತ್ಮತಾ ಯಾತ್ರೆಗಳ ಮೂಲಕ ಈ ವಿವಾದವನ್ನು ಮುಂದುವರೆಸಿಕೊಂಡು ಹೋಯಿತು.

ಇದೇ ಹಿನ್ನಲೆಯಲ್ಲಿ ವಿವಾಹ ವಿಚ್ಛೇದಿತ ಮುಸ್ಲಿಂ ವೃದ್ಧೆ ಷಾ ಬಾನು ಅವರಿಗೆ ಜೀವನಾಂಶ ನೀಡಬೇಕೆಂದು ಸರ್ವೋಚ್ಛ ನ್ಯಾಯಾಲಯವು ತೀರ್ಪು ನೀಡಿದಾಗ ಮುಸ್ಲಿಂ ಮೂಲಭೂತವಾದಿಗಳು ಕೆರಳಿದರು. ಮುಸ್ಲಿಂ ಮತಗಳ ಬ್ಯಾಂಕನ್ನು ಕಳೆದುಕೊಳ್ಳುವ ಬೀತಿಯಿಂದ ಕಾಂಗ್ರೆಸಿಗರು ಕ್ರಿ. ಪ್ರೊ.ಕೋಡ್ 125ನೆಯ ವಿಧಿಯು ಮುಸಲ್ಮಾನರಿಗೆ ಅನ್ವಯವಾಗುವುದಿಲ್ಲ ಎಂಬು ತಿದ್ದುಪಡಿಯನ್ನು ತಂದರು.

ಮುಸ್ಲಿಂ ಮೂಲಭೂತವಾದಿಗಳಿಗೆ ಕಾಂಗ್ರೆಸ್ ಸರ್ಕಾರ ಮಣಿದಿದೆ ಎಂಬ ಪ್ರಚಾರದಿಂದ ಬಹುಸಂಖ್ಯಾತರ ನಡುವೆ ಬೆಂಬಲ ಕಡಿಮೆಯಾಗುವ ಅಪಾಯವನ್ನು ಕಾಂಗ್ರೆಸ್ ಎದುರಿಸುವಂತಾಯಿತು. ಹಿಂದೂಗಳ ಗಮನವನ್ನು ಬೇರೆ ಕಡೆ ತಿರುಗಿಸಲು ಉಪಾಯನ್ನು ಹುಡುಕತೊಡಗಿದ ಕಾಂಗ್ರೆಸ್ ಯು.ಸಿ. ಪಾಂಡೆ ಎಂಬವರ ಮೂಲಕ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ ಬಾಬ್ರಿ ಮಸೀದಿಯೊಳಗೆ ಇರುವ ವಿಗ್ರಹಗಳಿಗೆ ಪೂಜೆ ಸಲ್ಲಿಸಲು ಅನುಮತಿ ನೀಡಲು ಕೋರಲಾಯಿತು. ಕೇಂದ್ರ ಸರ್ಕಾರ ಮತ್ತು ಅಂದಿನ ಪ್ರಧಾನಿ ರಾಜೀವ ಗಾಂಧಿಯವರ ಮಧ್ಯಪ್ರವೇಶದೊಂದಿಗೆ ಮಸೀದಿಗೆ ಹಾಕಿದ್ದ ಬೀಗ ತೆರೆಯಲಾಯಿತು. ಆ ಮೂಲಕ ಸಮಸ್ಯೆಗಳ ಕಟ್ಟೆಯೇ ಒಡೆದಂತಾಯಿತು.

ವಿವಾದಾತ್ಮಕ ಸ್ಥಳದ ಸ್ವಲ್ಪ ದೂರದಲ್ಲಿ ವಿ.ಹೆಚ್.ಪಿಗೆ ಶಿಲಾನ್ಯಾಸ ಮಾಡಲು ಕಾಂಗ್ರೆಸ್ ಸರ್ಕಾರ ಅನುಮತಿ ನೀಡುವ ಮೂಲಕ ಮತ್ತೊಂದು ತಪ್ಪುಮಾಡಿತು. ಇದು 1989 ನವಂಬರ್‌ನಲ್ಲಿ ಲೋಕಸಭಾ ಚುನಾವಣೆಗಳ ಪೂರ್ವದಲ್ಲಿ ನಡೆಯಿತು.

ತೀವ್ರಗೊಂಡ ಮತೀಯವಾದ : 1989ರ ಚುನಾವಣೆಯಲ್ಲಿ ಕಾಂಗ್ರೆಸ್ ಸೋತು ಸುಣ್ಣವಾಯಿತು. ವಿ.ಪಿ.ಸಿಂಗ್ ನೇತೃತ್ವದ ಜನತಾದಳ ದೊಡ್ಡ ಪಕ್ಷವಾಗಿ ಹೊರಹೊಮ್ಮಿತು ಎಡಪಕ್ಷಗಳ ಬೆಂಬಲಿತ ರಾಷ್ಟ್ರೀಯರಂಗ ಸರ್ಕಾರ ಅಧಿಕಾರಕ್ಕೆ ಬಂತು. ಬಿ.ಜೆ.ಪಿಗೆ ಸರ್ಕಾರವನ್ನು ಸೇರುವ ಆಸೆ ಇತ್ತು. ಎಡಪಕ್ಷಗಳು ಅದಕ್ಕೆ ಅವಕಾಶವಾಗದಂತೆ ನೋಡಿಕೊಂಡವು. ಅನಿವಾರ್ಯವಾಗಿ ಬಿಜೆಪಿಯು ಸರ್ಕಾರಕ್ಕೆ ಹೊರಗಿನಿಂದ ಬೆಂಬಲ ಕೊಡುವಂತಾಯಿತು.

ಜನತಾದಳ ಸರ್ಕಾರವು ಮಂಡಲ ಆಯೋಗದ ಶಿಫಾರಸುಗಳನ್ನು ಜಾರಿಗೊಳಿಸಿ, ಇತರ ಹಿಂದುಳಿದ ವಿಭಾಗಗಳಿಗೆ ಶೇಕಡಾ 27ರಷ್ಟು ಮೀಸಲಾತಿ ಕೊಡಲು ಮುಂದಾದಾಗ ಸೈದ್ಧಾಂತಿಕವಾಗಿ ಜಾತಿಪದ್ಧತಿಯನ್ನು ಬೆಂಬಲಿಸುವ ಮನುವಾದಿ ಬಿಜೆಪಿಯು ಮಂಡಲ್ ವಿರೋಧಿ ಭಾವನೆಗಳನ್ನು ಕೆರಳಿಸಿತು. ವಿರೋಧಪಕ್ಷವಾದ ಕಾಂಗ್ರೆಸ್ ಸಹ ಬಿಜೆಪಿಯೊಂದಿಗೆ ಮಂಡಲ್ ವಿರೋಧಿ ಪ್ರಚಾರದಲ್ಲಿ ಸ್ಪರ್ಧೆಗಿಳಿಯಿತು. ಈ ಅವಧಿಯಲ್ಲಿ ಉ.ಭಾರತದ ಅನೇಕ ನಗರಗಳಲ್ಲಿ ವ್ಯಾಪಕ ಹಿಂಸಾಚಾರ ನಡೆಯಿತು. ಇದೇ ಅವಧಿಯಲ್ಲಿ ಬಿಜೆಪಿಯ ಅಂದಿನ ಅಧ್ಯಕ್ಷ ಎಲ್.ಕೆ.ಅಡ್ವಾಣಿ ತನ್ನ ಕುಪ್ರಸಿದ್ಧ ರಥ ಯಾತ್ರೆ ಆರಂಭಿಸಿ ಅಮಾಯಕರ ರಕ್ತ ಕೋಡಿಗಳಾಗಿ ಹರಿಯುವಂತೆ ಮಾಡಿದರು.ಬಿಹಾರದ ಜನತಾದಳ ಸರ್ಕಾರ ಲಾಲು ಪ್ರಸಾದ್ ಯಾದವ ಅವರ ನೇತೃತ್ವದಲ್ಲಿ ರಥಯಾತ್ರೆಯನ್ನು ತಡೆದಾಗಲೇ ರಕ್ತದೋಕುಳಿ ನಿಲ್ಲುವಂತಾಯಿತು. ಉ.ಪ್ರ.ಜನತಾದಳ ಸರ್ಕಾರವು ಮುಲಾಯಂ ಸಿಂಗ್ ಅವರ ನೇತೃತ್ವದಲ್ಲಿ ಹುಚ್ಚೆದ್ದು ಅಯೋಧ್ಯೆಗೆ ಬರುತ್ತಿದ್ದ ಕರಸೇವಕರನ್ನು ಯಶಸ್ವಿಯಾಗಿ ನಿಯಂತ್ರಿಸಿತು. ಮಸೀದಿಗೆ ಯಾವುದೇ ಹಾನಿಯಾಗಲಿಲ್ಲ.

ರಾಷ್ಟ್ರೀಯ ರಂಗ ಸರ್ಕಾರಕ್ಕೆ ಬಿಜೆಪಿ ತನ್ನ ಬೆಂಬಲವನ್ನು ಹಿಂತೆಗೆದುಕೊಂಡಿತು. ಜನತಾದಳದ ಕೆಲವರು ಮಾಡಿದ ಪಿತೂರಿಯಿಂದ ಸರ್ಕಾರ ರಾಜಿನಾಮೆ ಕೊಡಬೇಕಾಯಿತು. ಸರ್ಕಾರ ಕೆಡವುದರಲ್ಲಿ ಬಿಜೆಪಿ ಜೊತೆ ನಿಂತಿದ್ದ ಕಾಂಗ್ರೆಸ್ ಪಕ್ಷಾಂತರಿಗಳನ್ನು ಕಟ್ಟಿಕೊಂಡು ರಚಿಸಿದ ಸರ್ಕಾರ 5 ತಿಂಗಳುಗಳ ಕಾಲವಷ್ಟೇ ಅಧಿಕಾರ ನಡೆಸಿತು.

ಮಧ್ಯಂತರ ಚುನಾವಣೆ ಕಾಂಗ್ರೆಸ್ಸನ್ನು ಮತ್ತೆ ಅಧಿಕಾರಕ್ಕೆ ತಂದಿತು. ಪಿ.ವಿ.ನರಸಿಂಹರಾವ್ ಪ್ರಧಾನಿಯಾದರು. ಅದೇ ವೇಳೆ ಉ.ಪ್ರದೇಶದಲ್ಲಿ ಮುಲಾಯಂ ಸಿಂಗ್ ಸರ್ಕಾರ ಪಥನವಾಗಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂತು.

ಘೋರ ದುಷ್ಕೃತ್ಯ: ಲೋಕಸಭೆಯಲ್ಲಿ 1989 ರಲ್ಲಿ ಮತ್ತೆ 1991ರಲ್ಲಿ ಬಿಜೆಪಿಯ ಸಂಖ್ಯಾಬಲ ಹೆಚ್ಚುತ್ತಾ ಹೋದದ್ದು, ಉ.ಪ್ರದೇಶದಲ್ಲಿ ಸರ್ಕಾರ ರಚಿಸಲು ಸಾಧ್ಯವಾದ್ದು, ಬಿಜೆಪಿಯ ಮಹತ್ವಾಕಾಂಕ್ಷೆಯನ್ನು ಹಿಮಾಲಯಕ್ಕೇರಿಸಿತು. ವ್ಯಾಪಕ ಕೋಮು ಅಲೆ ಎಬ್ಬಿಸುವ ಮೂಲಕ ಇಡೀದೇಶವನ್ನೇ ತನ್ನ ಮುಷ್ಟಿಯೊಳಗೆ ತರಬಹುದು ಎಂಬ ಲೆಕ್ಕಾಚಾರ ಅದರದಾಯಿತು. ಡಿಸೆಂಬರ್ 6 ರಂದು ವಿವಾದಿತ ಸ್ಥಳದಲ್ಲಿ ಕರಸೇವೆ ಆರಂಭಿಸುವುದಾಗಿ ವಿಹೆಚ್‌ಪಿ ನರಸಿಂಹ ರಾವ್ ಸರ್ಕಾರಕ್ಕೆ ಬೆದರಿಕೆ ಹಾಕಿತು.


ಪುಟ 13 ಕ್ಕೆ

...ತ್ತಿಸಿದ ಬೆಂಕಿ

...ನಂತರ ಫೈಜಾಬಾದಿನ ಹಿಂದೂ ಮುಸ್ಲಿಂ ಮುಂದಾಳುಗಳು ಒಂದು ಒಪ್ಪಂದವನ್ನು ಮಾಡಿಕೊಂಡಿದ್ದರು. 1859ರ ಬ್ರಿಟಿಷ್ ಆಜ್ಞೆ ಈ ಒಪ್ಪಂದಕ್ಕೆ ವಿರುದ್ಧವಾಗಿತ್ತು. ರೆಸಿಡೆಂಟನ್ ಆದೇಶವನ್ನು ಪ್ರಶ್ನಿಸಿದ ಹಿಂದೂ ಮತ್ತು ಮುಸ್ಲಿಂ ಹಿರಿಯರಿಗೆ ಮರಣದಂಡನೆ ವಿಧಿಸಿ ಒಂದು ಆಲದ ಮರಕ್ಕೆ ಅವರನ್ನು ನೇಣು ಹಾಕಲಾಯಿತು. ತಮ್ಮ ಹಿರಿಯರನ್ನು ನೇಣು ಹಾಕಿದ್ದ ಮರವನ್ನು ಪವಿತ್ರ ಸ್ಮಾರಕವಾಗಿ ಸ್ಥಳೀಯ ಜನರು ಪೂಜಿಸ ತೊಡಗಿದ್ದನ್ನು ಸಹಿಸದ ಬ್ರಿಟಿಷರು ಕೆಲಕಾಲದ ನಂತರ ಆ ಮರವನ್ನೆ ಕಿತ್ತು ಹಾಕಿದರು.

ಬಾಬ್ರಿ ಮಸೀದಿ ಇದ್ದ ಸ್ಥಳ ರಾಮ ಜನ್ಮ ಭೂಮಿ ಆಗಿತ್ತೆಂದು ಒತ್ತಾಯಿಸುವಂತೆ ಬ್ರಿಟಿಷ್ ಅಧಿಕಾರಿಗಳು ಮಹಂತರಿಗೆ ಪ್ರಚೋದನೆ ನೀಡುತ್ತಾ ಇದ್ದರು. 1885ರಲ್ಲಿ ರಘುಬೀರ್ ದಾಸ್ ಎಂಬ ಒಬ್ಬ ಮಹಂತ ಈ ವಿಷಯವನ್ನು ಕೆದಕಿ ಮಸೀದಿಯ ಹೊರಗಡೆಯಿದ್ದ ವೇದಿಕೆಯ ಮೇಲೆ ಒಂದು ಮಂದಿರವನ್ನು ಕಟ್ಟುವುದಕ್ಕೆ ಅನುಮತಿ ಕೋರಿದ. ಈತನ ಅರ್ಜಿಯನ್ನು ಫೈಜಾಬಾದಿನ ಸಬ್ ಜಡ್ಜ್ ಹರಿಕಿಶನ್ ಶಾಸ್ತ್ರಿ ಅವರು 1885 ಡಿಸೆಂಬರ್ 24 ರಂದು ತಿರಸ್ಕರಿಸಿದರು. ಇದಾದ ಬಳಿಕ ಈ ಪ್ರಶ್ನೆಯು ಕೇವಲ ಇತಿಹಾಸದ ಪ್ರಶ್ನೆಯಾಗಿ ಉಳಿಯಿತು. ಮುಸಲ್ಮಾನರು ಮಸೀದಿಯ ಉತ್ತರದಬಾಗಿಲಿ ನಿಂದ ಪ್ರವೇಶಿಸಿ ಮಸೀದಿಯಲ್ಲಿ ಪ್ರಾರ್ಥನೆ ಸಲ್ಲಿಸುತ್ತಿದ್ದರು. ಅಲ್ಲಿಯ ಮಹಂತರು ತಮ್ಮತಮ್ಮ ದೇವಾಲಯಗಳೇ ನಿಜವಾದ ರಾಮ ಜನ್ಮ ಭೂಮಿ ಎಂದು ವಾದಿಸುವ ಅನೇಕ ಮಹಂತರು ಅಯೋಧ್ಯೆಯಲ್ಲಿ ಕಾಣಸಿಗುತ್ತಾರೆ.

ಹಲವು ತಿಂಗಳುಗಳಿಂದ ಹೊಸೆದ ದುಷ್ಟ ಸಂಚು



"ಬಾಬ್ರಿ ಮಸೀದಿ ಕೆಡವಿದ ಘಟನೆ ದುರದೃಷ್ಟಕರ. ಅದಕ್ಕೆ ಖೇದ ವ್ಯಕ್ತಪಡಿಸುತ್ತೇವೆ. ಆದರೆ ಈ ಕೃತ್ಯ ನಮ್ಮ ಯೋಜನೆಯಲ್ಲಿ ಇರಲಿಲ್ಲ. ಕೆಲವು ಪುಂಡರೋ, ಭಾವೋದ್ರೇಕಗೊಂಡ ಕರಸೇವಕರೋ ಮಾಡಿದ್ದಾರೆ" ಇದು ವಾಜಪೇಯಿಯವರಿಂದ ಹಿಡಿದು ಪೇಜಾವರ ಮಠಾಧೀಶರವರೆಗೂ ಎಲ್ಲರೂ ಹಾಡುವ ರಾಗ. ಇದು ನಿಜವೇ? ಅಲ್ಲ ಎಂದು ಈಗ ವಿವಿಧ ಪತ್ರಿಕೆಗಳಲ್ಲಿ ಬಂದಿರುವ ಸುದ್ದಿಗಳಿಂದ ಸ್ಪಷ್ಟವಾಗಿದೆ. ಬಾಬ್ರಿ ಮಸೀದಿಯನ್ನು ಕೆಡವುವುದು ಮಾತ್ರವಲ್ಲ, ತಮ್ಮ ಗುರಿ ಈಡೇರಿಸಿಕೊಂಡ ನಂತರ ಅಲ್ಲಿಂದ ಕಾಲು ಕೀಳುವುದು ಕೂಡ ಯೋಜಿತವಾಗಿತ್ತು ಎಂಬುದು ಸ್ಪಷ್ಟವಿದೆ.

ಮಸೀದಿ ಕೆಡಹುವ ಯೋಜನೆಯ ರಿಹರ್ಸಲ್‌ನ್ನು ಡಿಸೆಂಬರ್ 5 ಅಪರಾಹ್ನ 2.30ರಿಂದ 5.30ರವರೆಗೆ ಸುಮಾರು 500 ಸ್ವಯಂಸೇವಕರು ವಿವಾದಗ್ರಸ್ತ ಸ್ಥಳದ ಪಕ್ಕದ ಗುಡ್ಡಗಾಡು ಪ್ರದೇಶವಾದ 'ರಾಮ್ ಕಥಾ ಕುಂಜ್'ನಲ್ಲಿ ನಡೆಸಿದರು. (ಫೋಟೋ ನೋಡಿ) ಮಸೀದಿ ಹತ್ತುವುದು, ಹಗ್ಗದಿಂದ ಗುಮ್ಮಟದ ರೀತಿಯ ಮಣ್ಣುಗುಡ್ಡೆಯನ್ನು ಎಳೆಯುವುದು ಇತ್ಯಾದಿ ಈ ರಿಹರ್ಸಲ್‌ನಲ್ಲಿ ಸೇರಿತ್ತು.

ಒಬ್ಬ ಬಿಜೆಪಿ ಎಂಪಿ ತನ್ನನ್ನು ಇಲ್ಲಿಗೆ ಕರೆದೊಯ್ದು ಈ ಕರಸೇವಕರನ್ನು ತೋರಿಸಿದರು ಎಂದು 'ಪಯೋನಿರ್' ಪತ್ರಿಕೆಯ ಪ್ರವೀಣ್ ಜೈನ್ ಬರೆದಿದ್ದಾರೆ. ಅಲ್ಲಿ ಯಾವ ರೀತಿಯಲ್ಲಿ ಕರಸೇವಕರು ಹಗ್ಗ ಕಟ್ಟಿ ವಿವಿಧ ದಿಕ್ಕುಗಳಿಂದ ಎಳೆಯುತ್ತಿದ್ದರೋ ಅದೇ ರೀತಿಯಲ್ಲಿ ಮರು ದಿನ ಮಸೀದಿ ಗುಮ್ಮಟಗಳನ್ನು ಕೆಳಕ್ಕೆಳೆದು ಹಾಕಲಾಯಿತು ಎಂದಿದ್ದಾರೆ ಇವರು.



ಪಿಕಾಸಿ, ಗುದ್ದಲಿಗಳಿಂದ ಟ್ರಾಕ್ಟರ್‌ವರೆಗೂ ಸರ್ವ ಸಿದ್ಧ!

'ಜನಸತ್ತಾ' ಹಿಂದೀ ದೈನಿಕದ ಹೇಮಂತ ಶರ್ಮಾರವರ ಪ್ರಕಾರ ಈ ಯೋಜನೆಯಲ್ಲಿ ಐದು ಭಾಗಗಳಿದ್ದವು. ಕರಸೇವಕರ ಎರಡು ಗುಂಪುಗಳು ದಕ್ಷಿಣದಿಂದೊಂದು, ಉತ್ತರದಿಂದೊಂದು ಗುಮ್ಮಟಗಳ ಮೇಲೇರಿ ಹೋದವು. ಸಮವಸ್ತ್ರ ಧರಿಸಿದ್ದ ಆರ್.ಎಸ್.ಎಸ್. ಸ್ವಯಂಸೇವಕ ಅವರಿಗೆ ಬಾವುಟ ಮತ್ತು ಸೀಟಿ ಮೂಲಕ ನಿರ್ದೇಶನ ನೀಡುತ್ತಿದ್ದ. ಗಾಯಗೊಂಡವರನ್ನು ಸಾಗಿಸಲು ಇನ್ನೊಂದು ಸ್ಟ್ರೆಚರ್, ಗಾಡಿಗಳೊಂದಿಗೆ ಸಜ್ಜಿತವಾಗಿತ್ತು. ಮತ್ತೊಂದು ಗುಂಪಿನ ಕೆಲಸ ಫೋಟೋ ಗ್ರಾಫರ್‌ಗಳನ್ನು ಹೊಡೆದುಬಡಿದು ದೂರವಿಡುವುದು.. ಅಯೋಧ್ಯೆಯಿಂದ ಯಾವುದೇ ಸುದ್ದಿ ಹೊರಹೋಗದಂತೆ ವ್ಯವಸ್ಥೆ ಮಾಡಲಾಗಿತ್ತು. ಪಿಕಾಸಿ, ಗುದ್ದಲಿಗಳು ಸಿದ್ಧವಾಗಿದ್ದವು. ಮೊದಲು ಮಸೀದಿಯತ್ತ ಧಾವಿಸಿದ ಕರಸೇವಕರ ಕೈಗಳಲ್ಲಿ ಗಮ್ಮಟ ಹತ್ತಲು ಹಗ್ಗಗಳೂ ಸಿದ್ಧವಿದ್ದವು. ಅವರು ಗುಮ್ಮಟ ಹತ್ತುತ್ತಿದ್ದಂತೆ ವಿದ್ಯುತ್ ಸರಬರಾಜು ನಿಂತಿತು. ಇದರಿಂದ ಮಸೀದಿಯ ಸುತ್ತ ಇದ್ದ ವಿದ್ಯುತ್ ಬೇಲಿಯನ್ನು ಹಾರುವುದು ಸುಲಭವಾಯಿತು. ಸಿ.ಆರ್.ಪಿ.ಎಫ್.ನ ಸಂದೇಶ ತಂತಿಗಳನ್ನು ಕಡಿದುಹಾಕಲಾಯಿತು. ಅಲ್ಲಿ ಜಿಲ್ಲಾ ಆಸ್ಪತ್ರೆಯ ಡಾಕ್ಟರರೂ ಹಾಜರಿದ್ದರು! ರಾಮಜನ್ಮಭೂಮಿ ಟ್ರಸ್ಟ್ ಕಚೇರಿಯಲ್ಲೂ ಡಾಕ್ಟರುಗಳ ತಂಡ ಸಿದ್ಧವಾಗಿ ನಿಂತಿತ್ತು.


ತರಬೇತಿ ಪಡೆದ ಕರಸೇವಕರು

ಕರಸೇವಕರೇ ಸ್ವತಃ ತಮಗೆ ಈ ಮೊದಲೇ ತರಬೇತಿ ನೀಡಲಾಗಿದೆ ಎಂದಿರುವ ಈ ಸುದ್ದಿಗಳನ್ನು ನೋಡಿ! ಒಂದು ಹೈದರಾಬಾದಿನಿಂದ, ಇನ್ನೊಂದು ಗ್ವಾಲೇರದಿಂದ ಬಂದ ಸುದ್ದಿ ಇವು.

ಪ್ರಧಾನಿಗಳ ತವರು ಜಿಲ್ಲೆ ಕರೀಂ ನಗರದ ಹೈದರಾಬಾದ್ ಪ್ರದೇಶದಿಂದ ಹೊರಟ ಕರಸೇವಕರು ನವಂಬರ್ 27 ರಂದು ಆಯೋಧ್ಯೆ ತಲುಪಿದಾಗ ಅವರನ್ನು ಭಜರಂಗ ದಳಕ್ಕೆ ಸೇರಿಸಿಕೊಂಡು ಪೊಲೀಸರನ್ನು ಎದುರಿಸುವುದು ಹೇಗೆ, ಅಶ್ರುವಾಯುವಿನಿಂದ ತಪ್ಪಿಸಿಕೊಳ್ಳುವುದು ಹೇಗೆ ಎಂದು ತರಬೇತಿ ನೀಡಲಾಯಿತು. ಬಾಬ್ರಿ ಮಸೀದಿಯನ್ನು ಜಾಗರೂಕತೆಯಿಂದ ತೀರ್ಮಾನಿಸಿದ ಯೋಜನೆಯ ಪ್ರಕಾರ ಕೆಡವಿ ಹಾಕಲಾಯಿತು. ಕರಸೇವೆಯಲ್ಲಿ ಪ್ರಧಾನಮಂತ್ರಿಗಳ ಸ್ವಂತ ಜಿಲ್ಲೆ ಕರೀಂಗ ನರದವರು ಅಗ್ರಪಂಕ್ತಿಯಲ್ಲಿ ಇರಬೇಕೆಂಬುದು ಅಡ್ವಾನಿಯವರ ಸಲಹೆಯಾಗಿತ್ತು ಎಂದಿದ್ದಾರಂತೆ ಇವರು. ಮಸೀದಿಯ ಗುಮ್ಮಟದ ಮೇಲೆ ಮೊದಲು ಹತ್ತಿದ ಕರಸೇವಕ ಹುಸ್ನಾಬಾದ್ ಪ್ರದೇಶದವನಂತೆ ('ಹಿಂದೂ' ಡಿ. 12, 1992)

ಭೂಪಾಲದ ಆರ್.ಎಸ್.ಎಸ್. ಪತ್ರಿಕೆ 'ಸ್ವದೇಶ' ಕೂಡಾ ಇಂತಹುದೇ ಒಬ್ಬ ಕರಸೇವಕನ ಸಂದರ್ಶನ ಪ್ರಕಟಿಸಿದೆ ಎಂದು ಟೈಮ್ಸ್ ಆಫ್ ಇಂಡಿಯಾ (ಡಿ.17) ವರದಿಮಾಡಿದೆ. ಪಿಕಾಸಿ, ಗುದ್ದಲಿ ಇತ್ಯಾದಿಗಳನ್ನು ಹಿಡಿದುಕೊಂಡು ಮುಳ್ಳು ಬೇಲಿ ಹಾರುವುದು ಹೇಗೆ ಎಂದು ನಾಲ್ಕು ದಿನ ತರಬೇತಿ ನೀಡಲಾಯಿತಂತೆ. ಡಿಸೆಂಬರ್ 6 ರಂದು ಬೆಳಿಗ್ಗೆ 11ರ ಹೊತ್ತಿಗೆ ಈ ತಂಡ ಗುದ್ದಲಿ, ಪಿಕಾಸಿಗಳನ್ನು ಹಿಡಿದು ರಾಮಜನ್ಮಭೂಮಿ ಆವರಣದ ಹಿಂದಿನ ದ್ವಾರದಲ್ಲಿ ಸಿದ್ಧವಾಗಿ ನಿಂತಿತು ಎಂದು ಸಂದರ್ಶನದಲ್ಲಿ ಅವರು ಹೇಳಿದ್ದಾರೆ.

ಸೆಪ್ಟೆಂಬರ್ ಕೊನೆಯ ವಾರದಿಂದಲೇ ಈ ಯೋಜನೆ ತಯಾರಿಸಿದ್ದೆವೆಂದು ಉತ್ತರಪ್ರದೇಶದ ಭಜರಂಗದಳದ ಮುಖಂಡರೊಬ್ಬರು 'ಫ್ರಂಟ್ ಲೈನ್' ವರದಿಗಾರ ವೆಂಕಟೇಶ್ ರಾಮಕೃಷ್ಣನ್‌ಗೆ ಹೇಳಿದ್ದಾರೆ. ('ಫ್ರಂಟ್ ಲೈನ್' ನ ಜನವರಿ 1, 1993 ಸಂಚಿಕೆ ನೋಡಿ) 1200 ಸ್ವಯಂಸೇವಕರಿಗೆ ತರಬೇತಿ ನೀಡಲಾಯಿತಂತೆ. ಒರಿಸ್ಸಾದಿಂದ ಒಬ್ಬ ಇಂಜಿನಿಯರ್‌ರನ್ನು ಕರೆಸಿ ಈ ಕಟ್ಟಡ ರಚನೆಯ ಅಧ್ಯಯನ ಮಾಡಲಾಯಿತು. ಇದರಿಂದಲೇ ಅಕ್ಟೋಬರ್ ನವಂಬರ್ 1990ರಲ್ಲಿ ಮಾಡಿದಂತೆ ಕೇವಲ ಗುಮ್ಮಟ ಮಾತ್ರ ಒಡೆಯದೆ ಈ ಬಾರಿ ಗುಮ್ಮಟ ಹಾಗೂ ಅಡಿಪಾಯ ಎರಡಕ್ಕೂ ಏಕಕಾಲದಲ್ಲಿ ಗುರಿಯಿಡಲಾಯಿತು ಎಂದಿರುವ ಈ ಭಜರಂಗದಳದ ಮುಖಂಡ, ಇಲ್ಲವಾದರೆ ಭಾವೋದ್ರೇಕಗೊಂಡ ಕೆಲವು ಕರಸೇವಕರು ಇಷ್ಟು ವ್ಯವಸ್ಥಿತವಾಗಿ ಇದನ್ನು ಮಾಡಲು ಸಾಧ್ಯವಿತ್ತೇ, ಆರೇ ಗಂಟೆಯೊಳಗೆ ದೊಡ್ಡ ಮಸೀದಿಯನ್ನು ನೆಲಸಮ ಮಾಡುವುದು ಸಾಧ್ಯವಿತ್ತೇ ಎಂದು ಪ್ರಶ್ನಿಸಿದ್ದಾರೆ.



ಮಸೀದಿ ಕೆಡವಿ, ಕಲ್ಲುಮಣ್ಣಿನ ರಾಶಿಯನ್ನು ಮಟ್ಟಮಾಡಿ, ನಿರ್ಮಾಣ ಸಲಕರಣೆಗಳನ್ನು ಒದಗಿಸಿ, ಐದಡಿ ಎತ್ತರದ ಗೋಡೆ ಕಟ್ಟಿ ರಾಮಸೀತಾ ಮೂರ್ತಿಗಳನ್ನು ಪ್ರತಿಸ್ಥಾಪಿಸಿರುವ ಕೆಲಸ 12 ಗಂಟೆಯೊಳಗೆ ಪೂರೈಸಿತು. ಇದು ಗಿನ್ನೀಸ್ ದಾಖಲೆಗೆ ಸೇರಬೇಕಾದ ಸಾಧನೆ. ಇವೆಲ್ಲಾ ಕೆಲವು 'ಪುಂಡಪೋಕರಿ'ಗಳ ಕೃತ್ಯವೆಂದು ಯಾರೂ ನಂಬಲು ಸಾಧ್ಯವಿಲ್ಲ ಎಂದಿದ್ದಾರೆ. 'ಹಿಂದೂ' ಪತ್ರಿಕೆಯ ವರದಿಗಾರ ಮುರಳೀಧರ್ ರೆಡ್ಡಿ (ಡಿ.3) ಮಸೀದಿ ಕೆಡವಿದ ನಿಮಿಷಗಳೊಳಗೆ ಒಬ್ಬ ಇಂಜಿನಿಯರ್ ಅಲ್ಲಿ ಹಾಜರಾದನಂತೆ.

ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವಾಗ ಕೇಂದ್ರ ಸರಕಾರ ಮಧ್ಯಪ್ರವೇಶಿಸುತ್ತದೆ, ಆಗ ಕೆಲವು ಕರಸೇವಕರು 'ಹುತಾತ್ಮ' ರಾಗುತ್ತಾರೆ. ಅದನ್ನು ರಾಜಕೀಯವಾಗಿ ಬಳಸಿ ಮಧ್ಯಾವಧಿ ಚುನಾವಣೆ ಒತ್ತಾಯಿಸಿ ಅಧಿಕಾರ ಪಡೆಯುವುದು ಎಂದು ನಿರ್ಧಾರವಾಗಿತ್ತೆಂದು ಮೇಲೆ ಹೇಳಿದ ಭಜರಂಗದಳದ ಮುಖಂಡರು 'ಫ್ರಂಟ್ ಲೈನ್' ವರದಿಗಾರರಿಗೆ ತಿಳಿಸಿದ್ದಾರೆ.

ಸರಕಾರ ಮಧ್ಯಪ್ರವೇಶಿಸದಿದ್ದರೆ ಏನು ಮಾಡಬೇಕೆಂದೂ ಯೋಜಿಸಲಾಗಿತ್ತು. ಆದರೆ ಡಿಸೆಂಬರ್ 4 ರಿಂದಲೇ ತರಬೇತಿ ಪಡೆದ ಹಾಗೂ ತರಬೇತಿ ಪಡೆಯದ ಕರಸೇವಕರ ತೀವ್ರ ವಿರೋಧದಿಂದಾಗಿ ಅದು ಕಾರ್ಯರೂಪಕ್ಕೆ ಬರಲಿಲ್ಲ.!

ಸಾಂಕೇತಿಕ ಕರಸೇವೆಯತ್ನಕ್ಕೆ ಕರಸೇವಕರಿಂದ ಬೈಗುಳ - ಅಡ್ವಾಣಿ ಪ್ರೋತ್ಸಾಹ

ಕೊನೆಯ ವೇಳೆಗೆ 'ಹಿಂದುತ್ವ' ಮುಖಂಡರು 1992ರಲ್ಲಿ 2.77 ಎಕರೆ ಪ್ರದೇಶದಲ್ಲಿ ಕಟ್ಟಿದ ವೇದಿಕೆಯನ್ನು ಗುಡಿಸುವ, ತೊಳೆಯುವ ಸಮಮಾಡುವ ಪರ್ಯಾಯ ಯೋಜನೆಯನ್ನು ಜಾರಿ ಮಾಡಲು ಪ್ರಯತ್ನಿಸಿದರೆಂಬುದು ನಿಜ ಎಂದು ಕೆಲವು ಪತ್ರಕರ್ತರು ಹೇಳಿದ್ದಾರೆ. ಆದರೆ

ಅಡ್ವಾಣಿ, ಜೋಷಿಯವರಿಗೆ ಗೊತ್ತಿರಲಿಲ್ಲವೇ?


ನಿಜ. ಈ ಯೋಜನೆ ಈ 'ಹಿಂದುತ್ವ ಕೂಟ'ದ ಎಲ್ಲರಿಗೂ ತಿಳಿದಿತ್ತೇ ಎಂಬ ಪ್ರಶ್ನೆ. ಮುಖ್ಯವಾಗಿ ಅಡ್ವಾಣಿ, ಜೋಷಿಯವರಿಗೆ ಇದು ತಿಳಿದಿತ್ತೇ ಎಂಬ ಪ್ರಶ್ನೆ ಮಾತ್ರ ಉಳಿಯುತ್ತದೆ. ಏನಿಲ್ಲವೆಂದರೂ ಕನಿಷ್ಠ 12 ಗಂಟೆಗಳ ಮೊದಲು ಅವರಿಗೆ ತಿಳಿದಿತ್ತು ಎಂದು 'ಹಿಂದೂ' ಪತ್ರಿಕೆಯ ವರದಿಗಾರ ಹೇಳುತ್ತಾರೆ. ಅಲ್ಲದೆ ಇತರ ಕೆಲವು ಸಂಗತಿಗಳೂ ಇದನ್ನು ಪುಷ್ಟಿಗೊಳಿಸುತ್ತವೆ.

- ಡಿಸೆಂಬರ್ 5ರ ಸಂಜೆ ಲಕ್ನೌನಲ್ಲಿದ್ದ ಅಡ್ವಾಣಿಯವರಿಗೆ ಅಯೋಧ್ಯೆಗೆ ಅದೇ ರಾತ್ರಿ ಬನ್ನಿ ಎಂದು ನಿರ್ದೇಶನ ಹೋಯಿತು. ಮೊದಲಿನ ಕಾರ್ಯಕ್ರಮದ ಪ್ರಕಾರ ಅವರು ಡಿಸೆಂಬರ್ 6ರ ಮಧ್ಯಾಹ್ನ 1 ಗಂಟೆಗೆ ಬರಬೇಕಾಗಿತ್ತು. ಏಕೆ ಈ ಸಂದೇಶ?
- ಡಿಸೆಂಬರ್ 6ರ ಬೆಳಿಗ್ಗೆ ಅಡ್ವಾಣಿ, ಭಜರಂಗ ದಳದ ಮುಖಂಡ ವಿನಯ್ ಕಟಿಯಾರ್ ಹಾಗೂ ಶಿವಸೇನೆಯ ಸಂಸದೀಯ ಮುಖಂಡ ಮೋರೇಶ್ವರ ಸೇವೆಯವರ ನಡುವೆ ಗುಪ್ತ ಮಾತುಕತೆ ನಡೆಯಿತು ಈ ಮಾತುಕತೆ ಏಕಿರಬಹುದು?.
- ಕರಸೇವೆ 2.77 ಎಕರೆ ಜಾಗದಲ್ಲೇ ನಡೆಯುವಂತಿದ್ದರೆ ಆಡ್ವಾಣಿಯವರಿಗೆ ಒಂದು ಜತೆ ದುರ್ಬಿನು ಏಕೆ? ಈ ಜಾಗವೆಲ್ಲಾ ಸಮನಾದ ನೆಲಮಟ್ಟದ ಜಾಗ. ಸುತ್ತಮುತ್ತಲ ನೆಲಮಟ್ಟದಲ್ಲಿದ್ದ ಜಾಗ.

ಇನ್ನು ಕೇಂದ್ರದ ಪಾತ್ರದ ಬಗ್ಗೆ - ಇವೆಲ್ಲಾ ಕೇಂದ್ರದ ಗಮನಕ್ಕೆ ಬರಲೇ ಇಲ್ಲವೇ? ಡಿಸೆಂಬರ್ 1 ರಂದೇ ಕರಸೇವಕರು ಹೆಚ್ಚಿನವರು ಮಸೀದಿ ಕೆಡವಬೇಕೆಂದು ಬಯಸುತ್ತಾರೆ ಎಂದು ಗುಪ್ತಚಾರ ಸುದ್ದಿ ಕೇಂದ್ರಕ್ಕೆ ಹೋಗಿತ್ತು ಎಂದು ತಿಳಿದು ಬಂದಿದೆ. ಡಿಸೆಂಬರ್ 5ರ ಸಂಜೆ ಕೊನೆಯ ರಿಹರ್ಸಲ್‌ಗೆ ಸಿದ್ಧರಾಗಿ ಎಂದು ಸ್ವಯಂಸೇವಕರಿಗೆ ಧ್ವನಿವರ್ಧಕದ ಮೂಲಕ ಹೇಳಿರುವ ಸಂಗತಿಯಂತೂ ಗಮನಿಸಿಯೇ ಇರಬೇಕು. ಅಯೋಧ್ಯೆ ಮತ್ತು ಫೈಜಾಬಾದ್‌ನಲ್ಲಿದ್ದ ಗುಪ್ತಚರದಳದವರಂತೂ ಈ ರಿಹರ್ಸಲನ್ನು ಕಣ್ಣಾರೆ ನೋಡಿರಲೇಬೇಕು, ಆದರೂ ಕೇಂದ್ರ ಸರಕಾರ ನಿಷ್ಕ್ರಿಯವಾಗಿತ್ತು.

ಪೈಶಾಚಿಕ ಶಕ್ತಿಗಳ ನಗ್ನ ತಾಂಡವ

ಶರತ್‌ಚಂದ್ರ



ಡಿಸೆಂಬರ್ 1 ರಿಂದ ವಾರಣಾಸಿ ಹಾಗೂ ಮಥುರೆಯಿಂದ ಹೊರಟ ಅಡ್ವಾಣಿ, ಮುರಳೀ ಮನೋಹರ ಜೋಷಿಯವರ ಮಿನಿ ರಥಯಾತ್ರೆಗಳಲ್ಲಿ ಇವರಿಬ್ಬರು ನೀಡಿದ ಉದ್ರೇಕಕಾರಿ ಹೇಳಿಕೆಗಳು ಡಿಸೆಂಬರ್ 4 ರಂದು ಕೂಡ ವಿಹೆಚ್‌ಪಿ ಮುಖಂಡ ಅಶೋಕ್ ಸಿಂಘಾಲ್ ಸುಪ್ರಿಂ ಕೋರ್ಟ್‌ಗೆ ಉತ್ತರಪ್ರದೇಶದ ಸರಕಾರ 'ಕರಸೇವೆ ಸಾಂಕೇತಿಕ' ಎನ್ನುವ ಮುಚ್ಚಳಿಕೆ



ಮಸೀದಿ ಧ್ವಂಸ ನೋಡಿ ಖುಷಿಯಲ್ಲಿರುವ ಉಮಾ ಭಾರತಿ ಎಂ.ಎಂ.ಜೋಷಿ

ಕೊಟ್ಟಿದ್ದು ತಪ್ಪು ಎಂಬ ಹೇಳಿಕೆಯ ನಂತರ ಡಿಸೆಂಬರ್ 5 ರಂದು ಕರಸೇವಕರ ಕ್ಯಾಂಪುಗಳಿಗೆ ಹೋಗಿ ಈ ಪರ್ಯಾಯ ಯೋಜನೆಯಂತೆ ನಡೆಯಬೇಕು. 2.77 ಎಕರೆಯಲ್ಲಿ ಶಾಂತಿಯುತವಾಗಿ ಕರಸೇವೆ ನಡೆಸಬೇಕು ಎಂದು ಹೇಳಿದಾಗ ಸಿಟ್ಟಿಗೆದ್ದ ಕರಸೇವಕರು ಸಿಂಘಾಲ್ ರನ್ನು ಬಯ್ದರು. ಅವರ ಮೇಲೆ ಕೈ ಮಾಡಿದರು. ಆದರೂ '[illegible] ಕೆಡಹುವ ಯೋಜನೆ' ಸದ್ಯಕ್ಕೆ [illegible] ಕರಸೇವಕರನ್ನು ತಡೆಯಲು ಸಾಧ್ಯ ಎಂದು ಡಿಸೆಂಬರ್ 6ರ ಬೆಳಿಗ್ಗೆಯವರೆಗೂ ಆರ್.ಎಸ್.ಎಸ್. ಬಿಜೆಪಿ, ವಿಹೆಚ್‌ಪಿ ಮುಖಂಡತ್ವ ನಂಬಿತ್ತು ಎಂದು ಪತ್ರಕರ್ತರು ಹೇಳಿದ್ದಾರೆ. ಆದರೆ ಮೊದಲ ಕರಸೇವಕ ಮಸೀದಿಯ ಗುಮ್ಮಟ ಹತ್ತಿದ ಮೇಲೆ ಇನ್ನು ಕಲ್ಯಾಣ್‌ಸಿಂಗ್ ಸರಕಾರದ ವಜಾ ಖಂಡಿತಾ ಅಂದರೆ ಸಾಂಕೇತಿಕ ಕರಸೇವೆಯ ಈ ಪರ್ಯಾಯ ಯೋಜನೆಯನ್ನು ಕೈಬಿಟ್ಟು ಈ ಮುಖಂಡರೇ ಕರಸೇವಕರಿಗೆ ಎಲ್ಲಾ ಪ್ರೋತ್ಸಾಹ ನೀಡಿದರು. ಮಧ್ಯಾಹ್ನ 3.15ಕ್ಕೆ **ಸ್ವತಃ ಅಡ್ವಾಣಿಯವರು ಅಯೋಧ್ಯೆಯ ಎಲ್ಲಾ ಪ್ರವೇಶಮಾರ್ಗಗಳನ್ನು ಅಡ್ಡಗಟ್ಟಿ ಎಂದು ಧ್ವನಿವರ್ಧಕದ ಮೂಲಕ ಕರಸೇವಕರಿಗೆ ಕುಮ್ಮಕ್ಕು ನೀಡಿದರು** ಎಂದು 'ಫ್ರಂಟ್ ಲೈನ್' ವರದಿಗಾರರು ಹೇಳುತ್ತಾರೆ.

'ರಾಮಜನ್ಮಭೂಮಿನ್ಯಾಸ'ದ ಅಧ್ಯಕ್ಷ ರಾಮಚಂದ್ರಪರಮಹಂಸರವರು ಮೊದಲಿಗೆ ವಿವಾದಗ್ರಸ್ತ ಸ್ಥಳದೊಳಗಿನ ಸಿ.ಆರ್.ಪಿ.ಎಫ್. ಪಡೆಗಳ ಮೇಲೆ ಕಲ್ಲೆಸೆಯುವವರು, ಗುಮ್ಮಟದೊಳಗೆ ನುಗ್ಗಬಯಸುವವರು ಕಾಂಗ್ರೆಸ್ / ಮುಲಾಯಂ / ವಿ.ಪಿ.ಸಿಂಗ್/ ಮುಸ್ಲಿಂ ಲೀಗ್ ಏಜೆಂಟರು ಎಂದು ಕಿರುಚಿಕೊಳ್ಳುತ್ತಿದ್ದವರು ಒಂದು ಗುಮ್ಮಟ ಬಿದ್ದ ಮೇಲೆ "ಈ ಧೀರ ಕೃತ್ಯ" ಮಾಡಿದವರನ್ನು ಕೊಂಡಾಡಲು ಪ್ರಾರಂಭಿಸಿದರು. ಸಾಧ್ವಿ ರಿತಾಂಬರಾಳಂತೂ ಮಸೀದಿ ಧ್ವಂಸ ನಡೆಯುತ್ತಿದ್ದಾಗ "ಇನ್ನೊಂದು ಒದೆ ನೀಡಿ, ಬಾಬ್ರಿ ಮಸೀದಿ ಒಡೆದುಬಿಡಿ" ಎಂದು ಅರಚಿಕೊಳ್ಳುತ್ತಿದ್ದರು.

ಡಿಸೆಂಬರ್ 6 ರಂದು ಕರಾಳ ಭಾನುವಾರದ ನಂತರ ಅಭೂತಪೂರ್ವ ಹಿಂಸಾಚಾರ ಕಂಡ ದೊಡ್ಡ ನಗರ ಮುಂಬೈ. ಕೋಮುದಳ್ಳುರಿಯಲ್ಲಿ ಬೆಂದವರ ಕೆಲ ಚಿತ್ರಗಳು ಇಲ್ಲಿವೆ. ಬಿಜೆಪಿ, ಶಿವಸೇನೆಗಳ 'ಮಹಾ ಆರತಿ'ಗಳಿಂದ ಮತ್ತೊಮ್ಮೆ ಅದು ಭುಗಿಲೆದ್ದು ಟಾಟಾಗಳಂತವರೂ ಹೌಹಾರುವಂತೆ ಮಾಡಿದ ಹಿಂಸಾಚಾರಕ್ಕಿಂತ ಮೊದಲಿನ ಚಿತ್ರಗಳಿವು.


ಡಿಸೆಂಬರ್ 6ರವರೆಗೂ ಅದು ಒಂದು ಟೈಲರಿಂಗ್ ಅಂಗಡಿ. ಈಗ ಅದೊಂದು ಮಣ್ಣು, ಇಟ್ಟಿಗೆಗಳ ರಾಶಿ. 62 ವರ್ಷದ ಖಾದರ್ ಬಾಯಿಯ ಅಂಗಡಿಯಿದು. ಕಳೆದ 40 ವರ್ಷಗಳಲ್ಲಿ ಈ ಕೇರಿಯಲ್ಲಿ ಕೋಮು ದಂಗೆಗಳಾಗಿರಲಿಲ್ಲ ಎನ್ನುತ್ತಾರೆ. ಈಗ ಅಯೋಧ್ಯೆಯಲ್ಲಿ ಬಾಬ್ರಿ ಮಸೀದಿ ನೆಲಸಮವಾದ ನಂತರ ಎರಡೇ ದಿನಗಳಲ್ಲಿ ಅದೊಂದು ರಣರಂಗವಾಯಿತು. ಇದುವರೆಗೆ ಕೋಮು ಸಾಮರಸ್ಯ ಹೊಂದಿದ್ದ ಮುಂಬೈಯ ಅತಿ ದೊಡ್ಡ ಗುಡಿಸಲು ಪ್ರದೇಶದ ಪರಿಸ್ಥಿತಿಯಿದು.

ಅಕ್ಕ ಅಕ್ಕ ಎನ್ನುತ್ತಿದ್ದವರು..

ಖಾದರ್ ಭಾಯಿಯ ಕೇರಿಯ ಪಕ್ಕದಲ್ಲೇ ಇದೆ ಮಹಾತ್ಮಾಗಾಂಧಿ ನಗರ. "ನನ್ನನ್ನು ವರ್ಷಗಳಿಂದ ಅಕ್ಕ ಅಕ್ಕ ಎನ್ನುತ್ತಿದ್ದವರೇ ನಮ್ಮ ಮನೆಯ ಎದುರು ಬಾಗಿಲು ಒಡೆದು ನಮ್ಮ ಸ್ಕೂಟರ್ ಧ್ವಂಸ ಮಾಡಿದರು" ಎನ್ನುತ್ತಾಳೆ ಕೃಷ್ಣಾ ಗಣಪತಿ. **ಡಿಸೆಂಬರ್ 6 ರಂದು ಪರಿಸ್ಥಿತಿ ಗಂಭೀರವಾಗಿದ್ದರೂ ಶಾಂತವಾಗಿತ್ತು. ಆದರೆ ಸ್ಥಳೀಯ ಶಿವಸೇನೆಯ ಮುಂದಿಗೆ ಬಾಬ್ರಿ ಮಸೀದಿ ಕೆಡವಿದ 'ವಿಜಯೋತ್ಸವ' ಆಚರಿಸಲು ಧಾರಾವಿ ಪೋಲೀಸರು ಅನುಮತಿ ನೀಡಿದರು.** ಒಂದು ದೊಡ್ಡ 'ವಿಜಯೋತ್ಸವ' ನಡೆಯಿತು. ಕೇವಲ ಮೆರವಣಿಗೆಯಲ್ಲ ಅತ್ಯಂತ ಉದ್ರೇಕಕಾರಿ ಘೋಷಣೆಗಳನ್ನು ಅಲ್ಪಸಂಖ್ಯಾತರತ್ತ ಗುರಿಮಾಡಿದ, ತಮ್ಮ ಗಾಯಕ್ಕೆ ಬರೆ ಎಳೆದ ಮೆರವಣಿಗೆ ಇದು ಎನ್ನುತ್ತಾರೆ ಸ್ಥಳೀಯ ಮಸೀದಿಯ ಇಮಾಂ ಝುಬೇರ್ ಅಹ್ಮದ್. 'ನಾವೇನು ತಪ್ಪು ಮಾಡಿದ್ದೇವೆ? ಎಂದು ಕೇಳುತ್ತಾನೆ. ಆತ ಎರಡೂ ಕಡೆಯ ಕೋಮುವಾದಿಗಳ ಕುಮ್ಮಕ್ಕಿನಿಂದ ಪರಸ್ಪರ ಹಲ್ಲೆಗಳಿಗೆ ಬಲಿಯಾದವರು, ಎರಡೂ ಕಡೆಯ ಸಾಮಾನ್ಯ ಗುಡಿಸಲುವಾಸಿಗಳು. "ಯಾರೇ ನನ್ನ ಹೋಟೆಲನ್ನು ನಾಶ ಮಾಡಿರಲಿ, ನನಗೆ ನನ್ನ ಜೀವನಾಧಾರ ವಾಪಾಸು ಕೊಡಿ" ಎಂದು ಗೋಗರೆಯುತ್ತಿದ್ದಾಳೆ ಎರಡು ಮಕ್ಕಳನ್ನು ಸಾಕಬೇಕಾದ ವಿಧವೆ ಮುತ್ತಮ್ಮಾಳ್ ಮೊದಲಿಯಾರ್.

"ಯಾವ ಗಲಾಟೆಯಲ್ಲೂ ಇರಲಿಲ್ಲ"


ಶುಭಾಳ ಗಂಡ ಭರತ್ ಯಾದವ್ ಮುಂಬೈಯ ಸಾರಿಗೆ ಸಂಸ್ಥೆ 'ಬೆಸ್ಟ್' ನಲ್ಲಿ ವೈರ್‌ಮನ್ ಆಗಿದ್ದ. ಆ ದಿನ ಮನೆಗೆ ಮರುಳುವಾಗ ಪೋಲೀಸ್ ಗುಂಡು ಆತನ ತಲೆ, ಎದೆ ಹೊಕ್ಕಿತು. ಬಹಳ ಹೊತ್ತಾದರೂ ಬರದ ಗಂಡನನ್ನು ಗಲಭೆಗಳ ನಡುವೆಯೂ ಹುಡುಕಿಹೊರಟ ಶುಭಾಳಿಗೆ ಒಂದು ಕೈಗಾಡಿಯ ಮೇಲೆ ಬಿದ್ದ ಭರತ್‌ನ ಹೆಣ ಕಂಡಿತು. ಆದರೆ ಪೋಲೀಸರು ಶವವನ್ನು ಅವಳಿಗೆ ಒಪ್ಪಿಸಲು ನಿರಾಕರಿಸಿದರು. ಎರಡು ದಿನಗಳ ನಂತರ ಜೆ.ಜೆ. ಹಾಸ್ಪಿಟಲ್‌ನಿಂದ ಹೂಪರ್ ಆಸ್ಪತ್ರೆಗೆ ಓಡಾಡಿಸಿದ ನಂತರವೇ ಗಂಡನ ಶವ ದೊರೆಯಿತು. ಆತ ಇಂತಹ ಯಾವ ಗಲಾಟೆಯಲ್ಲೂ ಸೇರುತ್ತಿರಲಿಲ್ಲ. ಮುಂದೇನು ಎಂದು ಅರಿಯದ ಶುಭಾ ಬಿಕ್ಕಳಿಸಿ ಅಳುತ್ತಾಳೆ.



ದೇಶದ ಬೀದಿಬೀದಿಗಳಲ್ಲಿ ಉರುಳಿದ ಹೆಣಗಳು

ಮಾನವೀಯ ಗುಣಗಳು

ಆ ರಕ್ತದೋಕುಳಿಯ, ಕೋಮು ದಳ್ಳುರಿಯ ನಡುವೆಯೂ ಮಾನವೀಯ ಗುಣಗಳಿಗೆ ಬರವಿರಲಿಲ್ಲ ಎಂಬುದೊಂದು ತುಸು ಸಮಾಧಾನದ ಸಂಗತಿ. ಅಖ್ತರುನ್ನೀಸಾ ಮತ್ತು ಆಕೆಯ ಗಂಡ ಅಝೀಮುಲ್ಲಾ ಶೇಖ್‌ರನ್ನು ಅವರ ಹಿಂದೂ ನೆರೆಕೆರೆಯವರು ಕಾಪಾಡಿದರು. ಮಲ ಮೂತ್ರ ವಿಸರ್ಜನೆಗೆ ಹೋಗುವಾಗಲೂ ತಮಗೆ ಕಾವಲಿರುತ್ತಿದ್ದರು ಎಂದು ಈ ಮುಸಲ್ಮಾನ ದಂಪತಿಗಳು ನೆನೆಸಿಕೊಳ್ಳುತ್ತಾರೆ. ಗಂಗೂಬಾಯಿ



ಮತ್ತು ಆಕೆಯ ಗಂಡ ನಿವೃತ್ತಿ ಖಿದೆ ಕೂಡಾ ತಮ್ಮ ನೆರೆಯವರಾದ ಟೈಲರ್ ಮಹ್ಮದ್ ಸಗ್ರಿ ಹಾಗೂ ಅವರ ಕುಟುಂಬದವರಿಂದ ರಕ್ಷಣೆ ತಮಗಿದೆ ಎನ್ನುತ್ತಾರೆ.

ಪೊಲೀಸರ ಗುಂಡು ಗಲಭೆಕೋರರನ್ನು ನಿಯಂತ್ರಿಸಲು ಅಲ್ಲ

ಮುಂಬೈಯ ಮೌಲಾನಾ ಶೌಕತ್ ಆಲಿ ರಸ್ತೆ, ಡಿಸೆಂಬರ್ 7ರ ಮಧ್ಯಾಹ್ನ ಊಟಕ್ಕೆ ಕೂರುವ ಮೊದಲು ದೂರದರ್ಶನದ 2.00 ಗಂಟೆಯ ಸುದ್ದಿ ಕೇಳುತ್ತಿದ್ದ 22 ವರ್ಷದ ನಸೀಮಾ ಅಯೂಬ್ ಖಾನ್. ಎಂದೂ ರಾಜಕೀಯದ ಬಗ್ಗೆ ಟೀಕೆ ಟಿಪ್ಪಣಿ ಮಾಡದ ನಸೀಮಾ ಬಾಯಿಂದ ಬಂತು "ಮಸೀದಿಯನ್ನು ಮತ್ತೆ ಕಟ್ಟುತ್ತೇನೆ ಎನ್ನುವವರು ಮೊದಲಿಗೆ ಅದನ್ನು ಕೆಡವಲು ಏಕೆ ಬಿಟ್ಟರು". ಆದರೆ ಸಾವಿರಾರು ಮೈಲಿ ದೂರದ ಆ ಧ್ವಂಸ ಕಾರ್ಯ ಮೂವತ್ತು ನಿಮಿಷಗಳಲ್ಲೇ ಈ ನಸೀಮಾಳ ಜೀವವನ್ನು ಬಲಿ ತೆಗೆದುಕೊಂಡಿತ್ತು. ಸುದ್ದಿ ಕೇಳಿ ಊಟಕ್ಕೆ ಕೂರುವ ಮೊದಲು ತನ್ನ ಅತ್ತೆಗೆ ಟವೆಲ್ ತರಲು ಬಾಲ್ಕನಿಗೆ ಹೋಗಿ ಒಣಗಲು ಹಾಕಿದ ಬಟ್ಟೆಗಳ ಕ್ಲಿಪ್ ತೆಗೆಯುತ್ತಿದ್ದಂತೆ ಸುಯ್ಯೆಂದು ಗುಂಡೊಂದು ಅವಳ ತಲೆಯನ್ನು ಸೀಳಿಕೊಂಡು ಹೋಯಿತು. ವಿಲವಿಲ ಒದ್ದಾಡಿ ಅಸು ನೀಗಿದಳು 22 ವರ್ಷದ ನಸೀಮಾ. ಅವಳು ಪೊಲೀಸ್ ಗೋಳಿಬಾರು ನೋಡಲೂ ಕೂಡಾ ಹೋದವಳಲ್ಲ. ಕೇವಲ ಒಣಗಿದ ಟವೆಲ್ ತರಲು ಹೋದವಳು. ಸ್ವಲ್ಪ ಬಗ್ಗಿದ್ದರೂ ಆಕೆ ಉಳಿಯುತ್ತಿದ್ದಳು ಎಂದು ಹಲುಬುತ್ತಾಳೆ ಆಕೆಯ ಅತ್ತಿಗೆ.

ಮುಂಬೈ ನಗರದ ಇನ್ನೊಂದು ರಸ್ತೆ ಖಾಂಡಿಯಾ ಸ್ಟ್ರೀಟ್. ಸಮೀನಾ ಬಾನು ಕಣ್ಣೀರೇ ಇಂಗಿಹೋದಂತೆ ಶೂನ್ಯದತ್ತ ದಿಟ್ಟಿಸುತ್ತಿದ್ದಾಳೆ.

ಆಕೆಯ 18 ವರ್ಷದ ಕಾಲೇಜಿಗೆ ಹೋಗುವ ಕಿರಿಯ ಮಗ ಝೂಹೆದ್ ಹುಸೇನ್ ಪೊಲೀಸ್ ಗೋಳೀಬಾರು ಮಾಡುತ್ತಿದ್ದುದು ಗಲಭೆಯೆಬ್ಬಿಸುತ್ತಿದ್ದ ಜನ ಜಂಗುಳಿಯನ್ನು ಹತೋಟಿಯಲ್ಲಿಡಲು ಅಲ್ಲ, ದೂರದಲ್ಲಿ ನಿಂತು ನೋಡುತ್ತಿರುವವರನ್ನು ಕೊಲ್ಲಲು" ಎನ್ನುತ್ತಾನೆ ಅವರ ಅಣ್ಣ ಪರ್ವೇಝ್ ಖಾನ್. "ಸಲ್ಮಾನ್ ರಶ್ದಿಯ ಪುಸ್ತಕಕ್ಕೆ ಸಂಬಂಧಪಟ್ಟಂತೆ ನಡೆದ ಗಲಾಟೆಯ ಸಮಯದಲ್ಲಿ ನಾವು ಮುಸಲ್ಮಾನರು ಭಾರಿ ನಾಜೂಕು ಸ್ಥಿತಿಯಲ್ಲಿದ್ದೇವೆ ಎಂದು ನನಗೆ ತಿಳಿಯಿತು. ಆದ್ದರಿಂದ ಏನೇ ಬರಲಿ. ಹಿಂಸಾಚಾರಕ್ಕೆ ಹೋಗಬೇಡ ಎಂದು ಝೂಹೇದ್‌ಗೆ ಪ್ರತಿ ದಿನ ಹೇಳುತ್ತಿದ್ದೆ. ನಾನೊಬ್ಬ ಸಾಮಾನ್ಯ ಬ್ಯಾಂಕ್ ಗುಮಾಸ್ತ. ಆದರೆ ನನಗೀಗ ಅನಿಸುತ್ತೆ ನಾನು ಲೂಟಿ ಮಾಡಿ ಬೆಂಕಿ ಹಚ್ಚಿ ನನ್ನ ತಮ್ಮನ ಸಾವಿನ ಸೇಡು ತೀರಿಸಬಲ್ಲೆ" ಎಂದು. ತಾಯಿ ಶಮೀನಾ ಬಾನು ಮೆಲ್ಲನೆ ತನ್ನಷ್ಟಕ್ಕೆ ಹೇಳುತ್ತಿದ್ದಾಳೆ "ಎಲ್ಲಾ ಅಲ್ಲಾನ ಇಚ್ಛೆ".


ಮುಂಬೈಯ ಮತ್ತೊಂದು ಬಸ್ತಿ ಕುಮ್ಹಾರ್ (ಕುಂಬಾರ)ವಾಡಾರ 4ನೇ ಕೇರಿ. ಹಿಂದೂ ಮುಸಲ್ಮಾನರು ಪಕ್ಕಪಕ್ಕದಲ್ಲೇ ವಾಸಿಸುವ ಸ್ಥಳ. ಡಿಸೆಂಬರ್ 9 ರವರೆಗೂ ಏನೂ ಇರಲಿಲ್ಲ. ಆದರೆ ಆ ದಿನ ಪಕ್ಕದ ದುರ್ಗಾ ದೇವಿ ಮುನಿಸಿಪಲ್ ಶಾಲೆಯ ಛಾವಣಿಯಿಂದ ಖಾಸಿಮ್ ಬಿಲ್ಡಿಂಗ್‌ನ ಮೇಲೆ ಸತತವಾಗಿ ಕಲ್ಲು ಬಾಟಲಿಗಳು, ಟ್ಯೂಬ್ ಲೈಟ್ ಚೂರುಗಳ ಸುರಿಮಳೆ. ಇದನ್ನು ತಾಳಲಾರದೆ ಹಲವು ಕುಟುಂಬಗಳು ಅಲ್ಲಿಂದ ಓಡಿ ಹೋಗಿ ಮಟನ್ ಸ್ಟ್ರೀಟ್‌ನಲ್ಲಿರುವ ಜಮಾತ್ ಖಾನಾದಲ್ಲಿ ಶರಣು ಪಡೆದರು. ಪೋಲೀಸರು ಆ ಗೂಂಡಾ ಜನಗಳಿಗೆ ಶಾಲೆಯ ಛಾವಣಿಯೇರಲು ಅವಕಾಶ ಮಾಡಿಕೊಟ್ಟರು ಎನ್ನುತ್ತಾಳೆ ಪುಟ್ಟ ಕೂಸನ್ನು ಹಿಡಿದಿದ್ದ ಝುಬೇದಾ. ತಾಮ್ರದ ತಂತಿಯ ಕೇಬಲ್‌ಗಳಿಗೆ ರಬ್ಬರ್ ವಯರ್ ಸುತ್ತಿ ಅದಕ್ಕೆ ಬೆಂಕಿ ಹಚ್ಚಿ ಈ ಗೂಂಡಾಗಳು ಎಸೆಯುತ್ತಿದ್ದಾಗ ಅವರನ್ನು ತಡೆಯಿರಿ ಎಂದು ಪೊಲೀಸರನ್ನು ವಿನಂತಿಸಿಕೊಂಡರೆ ತಂಬಾಕು ಜಗಿಯುತ್ತಾ ಪೊಲೀಸನವರು ಕೊಟ್ಟ ಉತ್ತರ ನಮಗೆ ಗೋಳೀಬಾರ್ ಮಾಡಲು ಆರ್ಡರ್ ಇಲ್ಲ.

ಆ ಜನಜಂಗುಳಿಯಲ್ಲಿ ಮುಸಲ್ಮಾನರಿರಬಹುದು. ಆದರೆ ನಮ್ಮ ಮೊಹಲ್ಲಾರವರು ಯಾರೂ ಇರಲಿಲ್ಲ. ಆದರೆ ಪೋಲೀಸರು ಕೊನೆಗೂ ಬಂದೂಕು ಎತ್ತಿಕೊಂಡಾಗ ಅವರು ನುಗ್ಗಿದ್ದು ನಮ್ಮ ಮನೆಗಳಿಗೇ. ನಮ್ಮ ಹೆಂಗಸರ ಕುತ್ತಿಗೆಗೆ ಬಂದೂಕಿನ ನಳಿಗೆಗಳನ್ನು ಇಟ್ಟು ನೀವು ಗೂಂಡಾಗಳಿಗೆ ಆಶ್ರಯ ನೀಡಿದ್ದೀರಿ' ಎಂದು ಹೆದರಿಸಿದರು" ಎನ್ನುತ್ತಾನೆ ತಲೆಯಲ್ಲಿ ದೊಡ್ಡ ಗಾಯವಾದುದರಿಂದ ಅಂಗಾತ ಮಲಗಿದ್ದ ಒಬ್ಬ ವ್ಯಕ್ತಿ.

ಈ ಖಾಸಿಂ ಬಿಲ್ಡಿಂಗ್ ಈಗ ದೆವ್ವದ ಮನೆಯೇ. ಎಲ್ಲಾ ಮನೆಗಳಿಗೂ ಬೀಗ. ಮೇಲಿನ ಮಹಡಿಯಲ್ಲಿ ಒಂದು ಮನೆ ಮಾತ್ರ ತೆರೆದಿದೆ. 70 ವರ್ಷದ ನೂರ್ ಜಹಾಂ ಆ ಜಾಗ ಬಿಡುವಂತಿಲ್ಲ. ಏಕೆಂದರೆ ಆಕೆಯ ಗಂಡ ಹೃದಯ ರೋಗದಿಂದ ಹಾಸಿಗೆ ಹಿಡಿದಿದ್ದಾನೆ. ಆತನನ್ನು ಎತ್ತಿಕೊಂಡು ಹೋಗುವಂತಿಲ್ಲ. "ಇಂತಹುದೊಂದು ದಂಗೆಯನ್ನು ನಾನು ನೋಡೇ ಇಲ್ಲ" ಎನ್ನುತ್ತಾಳೆ 70 ವರ್ಷದ ನೂರ್ ಜಹಾಂ.

'ವಿಜಯೋತ್ಸವ ಆಚರಿಸುವ ಶಾವಿಪಡೆಗಳೇ, ಮುಂಬೈನ ನಿವಾಸ್ಸೈನಿಕರೇ ನೀವು ದನ್ನರು!'


(ಆಧಾರ ಟೈಮ್ಸ್ ಆಫ್ ಇಂಡಿಯಾದಲ್ಲಿ ಪ್ರಕಟವಾದ ಲೇಖನಗಳು)



ದೇಶದ ಇತ್ತೀಚಿನ ಇತಿಹಾಸದಲ್ಲಿ ಪ್ರಮುಖ ನಕಾರಾತ್ಮಕ ತಿರುವು ತಂದದ್ದು - ಡಿಸೆಂಬರ್ 5,6 1992 ರಂದು ಅಯೋಧ್ಯೆಯಲ್ಲಿ ಬಾಬ್ರಿ ಮಸೀದಿಯನ್ನು ಸಂಘ ಪರಿವಾರ ಕೆಡವಿದ ಘಟನೆ. ಆ ಅಯೋಧ್ಯಾಕಾಂಡದ ಹತ್ತು ವರ್ಷಗಳಲ್ಲಿ ಏನಾಗಿದೆ? ಈ ಹತ್ತು ವರ್ಷಗಳು ಒಟ್ಟಾರೆಯಾಗಿ ನಕಾರಾತ್ಮಕವಾದದ್ದು ಎಂಬುದರ ಬಗ್ಗೆ ಏನೂ ಅನುಮಾನವಿಲ್ಲ. ಹರಿಕಿಶನ್ ಸಿಂಗ್ ಸುರ್ಜಿತ್ ಸಿಪಿಐ(ಎಂ) ಈ ಹತ್ತು ವರ್ಷಗಳನ್ನು ಹೇಗೆ ನೋಡುತ್ತದೆ ಎಂದು ವಿವರಿಸಿದ್ದಾರೆ. ದೇಶದ ಪತ್ರಿಕೆಗಳು, ಪ್ರಮುಖರು ಈ ಹತ್ತುವರ್ಷಗಳನ್ನು ಯಾವ ರೀತಿ ನೋಡುತ್ತಾರೆ? ಅಯೋಧ್ಯಾ ವಿವಾದಕ್ಕೆ ಪರಿಹಾರ ಹುಡುಕುವುದು ಎಲ್ಲಿವರೆಗೆ ಬಂದಿದೆ? ದೇಶದ ರಾಜಕೀಯ - ಸಂಸ್ಕೃತಿಯ ಕೋಮುವಾದೀಕರಣ ಎಷ್ಟು ಹೇಗೆ ಬೆಳೆದಿದೆ? ಅಯೋಧ್ಯಾಕಾಂಡ ಮತ್ತು ಆ ಮೇಲಿನ ಮುಂಬಯಿ ಗಲಭೆಗಳು, ಗುಜರಾತ್ ಹತ್ಯಾಕಾಂಡ - ಕೋಮು ಹಿಂಸಾಚಾರದಲ್ಲಿ ತಪ್ಪಿತಸ್ಥರಿಗೆ ಶಿಕ್ಷಿಸುವುದರಲ್ಲಿ ಏನು ಪ್ರಗತಿ ಆಗಿದೆ? ಗುಜರಾತ್ ಹತ್ಯಾಕಾಂಡ ತೋರಿಸಿದಂತೆ ಈ ಕೋಮುವಾದಿ ಕ್ಯಾನ್ಸರ್‌ನಿಂದ ನಮ್ಮ ದೇಶಕ್ಕೆ ಮುಕ್ತಿ ಇಲ್ಲವೇ? ಈ ಬಗ್ಗೆ ಎಚ್ಚರದಿಂದ ಆಲಿಸಬೇಕಾದ ಹಲವು ದನಿಗಳು ಇಲ್ಲಿವೆ.

ಅಯೋಧ್ಯಾಕಾಂಡದಿಂದ ಗುಜರಾತ್ ಹತ್ಯಾಕಾಂಡದವರೆಗೆ ಕೋಮುವಾದದ ಪಯಣ - ರಕ್ತಸಿಕ್ತ ಮೈಲುಗಲ್ಲು

ಅಯೋಧ್ಯಾಕಾಂಡದ ನಂತರದ ಹತ್ತು ವರ್ಷಗಳು ನಮ್ಮ ದೇಶದಲ್ಲಿ ಮೂಲೆಯಲ್ಲಿ ಬಿದ್ದಿದ್ದ ಕೋಮುವಾದಿ ಶಕ್ತಿಗಳು ದೇಶದ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಜೀವನದ ಕೇಂದ್ರ ಭಾಗವನ್ನು ಆಕ್ರಮಿಸಿಕೊಂಡಿದೆ. ಕಳೆದ ಹತ್ತು ವರ್ಷಗಳು ಕೋಮುವಾದಿಗಳು ನಮ್ಮ ಜೀವನದ ಹಲವು ಕ್ಷೇತ್ರಗಳನ್ನು ಕೇಸರೀಕರಿಸುವುದರಲ್ಲಿ ಯಶಸ್ವಿಯಾಗಿದ್ದಾರೆ. ಅಯೋಧ್ಯಾಕಾಂಡ ಹರಿಯಬಿಟ್ಟ ದೇಶವ್ಯಾಪಿ ಕೋಮುವಾದಿ ಹತ್ಯಾಕಾಂಡ; ಕುಖ್ಯಾತ ಮುಂಬಯಿ ಹತ್ಯಾಕಾಂಡ; ಮುಂಬಯಿಯ ಸರಣಿ ಬಾಂಬ್ ಸ್ಫೋಟ, ನಂತರದ ಎರಡನೇ ಹಂತದ ಮುಂಬಯಿ ಹತ್ಯಾಕಾಂಡ; ದೇಶದಾದ್ಯಂತ ಚರ್ಚುಗಳ ಮೇಲೆ ದಾಳಿ; ಮಧ್ಯ ಪ್ರದೇಶದಲ್ಲಿ ಕ್ರೈಸ್ತ ಸನ್ಯಾಸಿನಿಯರ ಮಾನಭಂಗ, ಒರಿಸ್ಸಾದಲ್ಲಿ ಕ್ರೈಸ್ತ ಪಾದ್ರಿ ಆತನ ಮಕ್ಕಳ ಸಜೀವ ದಹನ; ಎಂ.ಎಫ್.ಹುಸೇನರ ಚಿತ್ರ ಪ್ರದರ್ಶನದ ಮೇಲೆ ಧಾಳಿ, ಚಿತ್ರಗಳ ನಾಶ; ಪಾಕಿಸ್ತಾನಿ ಗಜಲ್ ಗಾಯಕ ಮೆಹದಿ ಹಸನ್ ಗಾನಗೋಷ್ಠಿ ಆಗಗೊಡದ್ದು; ದೀಪಾ ಮೆಹ್ತಾರ 'ಫೈರ್' ಫಿಲಂ ದಾಂಧಲೆಗಳಿಂದ ಪ್ರತಿಬಂಧಿಸಿದ್ದು; ದೀಪಾ ಮೆಹ್ತಾರ 'ವಾಟರ್' (ವಾರಣಾಸಿಯ ವಿಧವೆಯರ ಬಗೆಗಿನ ಚಿತ್ರ) ತಯಾರಿಸದಂತೆ ಪ್ರತಿಬಂಧಿಸಿದ್ದು ; ಭಾರತ-ಪಾಕಿಸ್ತಾನ ಕ್ರಿಕೆಟ್ ಮ್ಯಾಚ್‌ಗಳನ್ನು ದಾಂಧಲೆಗಳಿಂದ ಪ್ರತಿಬಂಧಿಸಿದ್ದು; ಚರಿತ್ರೆಯ ಪಠ್ಯ ಪುಸ್ತಕಗಳ ಕೇಸರೀಕರಣ, ಧಾರ್ಮಿಕ ಶಿಕ್ಷಣ, ಜ್ಯೋತಿಷ್ಯ ಶಾಸ್ತ್ರ ಸೇರಿಸುವ ಮೂಲಕ ಹಲವು ಆಯಾಮಗಳ ಶಿಕ್ಷಣದ ಕೇಸರೀಕರಣ; ಆಗಾಗ ಬಲಪ್ರಯೋಗ-ಆಮಿಷಗಳಿಂದ ಮತಾಂತರದ ವಿರುದ್ಧ ಕೂಗು; ಮತಾಂತರಗೊಂಡವರನ್ನು ಪುನಃ ಹಿಂದೂ ಧರ್ಮಕ್ಕೆ ಸೇರಿಸುವ 'ಶುದ್ಧಿ' ಚಳುವಳಿ; ಮುಸ್ಲಿಂ ಶಿಕ್ಷಣ ಸಂಸ್ಥೆಗಳೆಲ್ಲಾ ಪಾಕಿಸ್ತಾನಿ ಗೂಢಚಾರ ಮತ್ತು ಭಯೋತ್ಪಾದನೆಯ ಕೇಂದ್ರಗಳು ಎಂಬ ಪ್ರಚಾರ; ಈಶಾನ್ಯ ರಾಜ್ಯಗಳಲ್ಲಿರುವ ಮುಸ್ಲಿಮರ ವಿರುದ್ಧ ಅವರು ಬಾಂಗ್ಲಾದೇಶದಿಂದ ಕಾನೂನು ಬಾಹಿರವಾಗಿ ವಲಸೆ ಬಂದ ವಿದೇಶಿಯರು ಎಂಬ ಅಪಪ್ರಚಾರ; ಎಲ್ಲೆಡೆಮುಸ್ಲಿಮರ ಒಂದು ವಿಭಾಗ ಬಾಂಗ್ಲಾದೇಶದ ವಿದೇಶಿಯರು, ಅವರನ್ನು ಹೊರದೂಡಬೇಕು ಎನ್ನುವ ಚಳುವಳಿ; ಅಯೋಧ್ಯೆಯಲ್ಲಿ ರಾಮಮಂದಿರ ಕಟ್ಟಲು ಎಲ್ಲಾ ಭಾಗಗಳ ಗುಪ್ತ ತಯಾರಿ ಸತತವಾಗಿ ನಡೆಯುತ್ತಿರುವುದು; ಚುನಾವಣೆ ಸಮಯದಲ್ಲೆಲ್ಲಾ ಅಯೋಧ್ಯೆಯಲ್ಲಿ ಕಾನೂನು - ಉಲ್ಲಂಘಿಸಿ ಬಲಪ್ರಯೋಗದಿಂದ ದೇವಸ್ಥಾನ ಕಟ್ಟುವ ಮಾತನಾಡಿ ಕೋಮುದ್ವೇಷ ವಾತಾವರಣ ತಯಾರಿಸುವುದು; ಗೋಧ್ರಾ ಘಟನೆ ನೆಪ ಮಾಡಿಕೊಂಡು ಗುಜರಾತ್‌ನಲ್ಲಿ ವ್ಯಾಪಕ ಹತ್ಯಾಕಾಂಡ; ಹತ್ಯಾಕಾಂಡದಲ್ಲಿ ಸರ್ಕಾರದ ಅಧಿಕಾರಗಳು, ಮಂತ್ರಿಗಳು, ಪೋಲೀಸರ ಪಾತ್ರ ; ಇವು ಈ ದಶಕದ ಕೋಮುವಾದೀಕರಣ ನಡೆದು ಬಂದ ಹಾದಿಯ ರಕ್ತಸಿಕ್ತ ಮೈಲಿಗಲ್ಲುಗಳು.




ಬಿಜೆಪಿ - ರಾಜ್ಯಗಳಲ್ಲೂ, ಕೇಂದ್ರದಲ್ಲೂ ಸತತವಾಗಿ ಸೀಟುಗಳನ್ನು ಕಳೆದುಕೊಳ್ಳುತ್ತಿದ್ದರೂ ಅವಕಾಶವಾದಿ ಕೂಟಗಳು, ಕೆಲವು ಪಕ್ಷಗಳ ಸಮಯಸಾಧಕತನದಿಂದ ಕೇಂದ್ರದಲ್ಲಿ ಮುಂದುವರೆದಿದೆ.ಅಯೋಧ್ಯೆ ವಿವಾದದ ರಾಜಕೀಯ ಲಾಭ ಕುಸಿಯುತ್ತಿದ್ದರೂ, ಆಗಾಗ ಬಿಜೆಪಿ ಬೇರೆ ಯಾವುದೇ 'ಜನಮರಳು' ಮಾಡುವ ವಿಧಾನ ಸಿಗದೆ ಅದಕ್ಕೆ ಶರಣು ಹೋಗುತ್ತಿದೆ. ಕನಿಷ್ಠ ಅದು ಭೀಕರಗೊಂಡಿರುವ ಆರ್ಥಿಕ ಬಿಕ್ಕಟ್ಟಿನಿಂದ ಜನರ ಗಮನ ಬೇರೆಡೆಗೆ ಸೆಳೆಯುವ ಆಯುಧವಾಗಿ ಬಳಕೆಯಾಗುತ್ತದೆ. ಇದೇಹತ್ತು ವರ್ಷಗಳಲ್ಲಿ ಜನರ ಜೀವನಮಟ್ಟ ಆರ್ಥಿಕ ಸ್ಥಿತಿ ಮೇಲೆ ತೀವ್ರದಾಳಿ ನಡೆದಿದೆ-ಎಂಬುದು ಆಕಸ್ಮಿಕವೂ ಅಲ್ಲ. ಕಾಕತಾಳೀಯವೂ ಅಲ್ಲ. ಇವೆರಡೂ ಆಳುವವರ್ಗಗಳ ರಣನೀತಿಯ ಅವಿಭಾಜ್ಯ ಅಂಗ. ಬಾಬ್ರಿ ಮಸೀದಿಯ ನಾಶ ಒಂದು ಸಾಂಕೇತಿಕ ಕ್ರಿಯೆ. ಅಲ್ಲಿಂದ ಸಂಘ ಪರಿವಾರ ನಮ್ಮ ದೇಶದ ಜನತೆ ಕಾಪಾಡಿಕೊಂಡು ಬಂದಿದ್ದ ನಂಬಿಕೊಂಡು ಸಕಾರಾತ್ಮಕ ಮೌಲ್ಯಗಳನ್ನೆಲ್ಲಾ ನಾಶ ಮಾಡುವ ಕಾರ್ಯ ಅವ್ಯಹತವಾಗಿ ನಡೆದಿದೆ. ಬಾಬ್ರಿ ಮಸೀದಿ ಆರಂಭಿಸಿದ್ದ ವಿನಾಶ ಕ್ರಿಯೆ - ಜಾತ್ಯಾತೀತತೆಯನ್ನು ನಾಶ ಮಾಡಿದ್ದು ಮಾತ್ರವಲ್ಲ, ಸ್ವಾಯತ್ತ ಸ್ವತಂತ್ರ ಬೆಳವಣಿಗೆ, ಸಮಾನತೆ ಆಧಾರಿತ ಸಮಾಜ ನಿರ್ಮಾಣ, ಜಾಗತಿಕವಾಗಿ ಸ್ವತಂತ್ರ ವಿದೇಶಾಂಗ ನೀತಿ - ಇವೆಲ್ಲಾ 'ಕರಸೇವಕರ' ಸುತ್ತಿಗೆ, ಪಿಕಾಸಿ,ಹಾರೆಗಳ ಆಘಾತಕ್ಕೆ ಒಳಗಾಗಿವೆ.


2001 ಸೆಪ್ಟೆಂಬರ್11 ರ ವಿಶ್ವ ವಾಣಿಜ್ಯ ಕೇಂದ್ರದ ಮೇಲೆ ಭಯೋತ್ಪಾದಕರ ದಾಳಿಯ ನಂತರ ಕೋಮುವಾದ ಹೊಸ ಅವತಾರಗಳನ್ನು ತಾಳಿದೆ. ಅದು ಬುಶ್‌ರ ಘೋಷಣೆಗಳನ್ನು ತನ್ನದಾಗಿಸಿಕೊಂಡಿದೆ. ತನ್ನ ದೇಶ ನಾಶದ ಕೆಲಸಗಳನ್ನು ಭಯೋತ್ಪಾದನೆ ವಿರುದ್ಧ ರಾಷ್ಟ್ರೀಯಭದ್ರತೆಗಾಗಿ ಸಮರ ಎಂದು ಹೇಳಲು ಆರಂಭಿಸಿದೆ. ತನ್ನ ಮುಸ್ಲಿಮ್-ವಿರೋಧಿ, ಜನವಿರೋಧಿ ನೀತಿಗಳಿಗೆ ಭಯೋತ್ಪಾದನೆ ವಿರುದ್ಧ ಸಮರ. ದೇಶದ ಭದ್ರತೆಗಾಗಿ ಕಾರ್ಯಾಚರಣೆ ಎಂಬ ಹೊಸ ನಾಮಫಲಕಗಳನ್ನು ಕೊಡುತ್ತಿದೆ. ○

ಕೋಮುವಾದದ ಅವತಿಯ ಆರಂಭ : ವಿ.ಪಿ.ಸಿಂಗ್

ಕೋಮುವಾದದ ವಿರುದ್ಧ ಅತ್ಯಂತ ಪ್ರಬಲ ಮತ್ತು ರಾಜಿ-ಮಾಡಿಕೊಳ್ಳದ ನಿಲುವು ತೆಗೆದುಕೊಂಡ ವಿ.ಪಿ.ಸಿಂಗ್ ಅತ್ಯಂತ ಆಶಾವಾದಿ ಭಾವನೆ ಹೊಂದಿದ್ದಾರೆ. ಅವರು ಈ ಹತ್ತು ವರ್ಷಗಳಲ್ಲಿ ಕೋಮುವಾದದ ಆಟದಿಂದ ಜನ ಬೇಸತ್ತಿದ್ದಾರೆ. ಅದರ ಅವನತಿ ಆರಂಭವಾಗಿದೆ ಎನ್ನುತ್ತಾರೆ. ಕೋಮುವಾದದ ವಿರುದ್ಧದ ಹೋರಾಟದಲ್ಲಿ ಪ್ರಧಾನಿ ಹುದ್ದೆ ಮತ್ತು ತನ್ನ ಸರ್ಕಾರವನ್ನೇ ಬಲಿಕೊಡಲು ಹಿಂದೆ ಮುಂದೆ ನೋಡದ ವಿ.ಪಿ.ಸಿಂಗ್, ಹಸಿವು - ನಿರುದ್ಯೋಗ - ಅಸಮಾನತೆ ವಿರುದ್ಧದ ಐಕ್ಯ ಹೋರಾಟ ಕೋಮುವಾದವನ್ನು ಹಿಂದೆ ಸರಿಸುತ್ತದೆ ಎಂಬ ಆಶಾಭಾವನೆ ವ್ಯಕ್ತಪಡಿಸುತ್ತಾರೆ. "ಅವರು (ಸಂಘಪರಿವಾರ) ಅವರ ಅಖಾಡಾಗಳಲ್ಲಿ ಗದ್ದಲ ನಡೆಸುತ್ತಿರಲಿ. ನಾವು ನಮ್ಮ ವಿಷಯಗಳನ್ನು ಹೋರಾಟಕ್ಕೆ ಆರಿಸಿಕೊಳ್ಳಬೇಕು....... ಹಸಿವಿನ ವಿರುದ್ಧ ಹೋರಾಟ ನಮ್ಮ ಮುಂದೆ ಇರುವ ಭವಿಷ್ಯತ್ತಿನ ಹೋರಾಟ" ಎನ್ನುತ್ತಾರವರು. ಕೋಮುವಾದದ ಅವನತಿಯ ಆರಂಭದ ಬಗ್ಗೆ ಸಂಶಯ ವ್ಯಕ್ತಪಡಿಸುವವರಿಗೆ ಅವರ ಉತ್ತರ "ಸಂಘ ಪರಿವಾರದ ಪ್ರಚಾರ ಅದೇ ತಾರಕ ಸ್ಥಿತಿಯಲ್ಲಿ ಬಹಳ ಕಾಲ ಇರಲು ಅಸಾಧ್ಯ. ಇದು ಮದ್ಯದ ನಶೆಯಂತೆ. ಇಳಿದು ಹೋಗುತ್ತದೆ. ಕೆಲವರಿಗೆ ಅದು ಚಟವಾಗಬಹುದು. ಆದರೆ ಬಹುಸಂಖ್ಯಾತರಿಗೆ ಅದು ಇಳಿದು ಹೋಗುತ್ತದೆ...... ಜನರ ಪರಿಸ್ಥಿತಿ ಎಷ್ಟು ಕೆಟ್ಟದಿದೆಯೆಂದರೆ ಈ ಎಲ್ಲಾ ದಾರಿತಪ್ಪಿಸುವ ವಿಷಯಗಳನ್ನು ಬದಿಗಿಟ್ಟು, ನಿಜವಾದ ವಿಷಯಗಳನ್ನು ಕೈಗೆತ್ತಿಕೊಳ್ಳುತ್ತಾರೆ" ಎಂದು ಅವರ ಅಭಿಪ್ರಾಯ. ಕೋಮುವಾದದ ವಿರುದ್ಧ ಹೋರಾಟ ಸುಲಭವೆಂದು ಅವರೇನು ಹೇಳುವುದಿಲ್ಲ. ಆದರೆ ಹೋರಾಟ ಸಾಧ್ಯವಿದೆ. ಗೆಲುವು ಜಾತ್ಯಾತೀತ ಶಕ್ತಿಗಳದ್ದೇ ಎಂದು ಅವರಿಗೆ ಭರವಸೆ ಇದೆ. "ಜಾತ್ಯಾತೀತ ಶಕ್ತಿಗಳು ಎರಡು ಗುರಿಗಳೊಂದಿಗೆ ಮುನ್ನಡೆಯಬೇಕು. ಒಂದು ಜನತೆಯ ನಡುವಿನ ಸಹೋದರತ್ವವನ್ನು ಗಟ್ಟಿಗೊಳಿಸಿ ಒಗ್ಗೂಡಿಸುವುದು. ಇನ್ನೊಂದು ಬಿಜೆಪಿ ಸುತ್ತ ಇರುವ ರಾಜಕೀಯ ಕೂಟವನ್ನು ಒಡೆಯುವುದು" 'ಜಾತ್ಯಾತೀತೆ'ಗಿಂತ 'ಸಹೋದರತ್ವ' ಹೆಚ್ಚು ಸಕಾರಾತ್ಮಕ ಪರಿಕಲ್ಪನೆ. 'ಸಹೋದರತ್ವ' ಜನರ ನಡುವೆ ಇರುವ ಸ್ವಾಭಾವಿಕವಾಗಿ ಇರುವ ಭಾವನಾತ್ಮಕ ಕೊಂಡಿ. ಅದನ್ನು ಒಡೆಯಲು ಕೋಮುವಾದಿಗಳು ಹಗಲಿರುಳು ಪ್ರಯತ್ನಿಸುತ್ತಿದ್ದಾರೆ. ಅದನ್ನು ರಕ್ಷಿಸಿ, ಬಲಪಡಿಸುವುದು ನಮ್ಮ ಕೆಲಸವಾಗಬೇಕು ಎನ್ನುತ್ತಾರೆ ವಿ.ವಿ.ಸಿಂಗ್



ಎನ್‌ಡಿಎ ಕೂಟದಲ್ಲಿ ಸದ್ಯದಲ್ಲೇ ತೀವ್ರ ಮತಭೇದ ತೋರುತ್ತದೆ. ಈಗ ಅದರ ಜತೆ ಇರುವ ಜಾತ್ಯಾತೀತ, ಪ್ರಾದೇಶಿಕ ಪಕ್ಷಗಳು ಬಿಜೆಪಿಗೆ ತಮ್ಮ 'ರಾಜಕೀಯ ಜಾಗ' ಬಿಟ್ಟುಕೊಡಲು ತಯಾರಿರುವುದಿಲ್ಲ. ಅವರ 'ರಾಜಕೀಯ ಜಾಗ'ವನ್ನು ಆಕ್ರಮಿಸಲು ಬಿಜೆಪಿ ಪ್ರಯತ್ನಿಸುತ್ತದೆ. ಅದನ್ನು ಮಾಡದೆ ಬಿಜೆಪಿ ಈಗಿನ ಪರಿಸ್ಥಿತಿಯಲ್ಲಿ ಮುನ್ನಡೆ ಸಾಧಿಸಲು ಸಾಧ್ಯವಿಲ್ಲ. ಇದು ತೀವ್ರ ಬಿಕ್ಕಟ್ಟಿಗೆ ದಾರಿ ಮಾಡಿಕೊಡುತ್ತದೆ. ಈ ಬಿಕ್ಕಟ್ಟನ್ನು ಜಾತ್ಯಾತೀತ ರಾಜಕೀಯ ಶಕ್ತಿಗಳು ಬಳಸಬೇಕು. ಜಾಣ ರಾಜಕಾರಣಿಯಾದ ವಿ.ಪಿ.ಸಿಂಗ್ ರವರ ಕಿವಿಮಾತು.



ಅಯೋಧ್ಯಾಕಾಂಡದ ಕೊಲೆಗಡುಕರಿಗೆ ಶಿಕ್ಷೆ ಯಾವಾಗ?

ಅಯೋಧ್ಯಾಕಾಂಡ ಎಬ್ಬಿಸಿದ ಅಯೋಧ್ಯಾ ವಿವಾದಕ್ಕೆ ಪರಿಹಾರ ಕಂಡುಕೊಳ್ಳುವುದರಲ್ಲಿ ಮಾತ್ರವಲ್ಲ (ಕಾನೂನು ಕ್ರಮಗಳ ಅಥವಾ ಮಾತುಕತೆಗಳ ಮೂಲಕ) ಕೋಮುವಾದಿ ಹತ್ಯಾಕಾಂಡಗಳ ಕೊಲೆಗಡುಕರಿಗೆ ಶಿಕ್ಷೆ ಕೊಡುವುದರಲ್ಲಿ - ವಿಫಲವಾಗಿರುವುದು ಇತರೇ ರೀತಿಯಲ್ಲಿ ಇನ್ನೂ ಬಲವಾಗಿರುವ ರಾಜಕೀಯ ಪ್ರಜಾಪ್ರಭುತ್ವದ ವಿಫಲತೆಯಾಗಿದೆ. ಇದೇ ಕೋಮುವಾದೀಕರಣದ ರೈಲಿಗೆ ಮುಖ್ಯ ಇಂಜಿನ್ ಆಗಿದೆ.

ಕ್ರಿಮಿನಲ್‌ಗಳು ಕೇಂದ್ರ ಸಚಿವರು!

ಬಾಬ್ರಿ ಮಸೀದಿ ನಾಶದಲ್ಲಿ ನೇರವಾಗಿ ಭಾಗವಹಿಸಿದವರಿಗೆ ಶಿಕ್ಷೆ ನೀಡುವ ಮುಖ್ಯ ಕೆಲಸ ಹತ್ತುವರ್ಷಗಳಲ್ಲಿ ಆಮೆನಡೆಯಲ್ಲಿ ನಡೆದಿದೆ. ಅಡ್ವಾಣಿ, ಜೋಶಿ, ಉಮಾಭಾರತಿ ಮುಂತಾದ ಈಗಿನ ಕೇಂದ್ರ ಮಂತ್ರಿಗಳೇ ಆಪಾದಿತರಾಗಿರುವ ಕೇಸ್ ಕೇಂದ್ರ ಮತ್ತು ಉತ್ತರ ಪ್ರದೇಶದ ಸರ್ಕಾರಗಳ ವಿಳಂಬ ನೀತಿಯಿಂದ ನಡೆಯದ ಗಾಡಿಯಂತೆ ನಿಂತಿದೆ. ಕೇಂದ್ರದಲ್ಲಿ ಸಂಯುಕ್ತರಂಗ, ಉತ್ತರ ಪ್ರದೇಶದಲ್ಲಿ ಮುಲಾಯಂ ಸರ್ಕಾರ ಅಧಿಕಾರದಲ್ಲಿದ್ದಾಗ ಬಿಟ್ಟರೆ ಕೇಸ್ ಮುಂದಕ್ಕೆ ಹೋಗಿಲ್ಲ. ನೇರ, ಅಪ್ರತ್ಯಕ್ಷ ರಾಜಕೀಯ ಹಸ್ತಕ್ಷೇಪದಿಂದ ನಿಂತುಹೋದ ಕ್ರಿಮಿನಲ್ ಕೇಸುಗಳಲ್ಲಿ ಅತ್ಯಂತ ಭಯಾನಕವಾದದ್ದು ಇದು. ನರಸಿಂಹರಾವ್ ಕೇಂದ್ರ ಸರ್ಕಾರ, ಮಾಯಾವತಿಯ ಮನುವಾದಿ-ವಿರೋಧಿ ಸರ್ಕಾರ ಈ ಪರಿಸ್ಥಿತಿಗೆ ಇತರ ಸಂಘಪರಿವಾರದ - ಕೂಟದಷ್ಟೇ ಜವಾಬ್ದಾರಿ.

ವಿಐಪಿ ಆಪಾಧಿತರ ತನಿಖೆ

ಈ ಬಗ್ಗೆ ನೇಮಿಸಿದ ಲಿಬರ್‌ಹಾನ್ಸ್ ಕಮಿಷನ್ - ಸರ್ಕಾರಗಳ ಮತ್ತು ಪ್ರಮುಖ 'ವಿಐಪಿ' ಆಪಾದಿತರ ಅಸಹಕಾರದಿಂದ ದೀರ್ಘವಾಗಿ ನಡೆದಿದ್ದು, ಯಾವಾಗಲಾದರೂ ತನ್ನ ವರದಿ ಕೊಡಬಹುದು ಎಂಬ ಸ್ಥಿತಿ ಇದೆ. ಆದರೆ ಇತರ ಕಮಿಶನ್‌ಗಳ ವರದಿಗಳಿಗೆ ಆದ ಗತಿ ನೋಡಿದರೆ ಈ ವರದಿ ಬಂದರೂ ಆ ಬಗ್ಗೆ ಏನಾದರೂ ಕಾರ್ಯಾಚರಣೆ ಆಗುವ ಸಂಭವ ತೀರಾ ಕಡಿಮೆ.

ಈ ಅನುಭವ ಬಂದಿರುವುದು ಮುಂಬಯಿ ಗಲಭೆಗಳ ಬಗ್ಗೆ ನಡೆದ ಕೇಸ್‌ಗಳು, ಆ ಬಗ್ಗೆ ತನಿಕೆ


ಕ್ರಿಮಿನಲ್ಲುಗಳು ಆದರೂ ಕೇಂದ್ರ ಮಂತ್ರಿಗಳು

ನಡೆಸಿದ ಶ್ರೀ ಕೃಷ್ಣ ಕಮಿಶನ್ ಮತ್ತು ಹಲವು ಕೇಸ್‌ಗಳು ಶಿವಸೇನಾ ಮತ್ತು ಸಂಘ ಪರಿವಾರದ ನಾಯಕರ ಬಗ್ಗೆ ಇದ್ದರೂ ಅಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಪರಿವಾರದ ಸರಕಾರಗಳ ವಿಳಂಬ ನೀತಿ. ಈಬಗ್ಗೆ ಯಾವುದೇ ಭರವಸೆ ಹುಟ್ಟಿಸುವುದಿಲ್ಲ.

50 ವರ್ಷಗಳಾದರೂ ಇತ್ಯರ್ಥವಿಲ್ಲ

ಅಯೋಧ್ಯೆ ವಿವಾದದ ಬಗೆಗಿನ ಸುಮಾರು 50 ವರ್ಷಗಳಷ್ಟು ಹಳೇ ಕೇಸಿದ್ದು ಅದೇ ಗತಿಯಾಗಿದೆ. ಈ ವರ್ಷ ಮಾರ್ಚಿನಲ್ಲಿ ಸುಪ್ರೀಂ ಕೋರ್ಟು ಮಧ್ಯ ಪ್ರದೇಶದ ನಂತರ ಅಲಾಹಾಬಾದ್ ಹೈಕೋರ್ಟ್ ಪ್ರತಿದಿನ ಈ ಹೊಸ ವಿಚಾರಣೆ ನಡೆಸುತ್ತಿದ್ದರೂ, ಯಾವಾಗ ತೀರ್ಪು ಬರಬಹುದು ಎಂಬ ಅಂದಾಜು ಈವರೆಗೂ ಯಾರಿಗೂ ಇಲ್ಲ.

ಶಿಕ್ಷೆಯಲ್ಲ ರಕ್ಷೆ

ಗುಜರಾತ್ ಹತ್ಯಾಕಾಂಡರ ಬಗೆಗಂತೂ ಹೆಚ್ಚಿಗೆ ಹೇಳಬೇಕಾಗೇ ಇಲ್ಲವಲ್ಲ. ಆಳುವ ವರ್ಗದ ಒಟ್ಟಾರೆ ರಾಜಕೀಯ ವ್ಯವಸ್ಥೆ ಅಯೋಧ್ಯಾಕಾಂಡ ಆ ರಾಜ್ಯದ ಈ ಕೋಮುವಾದಿ ಕಾಂಡದ ಕೊಲೆಗಡುಕರಿಗೆ ಶಿಕ್ಷೆ ಆಗದಂತೆ ಟೊಂಕಕಟ್ಟಿ ನಿಂತಿದೆ ಎನ್ನುವಂತಿದೆ ದುಸ್ಥಿತಿ.

ಕೋಮು ಸೌಹಾರ್ದ ದಿನ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ (ಸಿಪಿಐಎಂ)ದ ಕೇಂದ್ರ ಸಮಿತಿ ಹಾಗೂ ಇತರೆ ಪಕ್ಷಗಳ ಕರೆಯಂತೆ ಡಿಸೆಂಬರ್ 6 ರಂದು ದೇಶದಾದ್ಯಂತ ಕೋಮುಸೌಹಾರ್ದ ದಿನವನ್ನಾಗಿ ಆಚರಿಸಲಾಯಿತು. ಬಾಬರಿ ಮಸೀದಿಯನ್ನು ಕೆಡವಿದ ಹತ್ತುವರ್ಷಗಳ ಹಿಂದಿನ ಕರಾಳದಿನದ ಕಹಿ ನೆನಪನ್ನು ಮಾಡಿಕೊಳ್ಳುತ್ತಾ ಕೋಮು ಶಕ್ತಿಗಳನ್ನು ಮೂಲೆಗುಂಪುಮಾಡಿ ಸೌಹಾರ್ದತೆಯನ್ನು ಎತ್ತಿ ಹಿಡಿದು ದೇಶದ ಐಕ್ಯತೆಯನ್ನು ಕಾಪಾಡಬೇಕೆಂದು ಕರೆ ನೀಡಲಾಯಿತು.

ಬೆಂಗಳೂರಿನಲ್ಲಿ ಜನನಿಬಿಡ ಕಾರ್ಪೋರೇಷನ್ ಕಛೇರಿ ಬಳಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಸಾಧಾರಣ 2 ಗಂಟೆಗಳಿಗೂ ಹೆಚ್ಚು ಕಾಲ ಧರಣಿ ನಡೆಸಿ ಜನರ ಗಮನ ಸೆಳೆದರು. ಧರಣಿಯನ್ನು ಉದ್ದೇಶಿಸಿ ಮಾತನಾಡಿದ ಸಿಪಿಐ(ಎಂ)ನ ರಾಜ್ಯಕಾರ್ಯದರ್ಶಿ ಮಂಡಳಿ ಸದಸ್ಯ ನಿತ್ಯಾನಂದ ಸ್ವಾಮಿಯವರು, ಮತೀಯ ವಾದಿಗಳು ಎಲ್ಲೆಡೆ ಹಿಂದು ಮುಸ್ಲಿಂ ಗಲಭೆಗಳನ್ನು ಸೃಷ್ಟಿಸುತ್ತಿದ್ದು ಜನ ಜಾಗ್ರತರಾಗಿ ಹೋರಾಡಬೇಕು ಎಂದು ಕರೆ ನೀಡಿದರು. ಇನ್ನೋರ್ವ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾ| ಗುರುಶಾಂತ್ ಮಾತನಾಡುತ್ತಾ ಬಾಬರಿ ಮಸೀದಿ ಉರುಳಿಸಿದ ಕರಾಳ ದಿನಗಳನ್ನು ನೆನಪಿಸಿದರು. 1992ರ ಹೊತ್ತಿನಲ್ಲಿ ದೇಶದಾದ್ಯಂತ ಕಾರ್ಮಿಕ, ರೈತರ ಮತ್ತು ಇತರೆ ದುಡಿಯುವ ಜನರ ಆಂದೋಲನವು ಮುಷ್ಕರ, ಭಾರತ ಬಂದ್ ಮತ್ತಿತರ ರೂಪದಲ್ಲಿ ಹೊರಹೊಮ್ಮಿದ ಸಂದರ್ಭದಲ್ಲಿ ಜನರ ಐಕ್ಯತೆಯನ್ನು ಮುರಿಯಲು ಬಾಬರಿ ಮಸೀದಿಯನ್ನು ಕೆಡವಿ ಕೋಮು ದಳ್ಳುರಿಯನ್ನು ಹರಿಬಿಡಲಾಯಿತು ಎಂದು ಈ 10 ವರ್ಷಗಳ ಬೆಳವಣಿಗೆ ಸಂಕ್ಷಿಪ್ತವಾಗಿ ವಿವರಿಸಿ ಜನರ ಐಕ್ಯತೆಯನ್ನು ಬೆಸೆದು ದೇಶವನ್ನು ಉಳಿಸಬೇಕು ಎಂದು ಹೇಳಿದರು. ರಾಜ್ಯ ಸಮಿತಿ ಸದಸ್ಯ ಬಾಲಕೃಷ್ಣ ಶೆಟ್ಟಿ ಡಿವೈಎಫ್‌ಐ ರಾಜ್ಯ ಅಧ್ಯಕ್ಷ ಕೆ.ಎನ್. ಉಮೇಶ್, ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎನ್. ಪ್ರಭಾ ಗೋಪಾಲಕೃಷ್ಣ ಮಾತನಾಡಿದರು.


ಬೆಂಗಳೂರಿನಲ್ಲಿ....

ತುಮಕೂರಿನಲ್ಲಿ : ವಿವಿಧ ಸಂಘಟನೆಗಳು ರಾಜಕೀಯ ಪಕ್ಷಗಳಿಗೆ ಸೇರಿದ 200ಕ್ಕೂ ಹೆಚ್ಚು ಗೆಳೆಯರು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಧರಣಿ ನಡೆಸಿ ಸೌಹಾರ್ದ ದಿನವನ್ನು ಆಚರಿಸಿದರು. ಹಿರಿಯ ಸ್ವತಂತ್ರ ಹೋರಾಟಗಾರರ ಹಾಗೂ ಸಿಪಿಐ ಮುಖಂಡರಾದ ಟಿ.ಆರ್. ರೇವಣ್ಣ, ಸರಕಾರಿ ಕಾಲೇಜಿನ ಮಾಜಿ ಪ್ರಾಂಶುಪಾಲರು ಹಾಗೂ ತುಮಕೂರಿನಲ್ಲಿ ಉನ್ನತ ಪದವಿ (ಪಿ.ಜಿ) ಕೇಂದ್ರದಲ್ಲಿ ಚರಿತ್ರೆಯ ಪ್ರಾಧ್ಯಾಪಕರಾದ ಟಿ.ಎಂ. ಶ್ರೀನಿವಾಸಯ್ಯ, ಡಿ.ಎಸ್.ಎಸ್. ಮುಖಂಡ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಉಪ ನಿರ್ದೇಶಕರಾಗಿದ್ದ ದೊರೈರಾಜ್, ಬಂಡಾಯ ಸಾಹಿತಿ ಪ್ರೊ. ಎಸ್. ಜಿ. ಸಿದ್ದರಾಮಯ್ಯ, ದಲಿತಕವಿ ಕೆ.ಬಿ. ಸಿದ್ದಯ್ಯ, ಲಲಿತ ಕಲಾ ಅಕಾಡೆಮಿ ಸದಸ್ಯ ಜಿ.ವಿ. ಆನಂದ ಮೂರ್ತಿ ಕೊಳಗೇರಿ ನಿವಾಸಿಗಳ ಸಂಘದ ಮುಖಂಡ ನರಸಿಂಹಮೂರ್ತಿ ಡಿ.ಎಸ್.ಎಸ್.ನ ಸಂಚಾಲಕ ಬೆಲ್ಲದ ಮಡು ರಂಗಸ್ವಾಮಿ ಹಾಗೂ ಇತರ ಪದಾಧಿಕಾರಿಗಳ, ಯುವ ಜನತಾದಳ ಮುಖಂಡ ಗಂಗರಾಜು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಸಯ್ಯದ್ ಮುಜೀಬ್, ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡ ಬಿ. ಉಮೇಶ್ ಡಿವೈಎಫ್‌ಐ, ಎಸ್.ಎಫ್,ಐ ನ ಮುಖಂಡರು ಕಾರ್ಯಕರ್ತರು ಸೌಹಾರ್ದದಿನದಲ್ಲಿ ಭಾಗವಹಿಸಿದ್ದರು.

ಹಿರಿಯ ಸ್ವಾತಂತ್ರ ಹೋರಾಟಗಾರರು, ಸಾಹಿತಿಗಳಿಂದ ಹಿಡಿದು ದಿನಗೂಲಿ ಕೆಲಸ ಮಾಡುವ ಕಾರ್ಮಿಕರು ಸೌಹಾರ್ದ ದಿನದಲ್ಲಿ ಭಾಗವಹಿಸಿದ್ದು ಇಲ್ಲಿನ ವಿಶೇಷ. ರಂಜಾನ್ ಹಬ್ಬವಿದ್ದರೂ, ಹಲವಾರು ಮುಸ್ಲಿಂ ಬಾಂಧವರು ಈ ಧರಣಿಯಲ್ಲಿ ಭಾಗವಹಿಸಿದ್ದು ಇನ್ನೊಂದು ವಿಶೇಷ ರಂಜಾನ್ ಹಬ್ಬ ಬಿಟ್ಟು ಧರಣಿಯಲ್ಲಿ ಭಾಗವಹಿಸಿದ್ದೀರಲ್ಲ ಎಂದು ವರದಿಗಾರನೊಬ್ಬ ಧರಣಿಯ ನಿರತ ಮುಸ್ಲಿಂ ಬಾಂಧವರೊಬ್ಬರಿಗೆ ಪ್ರಶ್ನಿಸಿದಾಗ, "ರಂಜಾನ್ ಹಬ್ಬ ಒಂದು ಧರ್ಮದ ಜನರ ನಡುವಿನ ಪ್ರೀತಿಯ ಸಂಕೇತವಾಗಿದ್ದರೆ, ಸೌಹಾರ್ದದಿನ ಇಡೀ ದೇಶದ ಜನರ ಐಕ್ಯತೆಯನ್ನು ಬೆಸೆಯುವ ಕೊಂಡಿ" ಎಂದು ಹೇಳಿದಾಗ ವರದಿಗಾರನಿಗೆ ಮಾತೇ ಹೊರಡಲಿಲ್ಲ.

ಗುಲ್ಬರ್ಗಾದಲ್ಲಿಯೂ ಸೌಹಾರ್ದ ದಿನವನ್ನು ಆಚರಿಸಿದ ವರದಿ ಬಂದಿದೆ. ಇತ್ತೀಚಿನ ದಿನಗಳಲ್ಲಿ ಗುಲ್ಬರ್ಗಾ ಜಿಲ್ಲೆಯ ಆಳಂದದಲ್ಲಿ ಕೋಮುವಾದಿಗಳು ಗಮನ ಕೇಂದ್ರೀಕರಿಸಿದ್ದಾರೆ. ಗಡಿ ಮಸೀದಿ ವಿವಾದದ ಬೆನ್ನಲ್ಲೇ, ಅಲ್ಪ ಸಂಖ್ಯಾತ ಮುಸ್ಲಿಂ ಸಮುದಾಯವನ್ನು ಆರ್ಥಿಕವಾಗಿ ಬಹಿಷ್ಕರಿಸಬೇಕೆಂದು ಆಳಂದ ತಾಲ್ಲೂಕು ಹಿಂದೂ ಜಾಗೃತಿ ಸಮಿತಿ ಎನ್ನುವ ಹೆಸರಿನಲ್ಲಿ ಕರಪತ್ರವನ್ನು ಹಂಚಲಾಗಿದೆ. ಆ ಕರ ಪತ್ರದ ಪ್ರಕಾರ, ಹಿಂದೂಗಳು ಮುಸ್ಲಿಂ ವ್ಯಾಪಾರಸ್ಥರಿಂದ ಯಾವುದೇ ಸಾಮಾನು ಖರೀದಿಸಬಾರದು ಹಾಗೂ ಮುಸ್ಲಿಮರು ಹಿಂದೂಗಳ ಅಂಗಡಿಗೆ ಬಂದರೆ ಯಾವುದೇ ಸಾಮಾನನ್ನು ಮಾರಾಟ ಮಾಡ ಬಾರದು. ಹಾಗೊಂದು ವೇಳೆ ಈ 'ಆದೇಶ'ವನ್ನು ಪಾಲಿಸದೇ ಹೋದಲ್ಲಿ ರೂ. 500 ದಂಡ ತೆರಬೇಕಾಗುತ್ತದೆ.

ಗುಜರಾತನ್ನು ನೆನಪಿಸುವ ಈ ಕೃತ್ಯ ಗುಲ್ಬರ್ಗಾ ಜಿಲ್ಲೆಯ ಆಳಂದದಲ್ಲಿ ಜರುಗಿದೆ ಈ ಹಿನ್ನೆಲೆಯಲ್ಲಿ ಜರುಗಿದ ಕೋಮು ಸೌಹಾರ್ದ ದಿನ ಮಹತ್ವಪೂರ್ಣವಾದುದು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮಾರುತಿ ಮಾನ್ಪಡೆ, ಕೆ. ನೀಲಾ, ಜನತಾದಳ(ಎಸ್.)ನ ಬಸವರಾಜ ಪಡಕ್ಕರ್, ಬಸವಣ್ಣ ಸಿಂಘೆ, ಸಿಪಿಐನ ಶಂಕರ ಕಟ್ಟಿ ಸಂಗಣ್ಣ, ಮೊದಲಾದವರು ಮತೀಯವಾದಿಗಳನ್ನು ಮೂಲೆಗುಂಪು ಮಾಡಿ ಸಾಮರಸ್ಯವನ್ನು ಕಾಪಾಡಿ, ಜನರ ಐಕ್ಯತೆ ಉಳಿಸಿಕೊಳ್ಳಬೇಕೆಂದು ಕರೆ ನೀಡಿದರು.

ಜಿಲ್ಲೆಯ ಜನತಾದಳ ಕಛೇರಿ ಮತ್ತು ಸೂರತ್ ಮಾರ್ಕೆಟ್ ಬಳಿ ಇರುವ ಕಾಮತ್ ರೆಸ್ಟೋರೆಂಟ್‌ನಿಂದ ಪಾದಯಾತ್ರೆಯಲ್ಲಿ ತೆರಳಿದ ವಿವಿಧ ಪಕ್ಷಗಳ ಕಾರ್ಯಕರ್ತರು, ಸಾಹಿತಿಗಳು, ಬುದ್ಧಿ ಜೀವಿಗಳು ಪೊಲೀಸ್ ಚೌಕದಲ್ಲಿ ಬಹಿರಂಗ ಸಭೆ ನಡೆಸಿದರು. ಪ್ರಮುಖ ಬೀದಿಯಾದುದರಿಂದ ವಿವಿಧ ನಾಗರಿಕರು ಅತ್ಯಂತ ಆಸಕ್ತಿಯಿಂದ ಮುಖಂಡರ ಮಾತುಗಳನ್ನು ಆಲಿಸಿದರು.

ಒಂದೆಡೆ ಕೋಮು ದಳ್ಳುರಿಯನ್ನು ಹಬ್ಬಿಸಲು ಖಾವಿ ಪಡೆಗಳು ಕಾತರದಿಂದ ಹೊಂಚು ಹಾಕುತ್ತಿರುವಾಗಲೇ ಸಾಮರಸ್ಯವನ್ನು ಸಂರಕ್ಷಿಸಲು ಜಾತ್ಯಾತೀತ ರಾಜಕೀಯ ಪಕ್ಷಗಳು, ಪ್ರಗತಿ ಪರ ಶಕ್ತಿಗಳು ಶಕ್ತಿ ಮೀರಿ ಶ್ರಮಿಸುತ್ತಿರುವುದು ಉತ್ತೇಜನಕಾರಿಯಾಗಿದೆ.

ಡಿಸೆಂಬರ್ 6..

ಪುಟ 7 ರಿಂದ

ಇದರ ಹಿನ್ನೆಲೆಯಲ್ಲಿ ರಾಷ್ಟ್ರೀಯ ಸಮಗ್ರತಾ ಮಂಡಳಿ 1992 ನವೆಂಬರ್ 3ನೇ ವಾರದಲ್ಲಿ ಸಭೆ ಸೇರಿತ್ತು. ಎಲ್ಲಾ ರಾಜಕೀಯ ಪಕ್ಷಗಳು, ಬಿಜೆಪಿ ಹೊರತುಪಡಿಸಿ ಭಾಗವಹಿಸಿದ್ದವು. ಮಸೀದಿಗೆ ಯಾವುದೇ ಹಾನಿಯಾಗುವುದನ್ನೂ ತಡೆಯಲು ಪ್ರಧಾನ ಮಂತ್ರಿ ಅಗತ್ಯವಿರುವ ಯಾವುದೇ ಕ್ರಮ ತೆಗೆದುಕೊಳ್ಳಬಹುದೆಂದು ಸಭೆಯು ನರಸಿಂಹರಾವ್‌ಗೆ ಅಧಿಕಾರ ನೀಡಿತು.

ಆದರೆ ಪ್ರಧಾನಿ ನರಸಿಂಹರಾವ್ ಇದನ್ನೇ ನಿರ್ವಹಿಸುವುದರಲ್ಲಿ ವಿಫಲರಾದರು. 15 ರಿಂದ 20 ಸಾವಿರದಷ್ಟು ಕರಸೇವಕರು ಅಂದು ಅಯೋಧ್ಯೆಯಲ್ಲಿ ಸೇರಲು ಅವಕಾಶ ನೀಡಲಾಯಿತು. ಅಲ್ಲಿ ಜಮಾಯಿಸಲಾದ ರಕ್ಷಣಾ ಸಿಬ್ಬಂದಿ ಯಾವುದೇ ಆದೇಶ ಇಲ್ಲದೆ ಗೊಂದಲದಲ್ಲಿತ್ತು. ಎಲ್ಲರೂ ಭರವಸೆ ನೀಡುತ್ತಾ ಇದ್ದರು.

ಇನ್ನುಳಿದದ್ದು ಈಗ ಇತಿಹಾಸ.....

ಮಸೀದಿಯನ್ನು ಕೆಡವಿಹಾಕುವ ಘನ ಘೋರ ದುಷ್ಕೃತ್ಯ ನಡೆದೇಹೋಯಿತು. ಘಟನೆಯ ಬೆನ್ನಲ್ಲೇ ಮುಂಬೈ, ಸೂರತ್, ಜೈಪುರ್, ಭೋಪಾಲ ಮೊದಲಾದ ಕಡೆ ಮುಸಲ್ಮಾನ ವಿರೋಧಿ ದಂಗೆಗಳು ವ್ಯಾಪಕವಾಗಿ ನಡೆದವು.

1992 ರ ಉ.ಪ್ರದೇಶದ ಬಿಜೆಪಿ ಸರ್ಕಾರ ಸರ್ವೋಚ್ಚ ನ್ಯಾಯಾಲಯಕ್ಕೆ ಮತ್ತು ಪ್ರಧಾನ ಮಂತ್ರಿಗೆ ಭರವಸೆ ಕೊಡುತ್ತಾ ಮಸೀದಿಗೆ ಯಾವುದೇ ಹಾನಿ ಆಗದು ಎಂದು ಹೇಳಿಕೊಂಡಿದ್ದರು. ಆದರೆ ಬಿಜೆಪಿ ಎಂದಿನಂತೆ ಕೊಟ್ಟ ಮಾತಿಗೆ ತಕ್ಕಂತೆ ನಡೆಯಲಿಲ್ಲ, ಮಾತ್ರವಲ್ಲ ಕೊನೆಯವರೆಗೂ ಇಡೀ ದುಷ್ಕೃತ್ಯದ ಮೇಲ್ವಿಚಾರಣೆಯನ್ನು ವಹಿಸಿಕೊಂಡಿತ್ತು. ಸರ್ಕಾರ ಇಂತಹ ಮೋಸಗಾರರ ಮಾತಿನ ಮೇಲೆ ವಿಶ್ವಾಸ ಇಟ್ಟಿದ್ದು ಆಶ್ಚರ್ಯದ ಸಂಗತಿಯಾಗಿದೆ. ಇಂದಿನ ಉಪಪ್ರಧಾನಿ ಅಡ್ವಾಣಿ, ಮಂತ್ರಿಗಳಾದ ಎಂ.ಎಂ.ಜೋಷಿ, ಉಮಾಭಾರತಿ ಮೊದಲಾದವರು ಮಸೀದಿಯ ಗುಮ್ಮಟಗಳು ಉರುಳುತ್ತಿರುವಾಗ ಅದರ ಎದುರಿನಲ್ಲೇ ಹರ್ಷೋದ್ಗಾರ ಮಾಡುತ್ತಾ ಪುಂಡುಪೋಕರಿ ಕರಸೇವಕರಿಗೆ ಪ್ರೋತ್ಸಾಹ ನೀಡುತ್ತಿದ್ದುದು ಅಷ್ಟೇ ಆಘಾತಕಾರಿಯಾಗಿದೆ.

ದುಷ್ಕೃತ್ಯದ ಪ್ರಮುಖ ಆರೋಪಿಗಳನ್ನು ಕಾನೂನಿನ ಕೈಗೆ ಸಿಗದಂತೆ ತಪ್ಪಿಸಲು ಉ.ಪ್ರದೇಶದ ಬಿಎಸ್‌ಪಿ-ಬಿಜೆಪಿ ಸರ್ಕಾರ ಕೊಳಕು ಆಟ ಆಡುತ್ತಿದೆ. ಲಿಬೆರಾನ್ ಆಯೋಗದ ಕೆಲಸವೂ ತುಂಬಾ ನಿಧಾನಗತಿಯಲ್ಲಿ ಸಾಗುತ್ತಿದೆ. ಆದರೆ ಇದೆಲ್ಲವೂ ಬಿಜೆಪಿಯನ್ನು ಉಳಿಸಲಾರದು. ಇಂತಹ ಘೋರ ಕಾನೂನು ಉಲ್ಲಂಘನೆಗೆ ತಕ್ಕ ಶಿಕ್ಷೆಯಾಗಲೇಬೇಕು. ○

ಅಗಲಿ ಒಂದು ವರುಷವಾಗಿಯೇ ಬಿಟ್ಟಿದೆ. ಈಗಲೂ ಅವರ ಡಿಸೆಂಬರ್ 9 ಕ್ಕೆ ಕಾಮ್ರೇಡ್ ಎನ್.ಕೆ.ಯವರು ನಮ್ಮೆಲ್ಲರನ್ನು ಅಗಲಿ ಒಂದು ವರುಷವಾಗಿಯೇ ಬಿಟ್ಟಿದೆ. ಈಗಲೂ ಅವರ ಕ್ರಿಯಾಶೀಲ, ಚುರುಕು ಚಟುವಟಿಕೆಗಳು ವ್ಯಕ್ತಿತ್ವ ಚಿತ್ರ ಎಲ್ಲರ ಮನಸ್ಸೆಲ್ಲಾ ಅಚ್ಚಳಿಯದೇ ಉಳಿದಿದೆ. ಇಂತಹ ಹಿರಿಯ ಸಂಗಾತಿಯ ಬದುಕು, ಕ್ರಾಂತಿಕಾರಿ ಚಟುವಟಿಕೆಗಳ ಪರಿಚಯಕ್ಕಾಗಿ, ಅವರ ನೆನಪಿನಲ್ಲಿ ಈ ಲೇಖನ ಪ್ರಕಟಿಸುತ್ತಿದ್ದೇವೆ. ಅವರ ಆತ್ಮಕಥನ 'ನಾನು ನಡೆದು ಬಂದ ದಾರಿ' ಯಿಂದ. ಪಕ್ಷದ ನಿರ್ದೇಶನದಂತೆ ವಿಜಾಪುರಕ್ಕೆ ಬಂದ ಕಾಂ. ಎನ್.ಕೆ.ಯವರು ಆ ದಿನಗಳಲ್ಲಿ ಕ್ರಾಂತಿಕಾರಿ ಕೆಲಸ ಆರಂಭಿಸಿದ್ದು, ವಿಶೇಷವಾಗಿ ಬೀಡಿ ಕಾರ್ಮಿಕರ ಸಂಘಟನೆ-ಹೋರಾಟ ಇತ್ಯಾದಿಗಳ ರಾಜಕೀಯ ಕೆಲಸಗಳನ್ನು ನೆನಪಿಸಿಕೊಂಡಿದ್ದಾರೆ. ರಾಜಕೀಯ ಪ್ರಜ್ಞೆ ನೀಡಿದರೆ ಬೀಡಿ ಕಾರ್ಮಿಕರಂಥ ಅನಕ್ಷರಸ್ತ, ಅಸಂಘಟಿತರೂ ಕೂಡ ಹೇಗೆ ಕ್ರಾಂತಿಕಾರಿ ಕರ್ತವ್ಯ ನಿರ್ವಹಿಸಬಲ್ಲರು ಎಂಬುದು ಮನದಟ್ಟಾಗುತ್ತದೆ.

ಎನ್.ಕೆ.ಉಪಾಧ್ಯಾಯರ ಅಗಲಿಕೆ ನೆನಪು

ಬೀಡಿ ಕಾರ್ಮಿಕರ ನಡುವೆ



ಪಶ್ಚಿಮ ಬಂಗಾಳ ಸಚಿವರಾದ ಬಿನೋಯ್ ಕೃಷ್ಣ ಚೌಧರಿಯವರೊಂದಿಗ

ನಾನು ಬಿಜಾಪುರದಲ್ಲಿ ಪರಿಸ್ಥಿತಿಯ ಅಭ್ಯಾಸ ಮಾಡುತ್ತಾ ಜನಸಂಪರ್ಕ ಬೆಳೆಸುತ್ತಿದ್ದಂತೆಯೇ ಎಸ್. ಎಂ. ಬಾಲಸಿಂಗ್ ಮಾಸ್ತರ ಜೈಲಿನಿಂದ ಬಿಡುಗಡೆಯಾಗಿ ಬಂದ ಸುದ್ದಿ ತಿಳಿಯಿತು.

ಬಿಜಾಪುರ ನಗರದಲ್ಲಿ 5-6 ಬೀಡಿ ಕಾರ್ಖಾನೆಗಳು - ಆ ಕಾರ್ಖಾನೆಗಳಲ್ಲಿ ಮುಸ್ಲಿಂ ಮಹಿಳೆಯರೇ ಜಾಸ್ತಿ. ಗಂಡಸರಲ್ಲಿಯೂ ಮುಸಲ್ಮಾನರೇ ಹೆಚ್ಚು. 800ರಿಂದ 1000ದಷ್ಟು ಬೀಡಿ ಕೆಲಸಗಾರರಿದ್ದರು. ಬಾಲಸಿಂಗಮಾಸ್ತರರ ಪರಿಚಯವಾಗುವುದಕ್ಕಿಂತ ಮುಂಚೆಯೇ ಎಂ.ಎಂ. ಮಕಾನ್ ದಾರ, ರಾಜೇಸಾಬ ಬೇಗನಪಲ್ಲಿ, ಮೆಹಬೂಬ ಸಾಬ ನಾಸ್ ವಾಲೆ ಮೊದಲಾದ ಕೆಲವು ಬೀಡಿ ಕೆಲಸಗಾರರನ್ನು ಸಂಪರ್ಕಿಸಿದ್ದೆ. ಎಂ.ಎಂ. ಮಕಾನದಾರ ಅವರು ಸಾಂಗ್ಲೀಕರ ಬೀಡಿ ಕಾರ್ಖಾನೆಯ ಹತ್ತಿರ ಚಿಕ್ಕದೊಂದು ಬೀಡಿ - ಪಾನ್ ಅಂಗಡಿ ಇಟ್ಟಿದ್ದರು. ನಾನು ಹೆಚ್ಚು ಕಡಿಮೆ ದಿನಾಲೂ ಅವರ ಅಂಗಡಿಗೆ ಹೋಗಿ ಅವರಿಗೆ ರಾಜಕೀಯ ತಿಳಿದುಕೊಳ್ಳಬೇಕೆಂಬ ಆಸ್ಥೆ ಇದ್ದುದರಿಂದ ಅವರ ಜೊತೆಯಲ್ಲಿ ರಾಜಕೀಯ ವಿಷಯ ಚರ್ಚಿಸುತ್ತಾ ಬೀಡಿ ಕೆಲಸಗಾರರ ಸಂಘಟನೆ ಕುರಿತು ಚರ್ಚೆ ನಡೆಸಿದ ಫಲವಾಗಿ ಅವರು ಸಂಘ ಕಟ್ಟಲು ಮುಂದಾದರು. ಕೆಲಸಗಾರರು ಕಾರ್ಖಾನೆಗಳಲ್ಲಿ ಬೀಡಿಕಟ್ಟುತ್ತಿರುವಾಗಲೇ ನಾನು ಅವರ ಮಧ್ಯೆ ಕೂತು ರಾಜಕೀಯ ಮಾತುಗಳನ್ನಾಡುತ್ತಿದ್ದ. ಯೂನಿಯನ್ ಕುರಿತು ತಿಳಿಸುತ್ತಿದ್ದೆ. ಯುದ್ಧದ ನಂತರ ಕೆಂಪು ಸೈನ್ಯ ಹಿಟ್ಲರನ ನಾಝೀ ಸೈನಿಕರನ್ನು ಧೈರ್ಯದಿಂದ ಹಿಮ್ಮಟ್ಟಿಸಿದ ಕಥೆಗಳನ್ನು ಹೇಳುತ್ತಿದ್ದೆ. ಹಿಟ್ಲರ್ ಸೋತು ಸೋವಿಯತ್ ರಶ್ಯಾ ಗೆದ್ದರೆ, ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದರೆ ಬೀಡಿ ಕೆಲಸಗಾರರ ಜೀವನ ಯಾವ ರೀತಿ ಸುಧಾರಿಸಬಹುದೆಂದು ವಿವರಿಸುತ್ತಿದ್ದೆ. ತೆಲಂಗಾಣ ವೀರರ ಧೀರ ಹೋರಾಟಗಳನ್ನು ಹೇಳಿ ಹುರಿದುಂಬಿಸುತ್ತಿದ್ದೆ. ಮುಂಬಯಿಯಿಂದ ಪ್ರಕಟವಾಗುತ್ತಿದ್ದ 'ಪೀಪಲ್ಸ್ ವಾರ್' ಇಂಗ್ಲೀಷ್ ಪತ್ರಿಕೆಯ, 'ಯುಗಾಂತರ' ಮರಾಠಿ ಪತ್ರಿಕೆ, ಕನ್ನಡ ಪತ್ರಿಕೆಗಳ ಸುದ್ದಿಗಳನ್ನು ತಿಳಿಸಿ ಹೇಳುತ್ತಿದ್ದೆ. ಅರ್ಧ ಗಂಟೆಗೊಂದು ಸಲ ಒಂದು ಕಪ್ ಚಹಾ ಯಾರಾದರೂ ತರಿಸುತ್ತಿದ್ದರು. ಅದನ್ನು ಎರಡು ಮೂರು ಜನ ಕುಡಿಯುತ್ತಿದ್ದೆವು. ಹಾಗೆ ಮಾತನಾಡುತ್ತಿದ್ದಾಗ ಊಟದ ವೇಳೆಯಾದರೆ ಕಾರ್ಮಿಕರು ತಂದ ರೊಟ್ಟಿ, ಚಟ್ನಿ ಬುತ್ತಿಯನ್ನು ಬಿಚ್ಚುತ್ತಿದ್ದರು. ಎಲ್ಲರೂ ಕೂಡಿ ಊಟ ಮಾಡುತ್ತಿದ್ದೆವು.

ನಾನೂ ಸಹ ಭಾಗಿ

ಅದೊಂದು ವಿಚಿತ್ರ ಜೀವನವಾಗಿತ್ತು. ತಂಬಾಕಿನ ಖಾರವಾದ ವಾಸನೆ, ಎಲೆಯ ವಿಚಿತ್ರವಾದ ವಾಸನೆ, ಕೈಯಲ್ಲಿ ಕತ್ತರಿ ಹಿಡಿದು ಎಲೆ ಕತ್ತರಿಸುವ ಕೈಚಳಕ, ಕತ್ತರಿಸಿದ ಎಲೆಯಲ್ಲಿ ತಂಬಾಕು ತುಂಬಿ ಎರಡು ಬೆರಳುಗಳಿಂದ ಅದರ ಸುರುಳಿ ಸುತ್ತಿ ಎರಡನೇ ಬೆರಳಿನಲ್ಲಿರುವ ಉದ್ದವಾದ ಉಗುರಿನಿಂದ ಅದರ ಬಾಯಿ ಮುಚ್ಚಿ ದಾರದಿಂದ ಸುತ್ತಿವರಿಸುವ ವೈಖರಿ ನೋಡಲಿಕ್ಕೆ ಚಂದ. ಕೈ ಕೆಲಸ ಮಾಡುತ್ತಿರುವಾಗಲೇ ಮೈ ಅಲುಗಾಡಿಸುತ್ತಾ ಬಾಯಿಯಿಂದ ಮಾತು ಹೇಳುತ್ತಾ, ತಾನು ಯಾವುದೋ ಒಂದು ವಿಚಿತ್ರ ಜಗತ್ತಿನಲ್ಲಿದ್ದೇನೆಂದು ಬಾಯಿಯಿಂದ ಮಾತು ಹೇಳುತ್ತಾ ತಾನು ಯಾವುದೋ ಒಂದು ವಿಚಿತ್ರ ಜಗತ್ತಿನಲ್ಲಿದ್ದೇನೆಂದು ಭಾವಿಸುವ ಬೀಡಿ ಕೆಲಸಗಾರನಿಗೆ ಅವನ ಮಟ್ಟಿಗೆ ತನ್ನದೇ ಆದ ಜಗತ್ತು ನಿರ್ಮಾಣವಾದಂತೆಯೇ ಸರಿ. ಕೆಲಸ ಮಾಡುತ್ತಿರುವಾಗಲೂ ಬೀಡಿ ಕೆಲಸಗಾರರು ಏಕಾಗ್ರಚಿತ್ತರಾಗುತ್ತಾರೆ. ಅವರ ಕೈ ಕತ್ತರಿ, ಬೆರಳು, ಮೈ, ಬಾಯಿ, ಕಣ್ಣು ಎಲ್ಲಾ ಕೆಲಸದಲ್ಲೇ ಮಗ್ನವಾಗಿರುತ್ತವೆ. ಅವರ ಕೈ ಕತ್ತರಿ, ಬೆರಳು, ಮೈ, ಬಾಯಿ, ಕಣ್ಣು ಎಲ್ಲಾ ಕೆಲಸದಲ್ಲೇ ಮಗ್ನವಾಗಿರುತ್ತವೆ. ಅಂಥ ಪರಿಸ್ಥಿತಿಯಲ್ಲಿ ನಾನು ಹೇಳುವುದನ್ನು ಸರಿಯಾಗಿ ಕೇಳಿ ಅರ್ಥೈಸುತ್ತಿದ್ದಂತೆಯೇ ಜೊತೆಯಲ್ಲಿಯೇ ಬೀಡಿ ಕಟ್ಟುತ್ತಿದ್ದ ಅವರ ಏಕಾಗ್ರತೆಯನ್ನು ನಾನು ಬೇಧಿಸುತ್ತಿದ್ದೆ. ಅದರ ಪ್ರತಿಫಲವಾಗಿ ಬೀಡಿ ಕೆಲಸಗಾರರ ಬಲಿಷ್ಠ ಸಂಘಟನೆ ಕಟ್ಟಿದೆ. ಬೀಡಿ ಕೆಲಸಗಾರನ ವೈಶಿಷ್ಟ್ಯತೆಯನ್ನು ಇಲ್ಲಿ ಕಾಣಬಹುದಾಗಿದೆ. ಅವನ ದೃಷ್ಟಿನೇರವಾಗಿ ಕತ್ತರಿ, ಎಲೆ, ತಂಬಾಕುಗಳತ್ತ ಕೇಂದ್ರೀಕೃತವಾಗಿ ಬೆರಳುಗಳು ಬೀಡಿ ಸುತ್ತುತ್ತಿದ್ದಾಗ ಅವನ ಕಿವಿ ನಾವು ಹೇಳುವ ಮಾತುಗಳನ್ನು ಗಂಭೀರವಾಗಿಯೇ ಆಲಿಸುತ್ತಿತ್ತು. ಅದು ನಿಧಾನವಾಗಿ ಸಂಘಟನಾ ರೂಪತಾಳಿತು. ರಾಜಕೀಯದತ್ತ ಎಳೆಯಲ್ಪಟ್ಟಿತು.

ಆರೋಗ್ಯ ದೃಷ್ಟಿಯಿಂದ ನಮಗೆ ಸಂಕೋಚವಾದರೂ ಬೀಡಿ ಕೆಲಸಗಾರರಲ್ಲಿ ಬೆಳೆದು ಬಂದಿರುವ ಸಹೋದರತ್ವ, ಸಹಭಾಗಿತ್ವ ಬಹುತೇಕ ಅವರೆಲ್ಲಾ ಒಂದೆಡೆ ಕೂತು ಕೆಲಸ ಮಾಡುವುದರಿಂದ, ಕೂಡಿ ಚಹಾ ಕುಡಿಯುತ್ತಿರುವುದರಿಂದ, ಒಟ್ಟಾಗಿ ಒಂದೇ ತಾಟಿನಲ್ಲಿ ಊಟ ಮಾಡುತ್ತಿರುವುದರಿಂದ ರೂಢಿಯಾಗಿ ಬೆಳೆದು ಬಂದಿರಬೇಕು. ಅವರ ರೂಢಿಯಲ್ಲಿ ನಾನೂ ಕೂಡಾ ಸಹಭಾಗಿಯಾಗುತ್ತಿದ್ದೆ. ಮೊಹರಂ, ಬಕ್ರೀದ್‌ಗಳಂಥ ಹಬ್ಬ ಬಂದರೆ ಕನಿಷ್ಠ 15-20 ಬೀಡಿ ಕೆಲಸಗಾರರ ಮನೆಗಳಲ್ಲಿ ಊಟ ಮಾಡಲೇಬೇಕಾಗುತ್ತಿತ್ತು. ಕನಿಷ್ಟ ಶುರಕುಂಬವನ್ನಾದರೂ ಕುಡಿಯಬೇಕಾಗುತ್ತಿತ್ತು. ರೋಟಿ ತಿನ್ನಬೇಕಾಗುತ್ತಿತ್ತು.

ರಾಜಕೀಯ ಪ್ರಜ್ಞೆಯತ್ತ

ಬೀಡಿ ಕೆಲಸಗಾರರು ಬರೇ ಬೀಡಿ ಕೆಲಸಗಾರರಾಗಿಯೇ ಉಳಿಯಲಿಲ್ಲ. ಅವರೂ ಕಮ್ಯುನಿಸ್ಟ್ ತತ್ವಗಳನ್ನು ಅರಗಿಸಿಕೊಂಡು ಪಕ್ಷದ ಸದಸ್ಯರಾಗುತ್ತಿದ್ದರು. ಪಕ್ಷದ ಸದಸ್ಯರಾಗಿ ಮಾತ್ರ ಅವರು ಉಳಿಯಲಿಲ್ಲ. ನಗರದ ಸುತ್ತಮುತ್ತ ರೈತ ಸಂಘ ಕಟ್ಟಲಿಕ್ಕೆ ಸಹಾಯ ಮಾಡುತ್ತಿದ್ದರು. ತಮ್ಮ ಕೆಲಸ ಮುಗಿದ ನಂತರ ಅವಶ್ಯಕತೆ ಬಂದಾಗ 8-10 ಜನ ಬೀಡಿ ಕೆಲಸಗಾರರು ನಮ್ಮ ಜೊತೆಯಲ್ಲಿ 5-6 ಮೈಲಿ ನಡೆದುಕೊಂಡು ಸುತ್ತಲ ಹಳ್ಳಿಗಳಿಗೆ ಹೋಗಿ ರೈತ ಸಂಘ ಕಟ್ಟಲು ಸಹಾಯ ಮಾಡುತ್ತಿದ್ದರು. ಆ ರೀತಿ ರೈತ ಕಾರ್ಮಿಕರ ಸಖ್ಯತೆ ಬೆಸೆಯುತ್ತಿದ್ದರು. ಉದಾಹರಣೆಗೆ ಬಿಜಾಪುರ ನಗರದಿಂದ ಐದು ಮೈಲು ದೂರದ ಅತಾಲಟ್ಟಿ ಗ್ರಾಮದ ಶ್ರೀಮಂತ ಭೂಮಾಲಕ ರೈತರ ಮೇಲೆ ಸತತವಾಗಿ ಅನ್ಯಾಯ ಮಾಡಿ ಅವರನ್ನು ಒಕ್ಕಲೆಬ್ಬಿಸಿದಾಗ, ಆತನ ವಿರುದ್ಧ ನಡೆದ ಹೋರಾಟದಲ್ಲಿ ಬೀಡಿ ಕಾರ್ಮಿಕರ ಪಾತ್ರ ಮಹತ್ವದ್ದಾಗಿತ್ತು. ರೈತರ ಹೋರಾಟಕ್ಕೆ ಬೆನ್ನೆಲುಬಾಗಿ ನಿಂತ ಬೀಡಿ ಕೆಲಸಗಾರರು ಗೂಂಡಾಗಳ, ಪೊಲೀಸರ ಬೆದರಿಕೆಗಳಿಗೆ ಅಂಜದೆ ಧೈರ್ಯದಿಂದ ರೈತರಿಗೆ ಬೆಂಬಲ ನೀಡಿದರು. ಹಾಗೆಯೇ ಬಾಗೇವಾಡಿ ತಾಲೂಕಿನ ಗಣದೇಸಾಯಿ ಅವರ ದಬ್ಬಾಳಿಕೆಯ ವಿರುದ್ಧ, ಅಂಕಲಗಿ, ಉಕ್ಕಲಿಗಳಲ್ಲಿ ರೈತರ ಸಂಘಟನೆಗೂ ಆಗಾಗ ಬಂದು ಸಹಾಯ ಮಾಡುತ್ತಿದ್ದರು. ತಮ್ಮ ಉಪ ಜೀವನದ ಬೀಡಿ ಕೆಲಸ ಬಿಟ್ಟು ಹಲವಾರು ದಿವಸ ಹೋರಾಟಗಳಲ್ಲಿ ಧುಮುಕಿದ್ದರು. ಹಾಗೆಯೇ ಇನ್ನೂ ಹಲವಾರು ರೈತ ಹೋರಾಟಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು.

ಬೀಡಿ ಕಟ್ಟುವ ಹೆಣ್ಣುಮಕ್ಕಳು ನಡು ಬಜಾರಿನಲ್ಲಿ ಮೆರವಣಿಗೆ ತೆಗೆಯುವುದು ಹಳೇ ಸಂಪ್ರದಾಯವಾದಿಗಳಿಗೆ ಹಿಡಿಸುತ್ತಿರಲಿಲ್ಲ. ಬೀಡಿ ಕೆಲಸಗಾರರ ಐಕ್ಯತೆ ಮುರಿಯಲು ನಾನಾ ರೀತಿಯ ಪ್ರಯತ್ನಗಳು ನಡೆಯುತ್ತಿದ್ದವು. ಆದರೆ ಅವರ ಐಕ್ಯತೆಯನ್ನು ಮುರಿಯಲು ಸಾಧ್ಯವಾಗಲಿಲ್ಲ. ಒಂದು ಸಲ ಬಾಕ್ಸರ್ ಸಾಬ ಎಂಬ ಗೂಂಡಾನ ಮೂಲಕ ಒಗ್ಗಟ್ಟು ಮುರಿಯಲು, ಮುಷ್ಕರ ವಿಫಲಗೊಳಿಸಲು ಮಾಲಿಕರು ಪ್ರಯತ್ನ ಮಾಡಿದಾಗ ಅವರ ಕಾಲು ಮುರಿದು ಬನ್ನಿ ಎಂದು ನಾನು ಹೇಳಿದ ನಂತರ ಕೆಲವರು ಹಾಗೆಯೇ ಮಾಡಿ ಅವನನ್ನು ಗಟಾರಿನಲ್ಲಿ ಒಗೆದ ನಂತರ ಅವ ಸಾಯುವ ತನಕ ನನ್ನ ಶಿಷ್ಯನಾಗಿ ಪಕ್ಷದ ನಿಷ್ಠಾವಂತ ಕಾರ್ಯಕರ್ತನಾಗಿ ಉಳಿದ ಮಾತ್ರವಲ್ಲ, ಪಕ್ಷದ ಚಟುವಟಿಕೆಗಳನ್ನು ಹೋರಾಟಗಳನ್ನು ತಿಳಿದುಕೊಳ್ಳುವ ಸಲುವಾಗಿ ಪ್ರತಿ ವಾರ ಪಕ್ಷದ ಮರಾಠಿ ಪತ್ರಿಕೆ 'ಯುಗಾಂತರ', ಕನ್ನಡದ 'ಅರುಣ', ಇಂಗ್ಲೀಷ್ 'ಪೀಪಲ್ಸ್ ವಾರ್' ಪತ್ರಿಕೆಗಳನ್ನು ಕೊಂಡುಕೊಂಡು ಅವುಗಳನ್ನು ಬೇರೆಯವರಿಂದ ಓದಿಸಿ ತಾನು ಸ್ವತಃ ತಿಳಿದುಕೊಳ್ಳುವುದು ಮಾತ್ರವಲ್ಲ ಬೇರೆ ಜನರಿಗೂ ಪ್ರಚಾರ ಮಾಡುತ್ತಿದ್ದ. ಬಿಜಾಪುರದ ಅಂದಿನ ಬೀಡಿ ಕೆಲಸಗಾರರ ಹೋರಾಟಗಳು ಇತರ ಜಿಲ್ಲೆಗಳಲ್ಲಿ, ಹಾಗೆಯೇ ನೆರೆಯ ಸೋಲಾಪುರ ಜಿಲ್ಲೆಯಲ್ಲಿಯೂ ಹೆಚ್ಚಿನ ಪ್ರಭಾವ ಬೀರಿ ಅಲ್ಲಿಯ ಸಂಘಟನೆಗೂ ಸಹಾಯವಾಗುತ್ತಿದ್ದವು.

ಇತರರಿಗಾಗಿಯೂ

ಬಿಜಾಪುರದ ಬೀಡಿ ಕೆಲಸಗಾರರು ತಮ್ಮ ಸ್ವಂತ ಹಿತಕ್ಕಾಗಿ ಮಾತ್ರ ಹೋರಾಡಿಲ್ಲ. ಜಿಲ್ಲೆಯಲ್ಲಿನ ರೈತ ಸಂಘಟನೆಗೆ ಸಹಾಯ ಮಾಡಿದ್ದು ಮಾತ್ರವಲ್ಲ, ದೂರದ ಕಾರವಾರಕ್ಕೆ ಹೋಗಿ ಪ್ರತಿಬಂಧಕಾಜ್ಞೆ ಇದ್ದರೂ ರೈತ ಸಮಾವೇಶದಲ್ಲಿ ಭಾಗವಹಿಸಿ ಪೊಲೀಸರಿಂದ ಬಂಧಿತರಾಗಿ ಜೈಲಿನಲ್ಲಿದ್ದು, ರೈತರಿಗೆ ಭೂಮಿಯ ಹಕ್ಕು ಕೊಡಿಸಲು ಅವರು ಭೂಮಾಲಿಕನಿಗೆ ಕೊಡುವ ಪಾಲನ್ನು ಕಡಿಮೆಗೊಳಿಸಲು ಎಂಥ ಹೋರಾಟಕ್ಕೂ ಸಿದ್ಧವೆಂಬುದನ್ನು ತೋರ್ಪಡಿಸಿದ್ದಾರೆ.

ರಾಜಕೀಯ ಚಟುವಟಿಕೆಗಳಲ್ಲೂ ಬಿಜಾಪುರದ ಬೀಡಿ ಕೆಲಸಗಾರರು ಹಿಂದೆ ಬಿದ್ದಿಲ್ಲ. ಅವರು ತಮ್ಮ ಚರಿತ್ರಾರ್ಹ ನಿಷ್ಠೆಯಿಂದಲೇ ಭಾಗವಹಿಸುತ್ತಿದ್ದರು.

ಕಮ್ಯುನಿಸ್ಟ್ ಪಕ್ಷದ ಮುಖಂಡರ ರಕ್ಷಣೆಯಲ್ಲಿಯೂ ಬೀಡಿ ಕಾರ್ಮಿಕರ ಸೇವೆ ಅಪಾರವಾಗಿತ್ತು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಿದ್ದು 15 ಆಗಸ್ಟ್ 1947ರಲ್ಲಿ. ಆಗಿನ ಸ್ವತಂತ್ರ ಭಾರತದ ನೆಹರೂ ಸರಕಾರ (ಕಮ್ಯೂನಿಸ್ಟರ ಕಟ್ಟಾ ವಿರೋಧಿ ವಲ್ಲಭಬಾಯಿ ಪಟೇಲರು ಆಗ ಗೃಹಮಂತ್ರಿ) ಕಮ್ಯೂನಿಸ್ಟರನ್ನು ಬಂಧಿಸುವ ಕ್ರಮ ಕೈಗೊಂಡಿತು. ದೇಶಾದ್ಯಂತ ಸಾವಿರಾರು ಕಮ್ಯುನಿಸ್ಟ್ ಮುಖಂಡರ ಬಂಧನವಾಯಿತು. ಬಿಜಾಪುರದಲ್ಲಿಯೂ ನನ್ನನ್ನು ಬಾಲಸಿಂಗ ಮಾಸ್ತರನ್ನೊಳಗೊಂಡು ಕೆಲವರನ್ನು ಬಂಧಿಸುತ್ತಾರೆಂಬ ಸುದ್ದಿ ತಿಳಿದಿತ್ತು. ಬಾಲಸಿಂಗ ಮಾಸ್ತರರನ್ನು ಮೈಸೂರಿಗೆ ಕಳಿಸಿದೆವು. ಅಲ್ಲಿ ಬೀಡಿ ಕೆಲಸಗಾರರು ಮತ್ತು ಪಕ್ಷ ಅವರಿಗೆ ಆಶ್ರಯ ನೀಡಿತು. ನಾನು ಬಿಜಾಪುರದಲ್ಲೇ ಇದ್ದು ಪೋಲೀಸರಿಂದ ತಲೆ ತಪ್ಪಿಸಿಕೊಂಡಿದ್ದೆ. ನನಗೆ, ಬೀಡಿ ಕೆಲಸಗಾರರು, ಮುನಿಸಿಪಲ್ ಕೆಲಸಗಾರರು ಹಾಗೆಯೇ ಹಳ್ಳಿಯ ರೈತರು ರಕ್ಷಣೆ ನೀಡಿದರು. ಬಂಧನದ ವಾರೆಂಟನ್ನು ತಪ್ಪಿಸಿಕೊಂಡು ಪೊಲೀಸರ ಕಣ್ಣು ತಪ್ಪಿಸಬೇಕಾದರೆ ವೇಷ ಬದಲಾಯಿಸಿಕೊಳ್ಳಬೇಕು. ಬೇರೆ ಹೆಸರು ಇಟ್ಟುಕೊಳ್ಳಬೇಕು. ಹಗಲು ಹೊತ್ತು ಗುಡಿಸಲಿನಲ್ಲಿಯೋ, ಮನೆ, ಮಠ, ಮಸೀದಿಗಳಲ್ಲಿಯೋ ಇರಬೇಕು. ರಾತ್ರಿ ಹೊತ್ತು ಸಭೆ, ವಿಚಾರ ವಿನಿಮಯದಂಥ ಪಕ್ಷದ, ಯೂನಿಯನ್ನಿನ ಚಟುವಟಿಕೆಗಳನ್ನು ನಡೆಸಬೇಕು. ನಮಗೆ ಆ ರೀತಿ ಆಶ್ರಯ ಕೊಡುವವರಿಗೆ ತಿಳುವಳಿಕೆ ಅಗತ್ಯ. ಮನೆಯಲ್ಲಿ ಹೊಸಬರು ಯಾರೆಂದು ನೆರೆಹೊರೆಯವರು ಸಹಜವಾಗಿಯೇ ಕೇಳುತ್ತಾರೆ. ಅಗತ್ಯ ಬಿದ್ದಾಗ ಹಗಲು ಹೊತ್ತಿನಲ್ಲಿಯೇ ಪಕ್ಷದವರು ಭೇಟಿಗೆ ಬರಬಹುದು. ಈ ರೀತಿ ಅದರ ಯಾರಿಗಾದರೂ ಸಂಶಯ ಬಂದು ಪೊಲೀಸರಿಗೆ ಸುದ್ದಿ ತಲುಪಿಸಬಹುದು. ಆದ್ದರಿಂದ

ಇರಾಕ್ : ಶಸ್ತ್ರ ಪರೀಕ್ಷೆಗೆಂದು ತಂಡ – ನಿಲ್ಲದ ಅಮೆರಿಕಾ ಪ್ರಚೋದನೆ

ತೈಲಸಂಪದ್ಭರಿತ ರಾಷ್ಟ್ರವಾಗಿರುವ ಇರಾಕನ್ನು ಕಬಳಿಸಲು ಹೊಂಚು ಹಾಕಿಯೇ ಯುದ್ಧ ಸಾರಿರುವ ಅಮೆರಿಕಾ ವಿಶ್ವಸಂಸ್ಥೆಯ ಮೂಲಕ ಶಸ್ತ್ರಾಸ್ತ್ರ ತಪಾಸಣೆಗೆ ಹೊರಟಿದೆ. ಅದಕ್ಕೆ ಅಡ್ಡಗಾಲು ಹಾಕಲು ಹಲವು ಪ್ರಚೋದನಾ ಕ್ರಮ ಕೈಗೊಂಡಿದೆ.

ಇರಾಕ್ ಮೇಲೆ ಅಮೇರಿಕದ ಯುದ್ಧ ಮಾಡುವ ಯೋಜನೆ, ಭದ್ರತಾ ಸಮಿತಿ ನಿರ್ಣಯದೊಂದಿಗೆ ಒಂದು ಹೊಸ ಹಂತ ತಲ್ಲುಪಿದೆ. ಸುಮಾರು ಎರಡು ತಿಂಗಳುಗಳ ಚೌಕಾಶಿಯ ನಂತರ ಅಮೇರಿಕ ಮತ್ತು ಬ್ರಿಟನ್‌ಗಳು ಬದಲಿ ನಿರ್ಣಯದ ಕರಡು ಮಂಡಿಸಿದವು. ಭದ್ರತಾ ಸಮಿತಿ ಇದನ್ನು ನಿರ್ಣಯ 1441 ಆಗಿ ಅಂಗೀಕರಿಸಿದವು. ಭದ್ರತಾ ಸಮಿತಿಯಲ್ಲಿ ಈ ನಿರ್ಣಯ ಮಂಜೂರು ಮಾಡಿಸಲು ಅಧ್ಯಕ್ಷ ಬುಶ್‌ರ ಸರ್ಕಾರ ತನ್ನ ಬತ್ತಳಿಕೆಯಲ್ಲಿರುವ ಎಲ್ಲಾ ಬಾಣಗಳನ್ನು ಬಳಸಿತು. ಬೆದರಿಕೆ, ಆರ್ಥಿಕ ಸಹಾಯ ಕಡಿತ, ಆಮಿಷ ಇತ್ಯಾದಿ. ಈ ನಿರ್ಣಯದಿಂದ ಇರಾಕ್ ಬಗ್ಗೆ ಭದ್ರತಾ ಸಮಿತಿಯಲ್ಲಿ ಒಮ್ಮತ ಮೂಡಿದೆ ಎಂದಲ್ಲ. ಅಥವಾ ಇರಾಕ್ ಮೇಲೆ ಅಮೆರಿಕಾ ಯುದ್ಧ ಹೂಡಲು ಅನುಮತಿ ಕೊಟ್ಟಿದೆ ಎಂದಲ್ಲ.

ಶಸ್ತ್ರಾಸ್ತ್ರ ಪರೀಕ್ಷಣಾ ತಂಡ ಕಳಿಸಲು ನಿರ್ಣಯ

ಅಮೇರಿಕ ಮತ್ತು ಅದರ ಬಾಲಬಡುಕ ಬ್ರಿಟನ್‌ಗೆ ಇರಾಕ್ ಮೇಲೆ ಯುದ್ಧ ಹೂಡಲು ವಿಶ್ವಸಂಸ್ಥೆಯ 'ಲೈಸೆನ್ಸ್' ಪಡೆಯುವ ಪ್ರಯತ್ನವಷ್ಟೆ. ಆದರೆ ಇತರ ಎಲ್ಲಾ ದೇಶಗಳಿಗೆ ಇದು ಇರಾಕ್ ಮೇಲೆ ಯುದ್ಧ ನಿಲ್ಲಿಸುವ ಪ್ರಯತ್ನದ ಭಾಗ. ಇರಾಕ್ ಬಳಿ ಅಣು- ಜೈವಿಕ- ರಾಸಾಯನಿಕ ಶಸ್ತ್ರಾಸ್ತ್ರಗಳಿವೆ ಎಂಬ ಅಮೇರಿಕನ್ ಆಪಾದನೆ ಬಗ್ಗೆ ತನಿಖೆ ನಡೆಸಿ, ಅಮೇರಿಕಾಕಕ್ಕೆ ಯುದ್ಧ ಹೂಡುವ ನೆಪಕ್ಕೆ ಅವಕಾಶ ನೀಡದಿರುವ ಪ್ರಯತ್ನ. ಇದಕ್ಕಾಗಿ ಇತರ ಶಾಶ್ವತ ಸದಸ್ಯರಾದ ಫ್ರಾನ್ಸ್, ರಷ್ಯಾ, ಚೀನಾಗಳು ಪ್ರಯತ್ನಿಸಿದವು. ಮೊದಲು ಯಾವುದೇ ನಿರ್ಣಯ ಬರದಂತೆ ತೀವ್ರ ಪ್ರತಿರೋಧ ಒಡ್ಡಿದವು. ಯುದ್ಧಕ್ಕೆ ಹೋಗಲು ಅಮೇರಿಕಾಕ್ಕೆ ಅವಕಾಶ ಮಾಡಿ ಕೊಡುವ ಯಾವುದೇ ರೀತಿಯ ನಿರ್ಣಯವನ್ನು ಮಂಜೂರು ಮಾಡಲು ಅವು ನಿರಾಕರಿಸಿದವು. ಅವರ ಒತ್ತಡಕ್ಕೆ ಮಣಿದು ಅಮೇರಿಕ, ಬ್ರಿಟನ್‌ಗಳು ಬದಲಿ ನಿರ್ಣಯ ಮಂಡಿಸಿದವು.

ಈಗ ಭದ್ರತಾ ಸಮಿತಿ ಅಂಗೀಕರಿಸಿರುವ ನಿರ್ಣಯ 1441 ರ ಪ್ರಕಾರ ಇರಾಕ್ ಶಸ್ತ್ರಾಸ್ತ್ರ ಪರೀಕ್ಷಣೆಗೆ ತಂಡವೊಂದಕ್ಕೆ ಅವಕಾಶ ಮಾಡಿಕೊಡಬೇಕು. 30 ದಿನಗಳೊಳಗಾಗಿ ಇರಾಕ್ ತನ್ನ ಬಳಿ ಇರುವ ಮತ್ತು ಯೋಜನೆ ಶಸ್ತ್ರಾಸ್ತ್ರ ಕಾರ್ಯಕ್ರಮಗಳ ಬಗ್ಗೆ ತಿಳಿಸಬೇಕು. 60 ದಿನಗಳೊಳಗಾಗಿ ಪರೀಕ್ಷಣಾ ತಂಡ ತನ್ನ ಕೆಲಸ ಮುಗಿಸಿ ತನ್ನ ವರದಿ ಕೊಡಬೇಕು. ತಂಡದ ವರದಿ ಆಧಾರದ ಮೇಲೆ ಭದ್ರತಾ ಸಮಿತಿ ನಿರ್ಧಾರವನ್ನು ಕೈಗೊಳ್ಳುವುದು.

ಪರೀಕ್ಷಣಾ ತಂಡ ಇರಾಕ್‌ನಲ್ಲಿ

ಇರಾಕ್ ಮೊದಲು ಈ ನಿರ್ಣಯದ ಬಗ್ಗೆ ಪ್ರತಿಭಟನೆ ಸೂಚಿಸಿತಾದರೂ, ಯುದ್ಧ ಮತ್ತು ಇರಾಕ್ ಜನತೆಗೆ ಅಪಾರ ಸಂಕಷ್ಟ ತಡೆಯುವ ಕೊನೆಯ ಉಪಾಯವಾಗಿ ಭದ್ರತಾ ಸಮಿತಿ ನಿರ್ಣಯ ಒಪ್ಪಿಕೊಳ್ಳಲು ನಿರ್ಧರಿಸಿತು. ಈಗಾಗಲೇ ಭದ್ರತಾ ಸಮಿತಿ ನೇಮಿಸಿದ ಶಸ್ತ್ರಾಸ್ತ್ರ ಪರೀಕ್ಷಣಾ ತಂಡ ಇರಾಕ್ ತಲುಪಿದೆ. ತನ್ನ ಕೆಲಸ ಆರಂಭಿಸಿದೆ. ಈ ತಂಡಕ್ಕೆ ಇರಾಕ್ ಒಳಗೆ- ಅಧ್ಯಕ್ಷ ಸದ್ದಾಂ ಹುಸೇನ್‌ರ ಅರಮನೆ ಸೇರಿದಂತೆ- ಎಲ್ಲಾದರೂ ಪರೀಕ್ಷಣೆ ನಡೆಸುವ ಅಧಿಕಾರ ಕೊಡಲಾಗಿದೆ. ತಂಡದ ಭದ್ರತೆಗೆ ವಿಶ್ವಸಂಸ್ಥೆ ಪಡೆ ಇರುತ್ತದೆ. ತಂಡ ಈಗಾಗಲೇ ತನ್ನ ಕೆಲಸ ಆರಂಭಿಸಿದೆ.

ಬುಶ್ ರಣಭೇರಿ ಇನ್ನೊಂದು ಕಡೆ

ಆಗಲೇ ಬುಶ್ ಸರ್ಕಾರದ ಹಲವು ವಕ್ತಾರರು ಅವರ ಸರ್ಕಾರವೇ ಮಂಜೂರು ಮಾಡಿದ ನಿರ್ಣಯ ಉಲ್ಲಂಘಿಸುವ(ಅಗತ್ಯಬಿದ್ದರೆ) ಮಾತಾಡುತ್ತಿದ್ದಾರೆ. ಬೇರೆ ಬೇರೆ ರೀತಿಯಲ್ಲಿ ಯುದ್ಧ ಅನಿವಾರ್ಯ ಎನ್ನುವಂತೆ ಮಾತನಾಡುತ್ತಿದ್ದಾರೆ. ಬುಶ್ ಸರ್ಕಾರಕ್ಕೆ ಈ ತಂಡಕ್ಕೆ ಇರಾಕ್‌ನಲ್ಲಿ ಅಣು-ಜೈವಿಕ-ರಾಸಾಯನಿಕ ಶಸ್ತ್ರಾಸ್ತ್ರ ಸಿಗದಿರುವ ಬಗ್ಗೆ 'ಭಯ' ಇದೆ. ಅದಕ್ಕಾಗಿ ಒಂದು ಕಡೆ ಬುಶ್ ಸರ್ಕಾರದ ವಕ್ತಾರರು ಈಗಾಗಲೇ ತಮ್ಮ ಬಳಿ ಜತೆ ಸಹಕರಿಸದಂತೆ ತಡೆಯಲು, ಹಲವು ರೀತಿಯ ಪ್ರಚೋದನೆಗಳನ್ನು ಮಾಡಿತು. ತಂಡ ಇರಾಕ್ ತಲುಪುತ್ತಿದ್ದಂತೆ ಅಮೇರಿಕ - ಬ್ರಿಟನ್ ಯುದ್ಧ ವಿಮಾನಗಳು ಇರಾಕ್ ಮೇಲೆ ದಾಳಿ ಮಾಡಿದವು. ಆ ದಾಳಿಗೆ ಇರಾಕ್ ಪ್ರತಿರೋಧ ಒಡ್ಡಿದ್ದನ್ನು ಇರಾಕ್ ಬಳಿ ಮಾರಕ ಶಸ್ತ್ರಾಸ್ತ್ರ ಇರುವುದರ ಬಗ್ಗೆ ಪುರಾವೆ ಎಂದಿತು! ಇದೇ ರೀತಿ ತಂಡದ ಕೆಲವು ಸದಸ್ಯರು ಮಿತಿಮೀರಿದ ದುರ್ವತನೆಯಿಂದ ಇರಾಕ್ ಸರ್ಕಾರವನ್ನು ಅಸಹಕಾರ ತೋರುವ ಮಟ್ಟಕ್ಕೆ ಪ್ರಚೋದಿಸಲು ಪ್ರಯತ್ನಿಸಿದ್ದಾರೆ ಎಂದು ವರದಿಯಾಗಿದೆ.

ಏನೀ ಯುದ್ಧ?

ಒಂದು ರೀತಿಯಲ್ಲಿ ಅಮೇರಿಕ-ಬ್ರಿಟನ್ ಈಗಾಗಲೇ ಯುದ್ಧ ಆರಂಭಿಸಿದೆ ಎಂದು ಕೆಲವು ವೀಕ್ಷಕರು ಅಭಿಪ್ರಾಯಪಟ್ಟಿದ್ದಾರೆ. 2001ರಲ್ಲಿ ಅಮೇರಿಕ-ಬ್ರಿಟನ್‌ನ ವಿಮಾನಗಳು ಸರಾಸರಿ 9 ಟನ್ನು ಬಾಂಬನ್ನು ಪ್ರತಿ ತಿಂಗಳು ಸುರಿದರೆ, ಈ ವರ್ಷ (2002ರಲ್ಲಿ) ಸರಾಸರಿ 14 ಟನ್ನು ಪ್ರತಿ ತಿಂಗಳು ಈಗಾಗಲೇ ಸುರಿದಿದೆ.

ಶಸ್ತ್ರಾಸ್ತ್ರ ಪರೀಕ್ಷೆಗೆ ಒಂದು ಕಡೆ- ಬುಶ್ ರಣಭೇರಿ ಇನ್ನೊಂದೆಡೆ ಇರಾಕ್ ಮೇಲೆ ಯುದ್ಧ ಬೇಡ! ಬುಶ್ ತೊಲಗು!!

ಸದ್ದಾಂ ಹುಸೇನರ ಶಸ್ತ್ರಾಸ್ತ್ರ ಕಾರ್ಯಕ್ರಮಗಳ ಬಗ್ಗೆ ಪುರಾವೆ ಇದೆ ಎಂದಿದೆ. ಇನ್ನೊಂದು ಕಡೆ ಪರೀಕ್ಷಣಾ ತಂಡದ ನೈಪುಣ್ಯತೆ ಬಗ್ಗೆ ಬೇಕೆಂದರು ಕೆಸರು ಚೆಲ್ಲುತ್ತಿದೆ. ತಂಡದ ನಾಯಕ ಬ್ಲಿಕ್ಸ್ ಸಾಕಷ್ಟು ಅಮೇರಿಕರನ್ನು ತಂಡದಲ್ಲಿ ಒಯ್ಯಲು ನಿರಾಕರಿಸಿತು ಎಂದು ಆಪಾದಿಸಿದೆ. ಇನ್ನೊಂದು ಕಡೆ ಸದ್ದಾಂ ಹುಸೇನ್ ತನ್ನ ಶಸ್ತ್ರಾಸ್ತ್ರಗಳನ್ನು 'ಮೊಬೈಲ್ ಫಾಕ್ಟರಿ'ಗಳಲ್ಲಿ ಬಚ್ಚಿಟ್ಟಿದ್ದಾನೆ. ಅದು ತಂಡಕ್ಕೆ ಸಿಗಲ್ಲ ಎಂಬ ರಾಗ ಹಾಡುತ್ತಿದ್ದಾರೆ. ತಂಡಕ್ಕೆ ಏನೂ ಸಿಗದಿದ್ದರೂ ನಿರ್ಣಯ 1441 ರ ಪ್ರಕಾರ ಅಮೇರಿಕಾಕ್ಕೆ ಏಕಪಕ್ಷೀಯವಾಗಿ (ಭದ್ರತಾ ಸಮಿತಿಯ ನಿರ್ಣಯಕ್ಕೆ ಕಾಯದೆ) ಬಲಪ್ರಯೋಗ ಮಾಡುವ ಹಕ್ಕು ಇದೆ ಎಂದು ಹೇಳಿದ್ದಾರೆ. ಅಮೇರಿಕಕ್ಕೆ ಇರಾಕ್ ನಿರ್ಣಯವನ್ನು ಯಾವುದೇ ರೀತಿಯಲ್ಲಿ 'ಉಲ್ಲಂಘಿಸಿದೆ' ಎಂದು ಕಂಡುಬಂದರೆ, ಅದು ಯುದ್ಧ ಆರಂಭಿಸುವುದು ಎಂದು ಹೇಳಿದೆ.

ಇರಾಕ್ ಸರ್ಕಾರವನ್ನು ಪರೀಕ್ಷಣಾ ತಂಡದ

ಅಮೇರಿಕಾ-ಬ್ರಿಟನ್‌ಗಳು ಈಗಲೇ ಇರಾಕ್ ಮೇಲೆ ಯುದ್ಧ ಸಾರಬೇಕೆಂದಿವೆ. ಇದಕ್ಕೆ ಪೂರ್ಣಪ್ರಮಾಣದ ತಯಾರಿ ನಡೆದಿದೆ. ಬೇರೆ ಯಾವುದೇ ಅರಬ್ ದೇಶ ಅಮೇರಿಕದ ಯುದ್ಧ ವಿಮಾನ- ಸೈನ್ಯಕ್ಕೆ ನೆಲೆ ಕೊಡಲು ನಿರಾಕರಿಸುತ್ತಿದ್ದರೂ, ಟರ್ಕಿ ಇದಕ್ಕೆ ಮುಂದೆ ಬಂದಿದೆ. ಅಮೇರಿಕಾದ ನಿಕಟ ಸಹವರ್ತಿ ಸೌದಿ ಅರೇಬಿಯಾ, ಕುವೈತ್‌ಗಳು ನಿರಾಕರಿಸಿವೆ. ಅಮೇರಿಕ ಮತ್ತು ಯುರೋಪುಗಳಲ್ಲಿ ಲಕ್ಷಾಂತರ ಜನ ಬೀದಿಗೆ ಇಳಿದು ಇರಾಕ್ ಮೇಲೆ ಯುದ್ಧಕ್ಕೆ ಪ್ರತಿಭಟಿಸಿದ್ದಾರೆ. ಸಾಮಾನ್ಯವಾಗಿ ಅಮೇರಿಕಾದ ಹಾದಿ ತುಳಿಯುವ, ವಿಶ್ವಸಂಸ್ಥೆ ಪ್ರಧಾನ ಕಾರ್ಯದರ್ಶಿ ಕೋಫಿ ಅನ್ನನ್ ಕೂಡ, ನಿರ್ಣಯ 1441 ಅಮೇರಿಕಾಕ್ಕೆ ಏಕಪಕ್ಷೀಯವಾಗಿ ಯುದ್ಧ ಸಾರಲು ಅವಕಾಶ ಕೊಡುವುದಿಲ್ಲ ಎಂದು ಪದೇ ಪದೇ ಎಚ್ಚರಿಸಿದ್ದಾರೆ.



ಯುದ್ಧ ನಡೆದೀತೆ?

ಇವೆಲ್ಲದರ ಹಿನ್ನೆಲೆಯಲ್ಲಿ ಅಮೇರಿಕ ಮುಂದಿನ ದಿನಗಳಲ್ಲಿ ಏನು ಮಾಡುವುದು ಎಂಬುದರ ಮೇಲೆ ವಿಶ್ವಶಾಂತಿಯ ಭವಿಷ್ಯ ನಿಂತಿದೆ. ಪರೀಕ್ಷಣಾ ತಂಡ ತನ್ನ ಕೆಲಸ ಮುಗಿಯುವವರೆಗೆ ಅದು ಕಾಯುವುದೆ? ಇರಾಕ್ ತಾಳ್ಮೆಗೆಟ್ಟು ಅಸಹಕಾರ ತೋರಬಹುದು ಎಂದು ಕಾದಿದೆಯೆ? ಅಥವಾ ಪರೀಕ್ಷಣಾ ತಂಡ (ಕಳೆದ ಬಾರಿಯಂತೆ) ಯುದ್ಧ ಹೂಡಲು ಗೂಢಚಾರ ಮಾಹಿತಿ ಸಂಗ್ರಹಿಸಲು ಬಳಸುವುದೇ! ಪರೀಕ್ಷಣಾ ತಂಡದ ವರದಿ ಬಂದ ಮೇಲೆ ಭದ್ರತಾ ಸಮಿತಿಗೆ ಹಿಂದಿನಂತೆ ಒಪ್ಪಂದ ಹಾಕಿ 'ಲೈಸೆನ್ಸ್' ಪಡೆದು ಯುದ್ಧ ಸಾರುವುದೇ? ಕಾದು ನೋಡಬೇಕಾಗಿದೆ. ಈ ನಡುವೆ ಒಸಾಮಾ ಬಿನ್ ಲಾಡೆನ್ ಸತ್ತಿಲ್ಲ ಎಂದು ಆತ ಅಲ್‌ಅಜೀದಾ' ಟಿವಿ ಸಾದರಪಡಿಸಿದ ಟೇಪ್‌ನಿಂದ ಸಾದರಪಟ್ಟಿದ್ದು, ಅಮೇರಿಕಾಕ್ಕೆ ಮುಖಭಂಗವಾಗಿದೆ. 'ಭಯೋತ್ಪಾದನೆ ಮೇಲೆ ನಿಲ್ಲದ ಯುದ್ಧ' ತಣ್ಣಗಾಗುತ್ತಾ ನಡೆದಿದೆ. ಇತ್ತೀಚೆಗೆ ಅಮೇರಿಕಾದಲ್ಲಿ ನಡೆದ ಪಾರ್ಲಿಮೆಂಟರಿ ಚುನಾವಣೆಯಲ್ಲಿ ರಿಪಬ್ಲಿಕನ್‌ಗೆ ಜಯ ಸಿಕ್ಕಿದ್ದು ಮಾತ್ರ, ಬುಶ್ ಅನ್ನು ಆ ದೇಶದೊಳಗೆ ಕಾನೂನುಬದ್ಧವಾಗಿ ತಡೆಯುವ ಯಾವುದೇ ಸಂಸ್ಥೆ ಇಲ್ಲದಂತೆ ಮಾಡಿದೆ. ಇರಾಕ್ ಮೇಲೆ ಯುದ್ಧದ ಅಪಾಯ ಪೂರ್ಣವಾಗಿ ಈ ರೀತಿ ಜೀವಂತವಾಗಿದೆ. ಪ್ರಬಲ ವಿಶ್ವವ್ಯಾಪಿ ಯುದ್ಧ ವಿರೋಧಿ ಆಂದೋಲನ ಮಾತ್ರ ಯುದ್ಧ ತಡೆಬಹುದು.

- ಶರತ್‌ಚಂದ್ರ

ಎನ್.ಕೆ. ನೆನಪು............

ಪುಟ 14 ರಿಂದ


ಆಶ್ರಯ ಕೊಡುವವರು ಬಹಳ ಹುಷಾರಾಗಿರಬೇಕು. ಎರಡನೇ ಸಲ ನಾನು ಪೊಲೀಸರಿಗೆ ಸಿಕ್ಕಿಬೀಳುವ ಪರಿಸ್ಥಿತಿ ಉಂಟಾದದ್ದು ಹಾಗೆಯೇ.

ಪೋಲೀಸರ ಧಾಳಿ ಎದುರಿಸಿ

ಸಾಧಾರಣ ದೊಡ್ಡದಾಗಿರುವ ಬೀಡಿ ಕೆಲಸಗಾರರ ಮನೆಯಲ್ಲಿ ಕೆಲವು ಸಲ ರಾತ್ರಿ ಪಕ್ಷದ ಅಥವಾ ಪ್ರಮುಖ ಬೀಡಿ ಕೆಲಸಗಾರರ ಸಭೆ ನಡೆಸುವ ಪರಿಪಾಠ ಇತ್ತು. ಬೀಡಿ ಕೆಲಸಗಾರರ ಪ್ರಮುಖ ವಾಸದ ಪ್ರದೇಶವಾದ ಶಹಾಪುರ ಅಗಸಿಯಲ್ಲಿ ಅಬ್ದುಲ್ ರೆಹಮಾನ್ ಎಂಬ ಬೀಡಿ ಕೆಲಸಗಾರನ ಮನೆಯಲ್ಲಿಯೇ ಪಕ್ಷದ ಸಭೆಯನ್ನು ರಾತ್ರಿ ನಡೆಸುವ ಪರಿಪಾಠವಿತ್ತು. ನಾನು ಆಗ ಹನಿಡ್ಯೂ ಸಿಗರೇಟು ಸೇದುತ್ತಿದ್ದೆ. ಮೀಟಿಂಗ್ ಇದ್ದಾಗ ಅಥವಾ ಊಟಕ್ಕಾಗಲೀ ಸಹಜವಾಗಿಯೇ ಅವರ ಮನೆಗೆ ಹೋದಾಗ ಹನಿಡ್ಯೂ ಸಿಗರೇಟು ತರಿಸುತ್ತಿದ್ದರು. ಅವರ ಮನೆ ಸುತ್ತ ಒಬ್ಬಿಬ್ಬರು ನಮ್ಮ ವಿರೋಧಿಗಳು ಇದ್ದರು. ಒಂದು ದಿವಸ ರಾತ್ರಿ 10 ಗಂಟೆ ಸುಮಾರಿಗೆ ನಾವು ಊಟ ಮುಗಿಸಿ ಮೀಟಿಂಗ್ ನಡೆಸುತ್ತಿದ್ದಾಗ ಪೊಲೀಸರು ಆ ಮನೆಯನ್ನು ಸುತ್ತುವರಿದ ಸುದ್ದಿ ಬಂತು. ಅದಕ್ಕಿಂತ ಮುಂಚೆ ಎರಡು ಮೂರು ಸಲ ನಾನು ಪೋಲೀಸರಿಂದ ತಪ್ಪಸಿಕೊಂಡಿದ್ದರಿಂದ ಈ ಸಲ ಪೊಲೀಸರು ಸರ್ವ ಸಿದ್ಧತೆಯಲ್ಲಿಯೇ ಬಂದಿದ್ದರು. ನಾಲ್ಕೈದು ಜೀಪುಗಳು ಮತ್ತು ವ್ಯಾನುಗಳು, ಹಗ್ಗಗಳು, ಉದ್ದದ ವಿದ್ಯುತ್ ಬ್ಯಾಟರಿ, ಪಿಸ್ತೂಲು-ಬಂದೂಕುಗಳಿಂದ ಸಜ್ಜಾಗಿಯೇ ಬಂದಿದ್ದರು. ಆಗ ಜೋರಾಗಿ ಮಳೆ ಸುರಿಯುತ್ತಿತ್ತು. ನನ್ನನ್ನು ರಕ್ಷಿಸುವ ಕುರಿತು ಗಂಭೀರವಾದ ಚರ್ಚೆ ನಡೆಯಿತು. ಅಂದಿನ ಭಾರಿ ಮಳೆಯಿಂದ ಮನೆ ಹಿಂದಿನ ಗೋಡೆ ಸ್ವಲ್ಪ ಕುಸಿದು ಬಿದ್ದಿತ್ತು. ಅಲ್ಲಿಂದ ಜಿಗಿದು ಹೋಗಬಹುದೇ ಎಂಬ ವಿಚಾರ ಮಾಡಲಾಯಿತು. ಆದರೆ ಪೊಲೀಸರು ಬ್ಯಾಟರಿ ಲೈಟಿನಿಂದ ಮೂರು ರಸ್ತೆಗಳ ಮೇಲೆ ಬೆಳಕು ಬೀರಿದ್ದರು. ಯಾವ ರಸ್ತೆಯಿಂದ ಎಲ್ಲಿಗೆ ಹೋಗಬಹುದೆಂಬ ಚರ್ಚೆ ನಡೆಯಿತು. ಪೇಟೆಯತ್ತ ಹೋಗುವಂತಿಲ್ಲ, ಸಿಕ್ಕಿ ಬೀಳಬಹುದು. ಉಳಿದೆರಡು ರಸ್ತೆಗಳಲ್ಲಿ ನಮ್ಮ ಪರಿಚಿತರಿಲ್ಲ. ಆದ ಕಾರಣ ಸೋಲಾಪುರ ರಸ್ತೆಯಲ್ಲಿ ಹೋಗಬೇಕು. ಎರಡೂವರೆ ಫರ್ಲಾಂಗ್ ದೂರದಲ್ಲಿ ಇರುವ ಸಿದ್ದೇಶ್ವರ ವಿದ್ಯಾರ್ಥಿ ಬೋರ್ಡಿಂಗ್‌ಗೆ ಹೋಗಬೇಕೆಂದು ನಿರ್ಧರಿಸಲಾಯಿತು. ಸುರಿಯುವ ಮಳೆಯಲ್ಲಿ ಇಬ್ಬರು ಬೀಡಿ ಕೆಲಸಗಾರರು ನನ್ನನ್ನು ಗೋಡೆ ಜಿಗಿಸಿದರು. ತಾವಿಬ್ಬರೂ ಮುಂದೆ ಹೋಗಿ ಮೂತ್ರ ಮಾಡುವಂತೆ ನಟಿಸಿದರು. ಅಷ್ಟೊತ್ತಿಗೆ ನಾನು ಬಹುದೂರ ಹೋದೆ. ಎರಡು ಫರ್ಲಾಂಗ್ ದೂರ ಹೋದ ನಂತರ ಕೋಟೆಯ ಕಂದಕ ದಾಟಬೇಕಿತ್ತು. ಮಳೆ ನೀರಿನಿಂದ ಭೋರ್ಗರೆಯುತ್ತಿತ್ತು. ಕತ್ತಲೆಯಲ್ಲಿ ಕಂದಕ ದಾಟುವುದಕ್ಕೆ ಅಂಜಿದೆ. ನಿರ್ವಾಹವಿಲ್ಲದೆ ದಾಟಿ ವಿದ್ಯಾರ್ಥಿ ಬೋರ್ಡಿಂಗ್ ಸೇರಿದೆ. ಬೋರ್ಡಿಂಗ್‌ನಲ್ಲಿ ವಿದ್ಯಾರ್ಥಿಗಳ ಜೊತೆಯಲ್ಲಿ ರಾತ್ರಿ ತಂಗಿದೆ. ಗಂಭೀರ ಪರಿಸ್ಥಿತಿ ಉದ್ಭವಿಸಿದಾಗ ಅದರಿಂದ ತಪ್ಪಿಸಿಕೊಳ್ಳುವಷ್ಟು ಬುದ್ಧಿವಂತಿಕೆ ಎಲೆ ತಂಬಾಕು ಸುತ್ತುವ ಬೀಡಿ ಕೆಲಸಗಾರರ ತಲೆಯಲ್ಲಿ ಎಲ್ಲಿಂದ ಬರಬೇಕಪ್ಪ, ಅದೆಲ್ಲಾ ಸುಶಿಕ್ಷಿತರಿಗೆ ವಿದ್ಯಾವಂತರಿಗಷ್ಟೇ ಮೀಸಲಿಟ್ಟಿದ್ದು ಎಂದು ಬಹಳ ಮಂದಿಯ ತಿಳುವಳಿಕೆ. ಆದರೆ ಅಂದು ರಾತ್ರಿ ಪೊಲೀಸರೆಲ್ಲಾ ಸಜ್ಜಾಗಿ ಮನೆ ಸುತ್ತುವರಿದಾಗ ಅವರಿಂದ ನನ್ನನ್ನು ತಪ್ಪಿಸಿದ ಕ್ರಮ ಯಾರನ್ನಾದರೂ ದಂಗು ಬಡಿಸಬಹುದಾಗಿದೆ. ಸ್ವಲ್ಪ ರಾಜಕೀಯವನ್ನು ಮಾರ್ಕ್ಸ್‌ವಾದವನ್ನು ಅರಗಿಸಿಕೊಂಡ ಕಾರ್ಮಿಕ ತನ್ನ ಬುದ್ಧಿಯನ್ನು ಚುರುಕುಗೊಳಿಸಿ ಸರಿಯಾದ ನಿರ್ಣಯಕ್ಕೆ ಬರುತ್ತಾನೆ, ಅಂಥ ಶಕ್ತಿ ಅವನಲ್ಲಿದೆ ಎಂಬ ವಿಷಯ ಈ ಘಟನೆಯಿಂದ ಸ್ಪಷ್ಟವಾಗುತ್ತದೆ.

ಸಫ್ದರ್ ಹಶ್ಮಿಯವರ ನಾಲ್ಕು ಮಕ್ಕಳ ನಾಟಕಗಳು

ಬೇಂದ್ರೆಯವರ 'ಕರಡಿಯ ಕುಣಿತ' ಎಂಬ ಒಂದು ಕವನ ಉಂಟು. ಅದನ್ನು ಮಕ್ಕಳ ಕವನ ಎಂದು ಬರೆದರಂತೆ. ಆದರೆ ಅದು ಮಕ್ಕಳ ಕವನವೇ? ಎಂದು ಪ್ರಶ್ನಿಸಿದರೆ ತಪ್ಪೇನೂ ಅಲ್ಲ. ಅದರ ದೊಡ್ಡವರ ಕವನವೂ ಹೌದು. ಅಲ್ಲಿಯ ಕಲೆಗಾರಿಕೆಯನ್ನು ಒಟ್ಟಂದದ ಧ್ವನಿಯನ್ನು ದೊಡ್ಡವರು ಹೌದಲ್ಲ! ಎಂದು ಸವಿಯಬಹುದು. ಹಾಗೆ ಹಶ್ಮಿಯವರೂ ದೊಡ್ಡ ಕಲಾವಿದರು. ಅವರ ಮಕ್ಕಳ ನಾಟಕಗಳು ಅವರ ಕಲಾವಂತಿಕೆಗೆ ಸಾಕ್ಷಿಯಾಗಿದೆ.



ಹಶ್ಮಿಯವರು ಎರಡು ಅಂಶಗಳಲ್ಲಿ ಹೊಸತನ ಮೆರೆದಿದ್ದಾರೆ. ಒಂದು, ಮಕ್ಕಳ ಮನೋವೈಜ್ಞಾನಿಕತೆಯ ಗ್ರಹಿಕೆಯಲ್ಲಿ. ಮಕ್ಕಳೆಂದರೆ ಮುಗ್ಧರು. ನಾವು ಬಹಳ ಸೌಮ್ಯವಾದ, ಬಹಳ ಸಂಭಾವಿತವಾದ ಸಂಗತಿಯನ್ನು ಮಾತ್ರ ಅವರ ಮುಂದೆ ಇಡಬೇಕು. ಮುಂದಿನ ಬದುಕಿಗೆ ಬುತ್ತಿಯಾಗ ಬೇಕಾದಂತ (ಹಳೆಯ) ಉಪದೇಶವನ್ನು ನೀಡಬೇಕು ಎಂಬುದು ನಮ್ಮ ಮಕ್ಕಳ ಸಾಹಿತ್ಯದ ಒಂದು ಸಿದ್ಧಾಂತ. ಆದರೆ ಹಶ್ಮಿಯವರ ವಿಚಾರ ಬೇರೆ. ಅವರ ವಿಚಾರದಲ್ಲಿ ಮಗು ಮುಗ್ಧ ಮುದ್ದೆಯಲ್ಲ. ಅದು ವರ್ತಮಾನವನ್ನು ಅಷ್ಟೇ ಚುರುಕಾಗಿ ಗ್ರಹಿಸಬಲ್ಲದು. ಆ ವಿಷಯದಲ್ಲಿ ಮಡಿವಂತಿಕೆ ಬೇಡ. ಬಣ್ಣ ಬದಲಿಸುವವರು ನಾಟಕದಲ್ಲಿ ನಿಚ್ಚಳಗೊಳಿಸುತ್ತಾರೆ.

ಎರಡನೆಯದು ಮಕ್ಕಳ ಸಾಹಿತ್ಯ ಎಂದರೆ ಅಂದ ಚೆಂದವಾಗಿದ್ದರೆ ಸಾಕು. ಅಯ್ಯೋ! ಉಪದೇಶ ಬೇಡ ಎನ್ನುವುದು ಕೂಡ ಸಾಹಿತ್ಯದ ಒಂದು ಗ್ರಹಿಕೆಯೇ. ಆದರೆ ಹಶ್ಮಿಯವರು ಪ್ರತಿಯೊಂದು ನಾಟಕದಲ್ಲೂ ಒಂದೊಂದು ನೀತಿಯನ್ನು ಹುದುಗಿಸಿಟ್ಟಿರುತ್ತಾರೆ. ಬಲು ಬಣ್ಣದ ಲೋಕವಯ್ಯ, ರಾಜನ ಹುಡುಕಾಟದಲ್ಲಿ ಇದನ್ನು ಕಾಣಬಹುದು. 'ಬಣ್ಣದ ಲೋಕವಯ್ಯ' ವನ್ನು ನಾವು ಓದುವಾಗ ಅಥವಾ ರಂಗದ ಮೇಲೆ ಅದನ್ನು ನೋಡುವಾಗ ನಮ್ಮ ಮೂಲಭೂತವಾದಿಗಳ ಜಗಳ ಪ್ರತ್ಯಕ್ಷವಾಗುವುದಿಲ್ಲವೇ? 'ರಾಜನ ಹುಡುಕಾಟ'ದಲ್ಲಿ ಚುನಾವಣೆಯಲ್ಲಿ ಎಂಥವರನ್ನು ಆರಿಸಬೇಕೆಂದೆ, ಅಥವಾ ಒಂದು ಸಮಾಜವಾದಿ ಸಮಾಜದ ಕಡೆಗೆ ತುಡಿಯುವ ಲವಲವಿಕೆ ಕಾಣುವುದಿಲ್ಲವೇ? ಜೀವ ಸರಪಳಿಯ ತತ್ವವೂ ಇಲ್ಲಿದೆ.

> **ಸಫ್ದರ್ ಹಶ್ಮಿಯವರ ಕನ್ನಡ ನಾಟಕಗಳು**
> (ಐದು ನಾಟಕಗಳು)
> ಅನು: ಡಾ.ಕಾಶೀನಾಥ ಅಂಬಲಗೆ
> ಪ್ರಗತಿ ಪ್ರಕಾಶನ
> ಜಯನಗರ,
> ಕಲಬುರ್ಗಿ - 585 105
> ಬೆಲೆ : 65 ರೂ.
> ವರ್ಷ 2002

ಆದರೆ 'ಗಪ್‌ಚಿಪ್', ಮಕ್ಕಳು ಆಟವನ್ನು ಉಪದೇಶಿಸುವಾಗ ಗ್ರಹಿಸ ಬೇಕಾಗಲೇ ಇಲ್ಲ. ಆದು ಉಪದೇಶವು ಅಲ್ಲ. ಅದು ಕಲೆ. ನೋಡಿದರೆ ನೀರು. ಕುಡಿದರೆ ಸಿಹಿ. ಇದರಿಂದ ಸಕ್ಕರೆ ಕಣವನ್ನು ಬೇರ್ಪಡಿಸಲು ಸಾಧ್ಯ. ಇದು ಮಕ್ಕಳ ಮನಸ್ಸಿಗೆ ಸಿಕ್ಕುವ ಸಹ ಸಂಸ್ಕಾರ. ಇಲ್ಲಿ ಉಪದೇಶ ಇದ್ದು ಇಲ್ಲದ್ದು ಇಲ್ಲವಾಗಿ ಇದ್ದದ್ದು.

ಇಲ್ಲಿಯ ಯಾವುದೇ ನಾಟಕ ತೆಗೆದುಕೊಳ್ಳಿ ಇಡೀ ನಾಟಕ ಭೌತಿಕವಾಗೇ ಕ್ರಿಯಾಶೀಲವಾಗಿರುತ್ತದೆ. ಸಂಭಾಷಣೆ ಲವಲವಿಕೆಯಿಂದ ಕೂಡಿದೆ. ಮಕ್ಕಳನ್ನು ಭಾವನೆಯ ವಿಮಾನ ಹತ್ತಿಸಿ ಆಕಾಶದಲ್ಲಿ ವಿಹಾರಕ್ಕೆ ಕರೆದುಕೊಂಡು ಹೋದಂತೆ ನಗೆ, ಚೇಷ್ಟೆ, ಲಹರಿ ಎಲ್ಲಿಯು ಜಡವೇಂಬುದಿಲ್ಲ. ಎಲ್ಲಿಯೂ ಭಾರ ಎಂಬುದಿಲ್ಲ. ಎಲ್ಲ ಕ್ರಿಯೆಗಳು ನಾಟಕೀಯತೆ.

ಹಶ್ಮಿ ಕನಸಿನ ಪ್ರಪಂಚದಿಂದ ಕೂಡಲೇ ವರ್ತಮಾನದ ನೈಜ(ನೀಚತನ?)ದ ಮಧ್ಯೆ ನಿಲ್ಲಿಸಿ ಬಿಡುತ್ತಾರೆನ್ನುವುದು ರಾಜನ ಹುಡುಕಾಟದಲ್ಲಿ ನರಿ ಕಾಡಿನಲ್ಲಿ ಆಹಾರಕ್ಕಾಗಿ ಪ್ರಾಣಿಗಳ ಕೊರತೆ ಇದೆ ಎಂದು ಹೇಳುತ್ತ ಮಧ್ಯ ಪ್ರಾಣಿಗಳನ್ನು ಇಂಪೋರ್ಟ್‌ನ ಮಾಡಿಕೊಳ್ಳ ಬೇಕು ಎಂದು ಹೇಳಿಕೆಯಲ್ಲಿ ಇಂಪೋರ್ಟ್ ಶಬ್ದವೊಂದು ಕನಸಿನ ವರ್ತಮಾನದ ಮೂಗನೇಣನ್ನಾಗಿ ಪರಿವರ್ತಿಸುತ್ತಾರೆ. ಅದೇ ಶಿಲ್ಪಿಯಲ್ಲಿ ಇಂಗ್ಲಿಷ್ ಶಬ್ದದ ಬಳಕೆ ಜಾಸ್ತಿಯಾಯ್ತು ಎನ್ನಿಸುತ್ತದೆ, ದಿಲ್ಲಿಯದೆ ವಾತಾವರಣ ಇದ್ದರೂ. ಅನುವಾದದಲ್ಲಿ ನಾಟಕ ಹೊಸದಾಗಿ ಮೈ ತಳೆದಿದೆ. ತುಂಬಾ ಲವಲವಿಕೆಯಿಂದ ಕೂಡಿ ಹೃದ್ಯವಾಗಿದೆ. ಸಮರ್ಥವಾದ ಭಾಷೆಯಲ್ಲಿ ರೂಪುತಳೆದಿದೆ. ಹೀಗಾಗಿ ಕೂಟದ ಮಕ್ಕಳ ನಾಟಕಗಳಲ್ಲಿ ಇದು ವೈಶಿಷ್ಟ್ಯ ಪೂರ್ಣವಾದ ಕೃತಿಯಾಗಿದೆ.

ಇಂದಿಗಾಗಿ ನಾಳಿನ ಕಾರ್ಯಕ್ರಮಗಳು

ಡಿಸೆಂಬರ್ 22, 23, 24-2002
- ಗ್ರಾಮ ಪಂಚಾಯತ್ ನೌಕರರ ರಾಜ್ಯ ಮಟ್ಟದ ತರಬೇತಿ ಶಿಬಿರ ಮುರುಡೇಶ್ವರ - ಉತ್ತರ ಕನ್ನಡ ಜಿಲ್ಲೆ ಡಿಸೆಂಬರ್ 25 - 2002

ಡಿಸೆಂಬರ್ 25-2002
- ಚಾರ್ಲಿಚಾಪ್ಲಿನ್ ಹುಟ್ಟುಹಬ್ಬ ಆಚರಣೆ ಚಾಪ್ಲಿನ್ ನವರ 4 ಸಿನಿಮಾಗಳ ಪ್ರದರ್ಶನ, ಬೆಳಿಗ್ಗೆ 10 ಗಂಟೆಗೆ ತುಮಕೂರು, ಏಶಿಯಾ ಸೋಶಿಯಲ್ ಫೋರಂ

ಡಿಸೆಂಬರ್ 26, 27, 28 - 2002
- ಅಖಿಲ ಭಾರತ ಪ್ಲಾಂಟೇಶನ್ ಕಾರ್ಮಿಕರ ಸಮ್ಮೇಳನ, ಚಿಕ್ಕಮಗಳೂರು

ಬಹಿರಂಗ ಸಭೆ : 28.12.2002
ಅಜಾದ್ ಪಾರ್ಕ್, ಚಿಕ್ಕಮಗಳೂರು
- ಡಿಸೆಂಬರ್ 16 ರಂದು ಹಾಸನದಿಂದ ಜಾಥಾ ಆರಂಭ

(ನಿಮ್ಮ ಪ್ರದೇಶಗಳಲ್ಲಿ ನಡೆಯಲಿರುವ ಪ್ರಮುಖ ಕಾರ್ಯಕ್ರಮ/ ಚಳುವಳಿಗಳ ಬಗ್ಗೆ ಮುಂಚಿತವಾಗಿ ತಿಳಿಸಿರಿ)

ಸಮಾಜದ ಕನ್ನಡಿ ವ್ಯಂಗ್ಯಚಿತ್ರಕಾರ ಅಬು ಇನ್ನಿಲ್ಲ

ಜಾಗತೀಕರಣ ಹಾಗೂ ಕೋಮುವಾದದ ಪ್ರಬಲ ವಿರೋಧಿಯಾಗಿದ್ದ, ವ್ಯಂಗ್ಯಚಿತ್ರಗಳ ಮೂಲಕ ಈ ಎರಡೂ ಸಮಸ್ಯೆಗಳ ಬಗ್ಗೆ ಬೆಳಕು ಚೆಲ್ಲುತ್ತಿದ್ದ ಖ್ಯಾತ ವ್ಯಂಗ್ಯಚಿತ್ರಕಾರ ಅಬು ಅಬ್ರಹಾಂ ಇನ್ನಿಲ್ಲ.

ಹಾಸ್ಯದ ಮೂಲಕವೇ ಸಮಾಜದ ಸಮಸ್ಯೆಗಳಿಗೆ ವ್ಯಂಗ್ಯಚಿತ್ರಗಳು ಚಿಕಿತ್ಸೆ ನೀಡುತ್ತವೆ. ನಕ್ಕುನಗಿಸುತ್ತಲೇ ಸಮಾಜದ ದುರಂತವನ್ನು ಬಣ್ಣಿಸಿ ಹೇಳುತ್ತಿದ್ದ ಚಾರ್ಲಿಚಾಪ್ಲಿನ್ ಚಿತ್ರಗಳಂತೆ ವ್ಯಂಗ್ಯಚಿತ್ರಗಳು ನಗುವಿನ ಮೂಲಕ ದುಃಖದ ಕಥೆಗಳನ್ನು ಬಿಡಿಸಿಡುತ್ತದೆ. ಅಬು ಅಬ್ರಹಾಂ ಸ್ಪಷ್ಟ ರಾಜಕೀಯ ನಿಲುವಿದ್ದ ಅಪರೂಪದ ವ್ಯಂಗ್ಯ ಚಿತ್ರಕಾರರಾಗಿದ್ದರು. ಮಾತ್ರವಲ್ಲ, ಕೋಮುವಾದ ಹಾಗೂ ಜಾಗತೀಕರಣದ ದುಷ್ಪರಿಣಾಮಗಳ ಬಗ್ಗೆ ದನಿ ಎತ್ತಿ ಮಾತನಾಡಿದ್ದರು. ವ್ಯಂಗ್ಯಚಿತ್ರ ಮಾತ್ರವಲ್ಲದೆ ಹಲವು ಬರಹಗಳ ಮೂಲಕ ಸಮಸ್ಯೆಯ ಮಂಥನ ನಡೆಸಿದ್ದರು.

> **ಅಬು ಅಬ್ರಹಾಂ ಸ್ಪಷ್ಟ ರಾಜಕೀಯ ನಿಲುವಿದ್ದ ಅಪರೂಪದ ವ್ಯಂಗ್ಯಚಿತ್ರಕಾರರಾಗಿದ್ದರು. ಮಾತ್ರವಲ್ಲ, ಕೋಮುವಾದ ಹಾಗೂ ಜಾಗತೀಕರಣದ ದುಷ್ಪರಿಣಾಮಗಳ ಬಗ್ಗೆ ದನಿ ಎತ್ತಿ ಮಾತನಾಡಿದ್ದರು.**

ಕೇರಳದ ತಿರುವಲ್ಲದಲ್ಲಿ ಜನಿಸಿದ ಅಬು ಅಬ್ರಹಾಂ 'ಬಾಂಬೆ ಕ್ರಾನಿಕಲ್' ಪತ್ರಿಕೆಯಲ್ಲಿ ಪತ್ರಕರ್ತರಾಗಿ ಸೇರಿ ನಂತರ ವ್ಯಂಗ್ಯ ಚಿತ್ರಕಾರರಾಗಿ ಬದಲಾದರು. ಸರಳರೇಖೆ, ಸ್ಪಷ್ಟ ಚಿಂತನೆ ಇವರಿಗೆ ಯಶಸ್ಸು ತಂದು ಕೊಟ್ಟಿತು. ಲಂಡನ್‌ಗೆ ತೆರಳಿದ ಅಬು ಅಲ್ಲಿನ ಮೂರು ಖ್ಯಾತ ಪತ್ರಿಕೆಗಳಾದ ದಿ ಟ್ರಿಬ್ಯೂನ್, ದಿ ಅಬ್ಸರ್ವರ್, ದಿ ಗಾರ್ಡಿಯನ್ ಪತ್ರಿಕೆಯಲ್ಲಿ ವ್ಯಂಗ್ಯಚಿತ್ರ ಬರೆದರು. ಮತ್ತೆ ಭಾರತಕ್ಕೆ ಮರಳಿ ಹಲವು ಪತ್ರಿಕೆಗಳಿಗೆ ವ್ಯಂಗ್ಯಚಿತ್ರ ಅಂಕಣಕಾರರಾಗಿದ್ದರು.


ಭಾರತದಲ್ಲಿ ವಿದೇಶಿ ಪತ್ರಿಕೆಗಳಿಗೆ ಅವಕಾಶ ನೀಡಬೇಕೆಂಬ ಮೊದಲ ಚರ್ಚೆ ಎದ್ದಾಗ ಅಬು ಅಬ್ರಹಾಂ ತಮ್ಮ ಅನೇಕ ಬರಹಗಳ ಮೂಲಕ ಇದನ್ನು ಕಟುವಾಗಿ ವಿರೋಧಿಸಿದ್ದರು. ಲಂಡನ್‌ನಲ್ಲಿ ಇವರು ಕಂಡ ಪತ್ರಿಕಾಲೋಕ ಇವರಿಗೆ ವಿದೇಶಿ ಪತ್ರಿಕೆಯನ್ನು ವಿರೋಧಿಸಲು ಇರುವ ಕಾರಣವನ್ನು ಸ್ಪಷ್ಟ ಮಾಡಿತ್ತು. ಜಾಗತೀಕರಣ, ಮುಕ್ತ ಆರ್ಥಿಕ ನೀತಿ, ಮಾಹಿತಿ ವಿತರಣೆ, ಮುಕ್ತ ಆಲೋಚನೆ ಹೆಸರಿನಲ್ಲಿ ನಾವು ನಮ್ಮ ನಾಲ್ಕನೆಯ ಆಸ್ತಿಯನ್ನು ನಾಲ್ಕನೇ ದರ್ಜೆಯ ಜನರ ಕೈಗೆ ಒಪ್ಪಿಸಬೇಕೆ? ಎಂದು ಪ್ರಶ್ನಿಸಿದರು.

"ವಿದೇಶಿ ಪತ್ರಿಕಾಸಂಸ್ಥೆಗಳಿಗೆ ಭಾರತ ಪ್ರವೇಶಿಸಲು ಅವಕಾಶ ನೀಡಬೇಕೆಂದು ವಾದ ಮಾಡುವವರಿಗೆ ಬ್ರಿಟಿಷ್ ಪತ್ರಿಕೋದ್ಯಮ ಯಾವ ಸ್ಥಿತಿ ತಲುಪಿದೆ ಎಂಬುದನ್ನೇ ಅಧ್ಯಯನ ಮಾಡಲು ನಾನು ಸಲಹೆ ಮಾಡುತ್ತೇನೆ".

"ಪ್ರಸಾರ ಮತ್ತು ಜಾಹೀರಾತಿಗಾಗಿ ಅಲ್ಲಿ ಎಂತಹ ಸ್ಪರ್ಧೆ ನಡೆದಿದೆ ಎಂದರೆ ಎಲ್ಲಾ ಪತ್ರಿಕೆಗಳೂ ಗಂಭೀರ ಸುದ್ದಿ ಮತ್ತು ವಿಶ್ಲೇಷಣೆ ನೀಡುವುದರ ಬದಲು ಮನರಂಜನೆಯಲ್ಲಿ ಮುಳುಗಿವೆ. ಎಲ್ಲವೂ ಗಂಭೀರತೆಯನ್ನು ಕಳೆದು ಕೊಂಡಿದೆ. ಸಂಪಾದಕೀಯ ಪುಟಗಳು ಕಳೆಗಟ್ಟಿವೆ. ಸಂಪಾದಕೀಯ ಗಳೂ ತಮ್ಮ ಗಟ್ಟಿತನವನ್ನು ಕಳೆದುಕೊಂಡಿದೆ. ಬ್ರಿಟಿಷ್ ಪತ್ರಿಕೋದ್ಯಮದ ಇಂದಿನ ಸ್ಥಿತಿಗೆ ಎಲ್ಲರೂ ಮುರ್ಡೋಕ್‌ನತ್ತಲೇ ಬೊಟ್ಟು ಮಾಡುತ್ತಾರೆ. ಇಂತಹ ಮುರ್ಡೋಕ್‌ಗೆ ಇಲ್ಲಿಗೆ ಬಂದು ಪತ್ರಿಕೆಗಳನ್ನು ಆರಂಭಿಸುವಂತೆ ನಾವು ಆಹ್ವಾನ ನೀಡಬೇಕೆ? ಎಲ್ಲರನ್ನೂ ಆಘಾತ ಗೊಳಿಸುವಂತೆ ಆತ ಭಾರತದ ಪತ್ರಿಕೆಗಳ ರೀತಿಯನ್ನೇ ಬದಲಿಸಿ ಬಿಡುತ್ತಾನೆ. ಮ್ಯಾಕ್ಡೋನಾಲ್ಡ್ ತನ್ನ ಹ್ಯಾಂಬರ್ಗರ್‌ಗಳನ್ನು ಮಾರಾಟ ಮಾಡುವಂತೆ ಆತ ಪತ್ರಿಕೆಗಳನ್ನು ಮಾರುತ್ತಾನೆ".

ಜಾಗತೀಕರಣದ ತಾಳಕ್ಕೆ ಕುಣಿಯುತ್ತಾ ಇರುವ ಭಾರತಕ್ಕೆ ಒಂದು ಎಚ್ಚರಿಕೆಯ ಗಂಟೆಯಾಗಿದ್ದ ಅಬು ಈಗ ಇಲ್ಲ.

- ಕಿನಾರೆ



PRB DECR 319-79/79 AIKYARANGA WEEKLY Reg. No. 17015/64 CPM(G)/KA/BGS-119/2002
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಜಿ.ಎನ್.ನಾಗರಾಜು
ಸಂಪಾದಕರು: ಎಸ್.ವೈ.ಗುರುಶಾಂತ್ ಸಂಪಾದಕೀಯ ಕಛೇರಿ: ನಂ. 12, 1ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು.
Printed & Published by Communist Party of India(Marxist), Karnataka State Committee. Editor: S.Y.GURUSHANTH